# ಸಮಾಜವಿಜ್ಞಾನ I

# SOCIAL SCIENCE I

## ತರಗತಿ IX

## STANDARD IX

ಭಾಗ 1

PART -1

ಕೇರಳ ಸರಕಾರ

GOVT OF KERALA

ಶಿಕ್ಷಣ ಇಲಾಖೆ

Education Department

ರಾಜ್ಯಶಿಕ್ಷಣ ಸಂಶೋಧನೆ ಮತ್ತು ತರಬೇತಿ ಸಮಿತಿ (SCERT), ಕೇರಳ

2016

State Council of Educational Research and Training (SCERT) Kerala 2016

## ರಾಷ್ಟ್ರಗೀತೆ

ಜನಗಣಮನ ಅಧಿನಾಯಕ ಜಯ ಹೇ
ಭಾರತ ಭಾಗ್ಯವಿಧಾತಾ,
ಪಂಜಾಬ ಸಿಂಧು ಗುಜರಾತ ಮರಾಠಾ
ದ್ರಾವಿಡ ಉತ್ಕಲ ವಂಗ,
ವಿಂಧ್ಯಹಿಮಾಚಲ ಯಮುನಾ ಗಂಗಾ,
ಉಚ್ಛಲ ಜಲಧಿತರಂಗ,
ತವಶುಭ ನಾಮೇ ಜಾಗೇ,
ತವಶುಭ ಆಶಿಶ ಮಾಗೇ,
ಗಾಹೇ ತವ ಜಯ ಗಾಥಾ
ಜನಗಣಮಂಗಲದಾಯಕ ಜಯ ಹೇ
ಭಾರತ ಭಾಗ್ಯ ವಿಧಾತಾ,
ಜಯಹೇ, ಜಯಹೇ, ಜಯಹೇ,
ಜಯ ಜಯ ಜಯ ಜಯಹೇ!

## ಪ್ರತಿಜ್ಞೆ

ಭಾರತವು ನನ್ನ ದೇಶ, ಭಾರತೀಯರೆಲ್ಲರೂ ನನ್ನ ಸಹೋದರ, ಸಹೋದರಿಯರು.

ನಾನು ನನ್ನ ದೇಶವನ್ನು ಪ್ರೀತಿಸುತ್ತೇನೆ. ಅದರ ಸಂಪನ್ನ ಹಾಗೂ ವೈವಿಧ್ಯಪೂರ್ಣವಾದ ಪರಂಪರೆಗೆ ನಾನು ಹೆಮ್ಮೆಪಡುತ್ತೇನೆ.

ನಾನು ನನ್ನ ಹೆತ್ತವರನ್ನು ಮತ್ತು ಗುರುಹಿರಿಯರನ್ನು ಗೌರವಿಸುತ್ತೇನೆ.

ನಾನು ನನ್ನ ದೇಶ ಮತ್ತು ನನ್ನ ದೇಶದ ಜನರಿಗೆ ನನ್ನ ಶ್ರದ್ಧೆಯನ್ನು ಮುಡಿಪಾಗಿಡುತ್ತೇನೆ. ಅವರ ಕ್ಷೇಮ ಮತ್ತು ಸಮೃದ್ಧಿಯಲ್ಲೇ ನನ್ನ ಆನಂದವಿದೆ.

**State Council of Educational Research and Training (SCERT)**
Poojappura, Thiruvananthapuram 695 012, Kerala

*Website* : www.scertkerala.gov.in
*e-mail* : scertkerala@gmail.com
Phone : 0471 - 2341883, Fax : 0471 - 2341869
Typesetting and Layout : SCERT
Printed at : KBPS, Kakkanad, Kochi-30
© Department of Education, Government of Kerala

ಪ್ರೀತಿಯ ಮಕ್ಕಳೇ,

ಸಮಾಜದ ವಿಕಾಸ ಮತ್ತು ಮನುಷ್ಯನ ಸರ್ವತೋಮುಖ ಅಭಿವೃದ್ಧಿಯು ಸಮಾಜವಿಜ್ಞಾನ ಕಲಿಕೆಯ ಮುಖ್ಯ ಗುರಿ. ಸಾಮಾಜಿಕ ಜೀವನವನ್ನು ಮತ್ತು ವಿದ್ಯಮಾನವನ್ನು ಸಮಗ್ರವಾಗಿ ಮತ್ತು ವಸ್ತುನಿಷ್ಠವಾಗಿ ವಿಶ್ಲೇಷಿಸಲು ಸಮಾಜವಿಜ್ಞಾನವು ಅತಿ ಅಗತ್ಯವಾಗಿ ಕಲಿಯಬೇಕಾಗಿದೆ. ಸಮಾಜವಿಜ್ಞಾನವನ್ನು ಕಲಿಯುವುದರಿಂದ ಘಟನೆ ನಡೆದ ಸ್ಥಳ, ವಿಷಯದ ಕಾರ್ಯ-ಕಾರಣ ಸಂಬಂಧ, ವೈಜ್ಞಾನಿಕ ಮನೋಭಾವ, ಜೀವನ ಮೌಲ್ಯಗಳು, ದೂರದೃಷ್ಟಿ ಮೊದಲಾದುವುಗಳ ಕುರಿತು ತಿಳಿದಂತಾಗುತ್ತದೆ. ಚರಿತ್ರೆ, ರಾಜಕೀಯಶಾಸ್ತ್ರ, ಸಮಾಜಶಾಸ್ತ್ರ ಮೊದಲಾದ ಕವಲುಗಳಾಗಿ ವಿಭಾಗಗಳಾಗುತ್ತಿದ್ದರೂ ಸಂಯೋಜನೆಯ ಸಾಧ್ಯತೆಗಳು ಮತ್ತು ವಲಯಗಳನ್ನು ಗಣನೆಗೆ ತೆಗೆದುಕೊಂಡು ಈ ಪಾಠಪುಸ್ತಕವನ್ನು ತಯಾರಿಸಲಾಗಿದೆ.

ಮಧ್ಯಕಾಲ ಪ್ರಪಂಚ, ಭಾರತ ಮತ್ತು ಕೇರಳಗಳ ಒಂದು ಸಮಗ್ರ ಚಿತ್ರಣವನ್ನು ಚರಿತ್ರೆಯ ಪಾಠಗಳಿಂದ ತಿಳಿಯಬಹುದು. ಪ್ರಪಂಚದ ಅತಿ ದೊಡ್ಡ ಪ್ರಜಾಪ್ರಭುತ್ವ ದೇಶದ ಪೌರನೆಂಬ ನೆಲೆಯಲ್ಲಿ ಮೂಲಭೂತ ಹಕ್ಕುಗಳ ಪ್ರಾಧಾನ್ಯ ಮತ್ತು ಅನಿವಾರ್ಯತೆಯನ್ನು ರಾಜಕೀಯ ಶಾಸ್ತ್ರದ ಪಾಠಗಳು ಸ್ಪಷ್ಟಪಡಿಸುತ್ತದೆ. ಸಾಮಾಜಿಕ ಸಮಸ್ಯೆಗಳು ಮತ್ತು ಅವುಗಳಿಗಿರುವ ಪರಿಹಾರ ಮಾರ್ಗಗಳನ್ನು ಸಮಾಜಶಾಸ್ತ್ರದಲ್ಲಿ ಪ್ರತಿಪಾದಿಸಲಾಗಿದೆ.

ವೈವಿಧ್ಯತೆಯನ್ನು ಗೌರವಿಸಲು, ಸಹಿಷ್ಣುತೆಯಿಂದ ವರ್ತಿಸಲು ಮತ್ತು ಮನುಷ್ಯರಂತೆ ಎಲ್ಲ ಜೀವಿಗಳಿಗೂ ಈ ಭೂಮಿ ಎಂಬ ದೃಷ್ಟಿಕೋನವನ್ನು ತಲುಪಲು ಸಮಾಜವಿಜ್ಞಾನದ ಈ ಪಾಠಪುಸ್ತಕವು ನಿಮಗೆ ಸಹಾಯಕವಾಗುತ್ತದೆ.

ಪ್ರೀತಿಪೂರ್ವಕ ಶುಭಾಶಯಗಳೊಂದಿಗೆ

**ಡಾ. ಪಿ.ಎ. ಫಾತಿಮ**
ಡೈರೆಕ್ಟರ್
ಎಸ್.ಸಿ.ಇ.ಆರ್.ಟಿ. ಕೇರಳ

# TEXT BOOK DEVELOPMENT COMMITTEE

**Abdul Aziz**
V.P.K.M.M. H.S.S. Puthur Pallikkal, Malappuram
**Abhilash Kumar K.G.**
Devadhar Govt. H.S.S. Thanur, Malappuram
**Amar**
H.S.S. , Muttannur, Kannur
**Jayakrishnan O.K.**
K.P.C.. H.S.S. Pattannur, Kannur
**Jyothish Kumar B.**
M.G. H.S.S. Edathara, Pathanapuram, Kollam
**Pradeepan T.**
G.H.S.S. Kallachi, Kozikode
**Faizal V.**
G.G. H.S.S. Parayancheri, Kozikode
**Prasad V.**
G. H.S.S. Kadamanitta, Pattanamthitta

**Muralidharan Nair**
N.S.S.. H.S.S. Anikode, Kottayam
**Mohammed Musthafa**
D.P.O. Malappuram
**Yousuf Kumar S.M.**
Govt. Model Boys H.S.S. Attingal, Thiruvananthapuram.
**Rathnakaran T.**
G.B. H.S.S., Malappuram
**Haripradeep S.**
S.V.H.S. Pullad, Thiruvalla, Pathanamthitta
**Chithra Madhavan**
Research Officer, SCERT.
**Yahiya P.**
G.G.M.G. H.S.S. Chalappuram, Kozikode
(Prof. Reeding)

## EXPERTS

**Dr. Abdul Razak P.P.**
Associate Professor, Dept of History
P.S.M.O. College, Thirurangadi
**Dr. B. Shobhanan**
Head Dept. of History (Rtd), Kerala University
**Dr. N.P. Hafeez Muhammad**
Co-odinator, Sociology Department,
Calicut Univesity.

**Dr. Vijayalakshmi**
Head, Dept. of History (Rtd) N.S.S. College,
Manjeri, Malappuram
**Dr.V. Kunhali**
Head, Dept of History (Rtd) Calicut Univesity.
**Dr. K.P. Rajesh**
N.S.S. College, Manjeri, Malappuram
**Dr. Sainthalavi**
Malayalam University, Thirur, Malappuram.

## ACADEMIC CO-ORDINATOR

**Manoj K.P. Research Officer, SCERT.**

## KANNADA VERSION PARTICIPANTS

**Sathyanarayana Rao K.V.**
Headmaster, G.H.S. Soorambail
**Saraswathi H.**
H.S.A. S.G.K.H.S. Kudlu
**Suresh P.**
H.S.A. G.H.S.S. Bekur
**Bhanu A.C.**
H.S.A. G.H.S.S. Mulleria

**O.Satheesh Kumar Shetty**
H.S.A. S.D.P.H.S.S. Dharmathadka
**Narayana Bhat M.**
H.S.S.T. (Rtd) N.H.S.S. Peradala
**Aravinda Y.**
H.S.A. S.A.P.H.S.S. Agalpady

## LANGUAGE EXPERTS

**Prof. Shreenath**
Associate Prof. of Kannada (Rtd) Govt. College, Kasaragod

**Dr. Rathnakara Mallamoole**
Asst. Prof of Kannada, Govt. College, Kasaragod.

## CO-ORDINATOR OF TRANSLATION

**Dr. Fiazal Mavulladathil** Research Officer, SCERT, Thiruvananthapuram

ರಾಜ್ಯ ಶಿಕ್ಷಣ ಸಂಶೋಧನೆ ಮತ್ತು ತರಬೇತಿ ಸಮಿತಿ(SCERT)
ವಿದ್ಯಾಭವನ - ಪೂಜಾಪುರ, ತಿರುವನಂತಪುರಂ- 695012

# ಅನುಕ್ರಮಣಿಕೆ


| | | |
|---|---|---|
| 01 | ಮಧ್ಯಕಾಲೀನ ಜಗತ್ತು: ಅಧಿಕಾರ ಕೇಂದ್ರಗಳು | 09 |
| 02 | ಪೌರಾತ್ಯ ಮತ್ತು ಪಾಶ್ಚಾತ್ಯ ವಿನಿಮಯಗಳ ಕಾಲ | 23 |
| 03 | ಭಾರತದ ಸಂವಿಧಾನ : ಹಕ್ಕುಗಳು ಮತ್ತು ಕರ್ತವ್ಯಗಳು | 39 |
| 04 | ಮಧ್ಯಕಾಲೀನ ಭಾರತ : ರಾಜಪ್ರಭುತ್ವ ಮತ್ತು ಆಡಳಿತ ವಿಧಾನ | 53 |
| 05 | ಸಂಪತ್ತು ಮತ್ತು ಸಮಾಜ | 69 |

## ಕಲಿಕೆಯ ಸೌಲಭ್ಯಕ್ಕಾಗಿ ಕೆಲವು ಚಿಹ್ನೆಗಳನ್ನು ಬಳಸಲಾಗಿದೆ


ಹೆಚ್ಚಿನ ಓದಿಗಾಗಿ - ಮೌಲ್ಯಮಾಪನಕ್ಕೆ ಒಳಪಡಿಸಬೇಕಾಗಿಲ್ಲ


ಕಲಿಕೆಯ ಪ್ರಗತಿಯನ್ನು ನಿರ್ಣಯಿಸಲಿಕ್ಕಿರುವ ಪ್ರಶ್ನೆಗಳು


ಚಟುವಟಿಕೆಗಳು


ಪ್ರಧಾನ ಕಲಿಕಾ ಸಾಧನೆಗಳಲ್ಲಿ ಒಳಪಡುವವುಗಳು


ಮೌಲ್ಯನಿರ್ಣಯ ಮಾಡುವ


ಮುಂದುವರಿದ ಚಟುವಟಿಕೆಗಳು

## ಪಾಠಪುಸ್ತಕದ ಕುರಿತು:

**ಒ**ಂಭತ್ತನೇ ತರಗತಿಯ ಸಮಾವಿಜ್ಞಾನ ಪಾಠ ಪುಸ್ತಕದ ಒಂದನೇ ಭಾಗದಲ್ಲಿ ಚರಿತ್ರೆ, ರಾಜ್ಯಶಾಸ್ತ್ರ, ಸಮಾಜಶಾಸ್ತ್ರ ಎಂಬೀ ವಿಷಯಗಳಿಗೆ ಸಂಬಂಧಿಸಿದ ಒಂಭತ್ತು ಅಧ್ಯಾಯಗಳನ್ನು ಪ್ರತಿಪಾದಿಸಲಾಗಿದೆ. ಆರು ಅಧ್ಯಾಯಗಳು ಚರಿತ್ರೆಯ ಪಾಠಭಾಗಗಳನ್ನು, ಎರಡು ಅಧ್ಯಾಯಗಳು ರಾಜ್ಯಶಾಸ್ತ್ರವನ್ನು ಮತ್ತು ಒಂದು ಅಧ್ಯಾಯವು ಸಮಾಜಶಾಸ್ತ್ರವನ್ನು ಒಳಗೊಂಡಿದೆ.

ನಿರಂತರವಾದ ವಿಕಾಸವನ್ನು ದೃಢಪಡಿಸುವ ರೀತಿಯಲ್ಲಿ ಚರಿತ್ರೆಯ ಪಾಠಭಾಗವನ್ನು ಕ್ರಮೀಕರಿಸಲಾಗಿದೆ. ಆರನೇ ತರಗತಿಯಲ್ಲಿ ಮಂಡಿಸಿದ ಮಧ್ಯಕಾಲ ಚರಿತ್ರೆಗೆ ಇನ್ನಷ್ಟು ಹೆಚ್ಚಿನ ವಿಷಯ, ವಾಸ್ತವಿಕತೆ, ಆಶಯಗಳು ಮತ್ತು ಅವುಗಳ ವಿಶ್ಲೇಷಣೆಗಳಿಗೆ ಇಲ್ಲಿ ಪ್ರಾಧಾನ್ಯ ನೀಡಲಾಗಿದೆ. 'ವಿಷಯಾಧಾರಿತ' (Thematic) ಸಮೀಪನದ ಆಧಾರದಲ್ಲಿ ಚರಿತ್ರೆಯ ಘಟನೆಗಳನ್ನು ಸಮಗ್ರವಾಗಿ ಮಂಡಿಸಲು ಪ್ರಯತ್ನಿಸಲಾಗಿದೆ. ಮಧ್ಯಕಾಲ ಜಗತ್ತು, ಮಧ್ಯಕಾಲ ಭಾರತ, ಮಧ್ಯಕಾಲ ಕೇರಳ ಎಂಬ ರೀತಿಯಲ್ಲಿ ಮಧ್ಯಕಾಲ ಜೀವನದ ವಿವಿಧ ಹಂತಗಳನ್ನು ವಿವರವಾದ ವಿಶ್ಲೇಷಣೆಗೆ ಒಳಪಡಿಸಲಾಗಿದೆ.

**ಮಧ್ಯಕಾಲೀನ ಜಗತ್ತು:** ಅಧಿಕಾರ ಕೇಂದ್ರಗಳು ಎಂಬ ಅಧ್ಯಾಯದಲ್ಲಿ ಜಗತ್ತಿನ ವಿವಿಧ ಭಾಗಗಳಲ್ಲಿ ಜಾರಿಯಲ್ಲಿದ್ದ ವಿಭಿನ್ನ ಅಧಿಕಾರ ಕೇಂದ್ರಗಳ ಕುರಿತು ಚರ್ಚಿಸಲಾಗಿದೆ. ವಿವಿಧ ಭೂಖಂಡಗಳಲ್ಲಿ ವ್ಯಾಪಿಸಿರುವ ವಿಭಿನ್ನ ಅಧಿಕಾರದ ರಚನೆಗಳನ್ನು ಒಂದು ಅಧ್ಯಾಯದಲ್ಲಿ ಮಂಡಿಸಲಾಗಿದೆ. ಯುರೋಪನ್ನು ಆಧಾರವಾಗಿಟ್ಟುಕೊಂಡು ಮಧ್ಯಕಾಲವನ್ನು ವಿಶ್ಲೇಷಿಸುವ ರೀತಿಗಿಂತ ಭಿನ್ನವಾಗಿ ಮಧ್ಯಕಾಲ ಜಗತ್ತಿನ ವಿವಿಧ ವಲಯಗಳಲ್ಲಿ ಉಂಟಾದ ಬೆಳವಣಿಗೆ ಮತ್ತು ವಿಕಾಸವನ್ನು ವಸ್ತುನಿಷ್ಠವಾಗಿ ದಾಖಲಿಸಲು ಪ್ರಯತ್ನಿಸಲಾಗಿದೆ.

**ಪೌರಾತ್ಯ ಮತ್ತು ಪಾಶ್ಚಾತ್ಯ:** ವಿನಿಮಯಗಳ ಕಾಲ ಎಂಬ ಅಧ್ಯಾಯದಲ್ಲಿ ವಾಣಿಜ್ಯಗಳ ಪ್ರಗತಿ, ನಗರೀಕರಣ ಮತ್ತು ಮಧ್ಯಕಾಲೀನ ಜಗತ್ತಿನ ವಿವಿಧ ಭಾಗಗಳಲ್ಲಿ ಉಂಟಾದ ಸಾಂಸ್ಕೃತಿಕ ಪ್ರಗತಿಯನ್ನು ವಿವರಿಸಲಾಗಿದೆ. 'ಕತ್ತಲೆಯ ಯುಗ' ಎಂದು ಯುರೋಪಿನ ಚರಿತ್ರೆಗಾರರು ಕರೆಯುತ್ತಿದ್ದ ಮಧ್ಯಕಾಲದ ಪ್ರಕಾಶಮಾನವಾದ ಚರಿತ್ರೆಯನ್ನು ಈ ಪಾಠಭಾಗದಲ್ಲಿ ವಿಶ್ಲೇಷಿಸಲಾಗಿದೆ.

ಅನಂತರದ ಮೂರು ಅಧ್ಯಾಯಗಳಲ್ಲಿ ಮಧ್ಯಕಾಲೀನ ಭಾರತದ ವಿವರವಾದ ಚರಿತ್ರೆಯನ್ನು ಪ್ರತಿಪಾದಿಸಲಾಗಿದೆ.

**ಮಧ್ಯಕಾಲೀನ ಭಾರತ:**ರಾಜಪ್ರಭುತ್ವ ಮತ್ತು ಆಡಳಿತ ವಿಧಾನ ಎಂಬ ಅಧ್ಯಾಯದಲ್ಲಿ ಮಧ್ಯಕಾಲೀನ ಭಾರತದ ಆಡಳಿತರಂಗದ ಸಾಧನೆಗಳನ್ನು ಮತ್ತು ವಿಶೇಷತೆಗಳನ್ನು ವಿಶ್ಲೇಷಿಸಲಾಗಿದೆ.

**ಸಂಪತ್ತು ಮತ್ತು ಸಮಾಜ:** ಎಂಬ ಪಾಠಭಾಗದಲ್ಲಿ ಮಧ್ಯಕಾಲ ಭಾರತದ ಆರ್ಥಿಕ-ಸಾಮಾಜಿಕ ಪ್ರಗತಿಯನ್ನು ದಾಖಲಿಸಲು ಪ್ರಯತ್ನಿಸಲಾಗಿದೆ.

ಮಧ್ಯಕಾಲ ಭಾರತದ ಸಾಂಸ್ಕೃತಿಕ ಸಮನ್ವಯದ ಕುರಿತು **ಸಮನ್ವಯ ಭಾರತ** ದಲ್ಲಿ ಚರ್ಚಿಸಲಾಗಿದೆ. ತತ್ವಚಿಂತನೆಗಳ ಸಮನ್ವಯ ಮತ್ತು ಸಾಂಸ್ಕೃತಿಕ ವಿನಿಮಯ ಸಂಬಂಧಗಳು ಸಾರ್ವತ್ರಿಕವಾದುದು ಹೇಗೆಂದು ಈ ಅಧ್ಯಾಯವು ಸ್ಪಷ್ಟಪಡಿಸುತ್ತದೆ.

ಮಧ್ಯಕಾಲ ಕೇರಳದ ಸಮಗ್ರವಾದ ಜೀವನ ಚರಿತ್ರೆ ಮತ್ತು ಆಧುನಿಕ ಕಾಲದ ಕಡೆಗಿನ ಪ್ರಯಾಣದ ಕುರಿತು **ಎಂಟನೇ ಶತಮಾನದಿಂದ ಹದಿನೆಂಟನೇ ಶತಮಾನದ ವರೆಗಿನ ಕೇರಳ'** ಎಂಬ ಪಾಠಭಾಗದಲ್ಲಿ ವಿಶದೀಕರಿಸಲಾಗಿದೆ.

ಅನಂತರದ ಎರಡು ಅಧ್ಯಾಯಗಳು ರಾಜ್ಯಶಾಸ್ತ್ರದ ಕೆಲವು ಪ್ರಧಾನ ವಲಯಗಳನ್ನು ಮಂಡಿಸುತ್ತದೆ.

**ಭಾರತದ ಸಂವಿಧಾನ:** ಹಕ್ಕುಗಳು ಮತ್ತು ಕರ್ತವ್ಯಗಳು ಎಂಬ ಅಧ್ಯಾಯದಲ್ಲಿ ಸಂವಿಧಾನದಲ್ಲಿರುವ ಮೂಲಭೂತ ಹಕ್ಕುಗಳು, ನಿರ್ದೇಶಕ ತತ್ವಗಳು ಮತ್ತು ಮೂಲಭೂತ ಕರ್ತವ್ಯಗಳ ಕುರಿತು ವಿವರಿಸಲಾಗಿದೆ.

ಪ್ರಜಾಪ್ರಭುತ್ವ ಪ್ರಕ್ರಿಯೆಯಲ್ಲಿ ಚುನಾವಣೆಯ ಪ್ರಾಧಾನ್ಯ ಮತ್ತು ಔಚಿತ್ಯ, ವಿಭಿನ್ನ ಚುನಾವಣಾ ಕ್ರಮಗಳ ಕುರಿತು **'ಚುನಾವಣೆ ಹಾಗೂ ಪ್ರಜಾಪ್ರಭುತ್ವ'** ಎಂಬ ಪಾಠದಲ್ಲಿ ಚರ್ಚಿಸಲಾಗಿದೆ. ಸಮಾಜಶಾಸ್ತ್ರದ ಪ್ರಧಾನ ವಲಯಗಳಲ್ಲಿ ಒಂದಾದ ವಿಭಿನ್ನ ಸಾಮಾಜಿಕ ಸಮಸ್ಯೆಗಳು ಅವುಗಳ ಕಾರಣಗಳು ಮತ್ತು ಪರಿಹಾರೋಪಾಯಗಳ ಕುರಿತು **'ಉತ್ತಮ ಭವಿಷ್ಯಕ್ಕಾಗಿ'** ಎಂಬ ಅಧ್ಯಾಯದಲ್ಲಿ ಪರಾಮರ್ಶಿಸಲಾಗಿದೆ.

ಅಧ್ಯಾಯ

# 01



# ಮಧ್ಯಕಾಲೀನ ಜಗತ್ತು: ಅಧಿಕಾರ ಕೇಂದ್ರಗಳು

> **'ಮಧ್ಯಯುಗವು ಜಗತ್ತಿನಾದ್ಯಂತ ನಾಗರಿಕತೆಯು ಬೆಳವಣಿಗೆ ಹೊಂದುತ್ತಲೇ ಇದ್ದ ಕಾಲವಾಗಿತ್ತು. ಮಧ್ಯಯುಗದ ಜೀವನ ಮತ್ತು ಅದು ಉಂಟುಮಾಡಿದ ಆರ್ಥಿಕ ಪರಿವರ್ತನೆಯ ವಿಶೇಷತೆಗಳೇ ಹದಿನಾರನೇ ಶತಮಾನದ ಕ್ರಾಂತಿಕಾರಿ ಪರಿವರ್ತನೆಗಳಿಗೆ ಕಾರಣವಾದುವು'**
>
> **ಜೆ.ಡಿ. ಬರ್ನಲ್**
>
> **ಶಾಸ್ತ್ರ ಚರಿತ್ರತ್ತಿಲ್ (Volume 1, ಪುಟ 303-305)**

ಮೇಲೆ ನೀಡಲಾದ ಹೇಳಿಕೆಯನ್ನು ಗಮನಿಸಿರಿ. ಇದು ಏನನ್ನು ಪ್ರತಿಪಾದಿಸುತ್ತದೆ? ಮಧ್ಯಕಾಲೀನ ಜಗತ್ತಿನ ಕುರಿತು ಹಿಂದಿನ ತರಗತಿಗಳಲ್ಲಿ ಕಲಿತಿರುವಿರಲ್ಲವೇ. ಮಧ್ಯಕಾಲದ ಜಗತ್ತಿನ ವಿಶೇಷತೆಗಳು ಯಾವುವು? ಚರ್ಚಿಸಿರಿ.

ಸಿ.ಇ. ಐದನೇ ಶತಮಾನದಿಂದ ಸಿ.ಇ. ಹದಿನೈದನೇ ಶತಮಾನದವರೆಗಿನ ಕಾಲವನ್ನು ಮಧ್ಯಕಾಲೀನ ಜಗತ್ತು ಎಂದು ಕರೆಯುತ್ತಾರಲ್ಲವೇ. ಆದರೆ ಜಗತ್ತಿನ ಎಲ್ಲ ಭಾಗಗಳಲ್ಲಿಯೂ ಮಧ್ಯಕಾಲವು ಒಂದೇ ಕಾಲ ವ್ಯಾಪ್ತಿಯಲ್ಲಿರಲಿಲ್ಲ. ಮಧ್ಯಕಾಲೀನ ಜಗತ್ತಿನ ರಾಜಕೀಯ ರಚನೆಯಲ್ಲಿ ಸಮಾನತೆಗಳಿದ್ದರೂ ಅಧಿಕಾರದ ಹಂತಗಳಲ್ಲಿ ವೈವಿಧ್ಯವನ್ನು ಕಾಣಬಹುದು. ಯುರೋಪ್, ಏಷ್ಯಾ, ಆಫ್ರಿಕಾ, ಅಮೇರಿಕಾ ಎಂಬೆಡೆಗಳಲ್ಲಿ ವಿಭಿನ್ನ ಕಾಲಗಳಲ್ಲಿ ವಿಭಿನ್ನ ರೀತಿಯ ಅಧಿಕಾರದ ಹಂತಗಳು ಜಾರಿಯಲ್ಲಿದ್ದುವು. ಅವುಗಳಲ್ಲಿ ಪ್ರಧಾನವಾದುದು ಯಾವುವೆಂದು ಪರಿಶೀಲಿಸೋಣ.

## ಪೌರಾತ್ಯ ರೋಮ್ ಸಾಮ್ರಾಜ್ಯ

ಪ್ರಾಚೀನ ಸಾಮ್ರಾಜ್ಯಗಳಲ್ಲಿ ಅತ್ಯಂತ ವಿಶಾಲವಾಗಿ ವ್ಯಾಪಿಸಿಕೊಂಡಿದ್ದ ರೋಮ್ ಸಾಮ್ರಾಜ್ಯದ ಕುರಿತು ಪರಿಚಯಿಸಿಕೊಂಡಿರುವೆವಲ್ಲವೇ. ಸಾಮ್ರಾಜ್ಯದ ವಿಸ್ತಾರವು ಆಡಳಿತಾತ್ಮಕವಾದ ಅಸೌಕರ್ಯಗಳನ್ನುಂಟುಮಾಡಿದಾಗ ಸಿ.ಇ. ನಾಲ್ಕನೇ ಶತಮಾನದಲ್ಲಿ ಡಯೋಕ್ಲಿಷ್ಯನೆಂಬ ರೋಮ್ ಚಕ್ರವರ್ತಿಯು ರೋಮ್ ಸಾಮ್ರಾಜ್ಯವನ್ನು ಎರಡಾಗಿ ವಿಭಜಿಸಿದನು. ಹೀಗೆ ರೋಮ್‌ನ್ನು ಕೇಂದ್ರೀಕರಿಸಿಕೊಂಡು ಪಾಶ್ಚಾತ್ಯ ರೋಮ್ ಸಾಮ್ರಾಜ್ಯ ಹಾಗೂ ಕೋನ್‌ಸ್ಟಂಟಿನೋಪಲನ್ನು ಕೇಂದ್ರವಾಗಿಟ್ಟುಕೊಂಡು ಪೌರಾತ್ಯ ರೋಮ್ ಸಾಮ್ರಾಜ್ಯವು ಅಸ್ತಿತ್ವಕ್ಕೆ ಬಂತು. ಕೋನ್‌ಸ್ಟಂಟಿನೋಪಲ್‌ಗೆ ಹಿಂದಿನ ಕಾಲದಲ್ಲಿ ಬಳಕೆಯಾದ ಹೆಸರು ಬೈಝಾಂಟೈನ್. ಆದುದರಿಂದ ಪೌರಾತ್ಯ ರೋಮ್ ಸಾಮ್ರಾಜ್ಯವನ್ನು ಬೈಝಾಂಟೈನ್ ಸಾಮ್ರಾಜ್ಯವೆಂದು ಕರೆಯುತ್ತಿದ್ದರು.




ಪೌರಾತ್ಯ ರೋಮ್ ಸಾಮ್ರಾಜ್ಯ

ಪೌರಾತ್ಯ ರೋಮ್ ಸಾಮ್ರಾಜ್ಯದ ಭೂಪಟವನ್ನು ಪರಿಶೀಲಿಸಿ ಪಶ್ಚಿಮ ಏಷ್ಯಾದ, ಯುರೋಪಿನ ಹಾಗೂ ಆಫ್ರಿಕಾದ ಯಾವ ಯಾವ ಪ್ರದೇಶಗಳು ಈ ಸಾಮ್ರಾಜ್ಯದಲ್ಲಿ ಒಳಗೊಂಡಿದ್ದುವು ಎಂಬುದನ್ನು ಕಂಡುಹಿಡಿಯಿರಿ. ಇಂದು ಆ ಪ್ರದೇಶಗಳು ಯಾವ ಯಾವ ದೇಶಗಳ ಭಾಗವಾಗಿವೆ? ಪಟ್ಟಿ ತಯಾರಿಸಿರಿ.

### ಚರಿತ್ರೆಯಲ್ಲಿ ಕಾಲ ವಿಭಜನೆ

ಜಾಗತಿಕ ಚರಿತ್ರೆಯಲ್ಲಿ ಕಾಲವಿಭಜನೆಗೆ ರೋಮ್ ಸಾಮ್ರಾಜ್ಯವನ್ನು ಮಾನದಂಡವಾಗಿ ಪರಿಗಣಿಸಲಾಗಿದೆ. ಮಾನವನ ಹುಟ್ಟಿನಿಂದ ಆರಂಭಿಸಿ ಪಶ್ಚಿಮ ರೋಮ್ ಸಾಮ್ರಾಜ್ಯವು ಅವನತಿ ಹೊಂದಿದ ಸಿ.ಇ. 476ರ ವರೆಗಿನ ಘಟನೆಗಳನ್ನು ಪ್ರಾಚೀನ ಕಾಲದ ಚರಿತ್ರೆಯಲ್ಲಿ ಪ್ರತಿಪಾದಿಸಲಾಗಿದೆ. ಸಿ.ಇ. 476 ರಿಂದ ಪೌರಾತ್ಯ ರೋಮ್ ಸಾಮ್ರಾಜ್ಯದ ಪತನದವರೆಗಿನ (ಸಿ.ಇ. 1453) ಕಾಲವನ್ನು ಮಧ್ಯಕಾಲವಾಗಿ ಪರಿಗಣಿಸಲಾಗಿದೆ. 1453ರಿಂದ ಆಧುನಿಕ ಕಾಲವು ಆರಂಭವಾಗುತ್ತದೆ.

### ಕೋನ್‌ಸ್ಟೆಂಟಿನೋಪಲ್

ಮೆಡಿಟರೇನಿಯನ್ ಸಮುದ್ರ ಮತ್ತು ಕಪ್ಪು ಸಮುದ್ರಗಳ ನಡುವೆ ರಾಜತಾಂತ್ರಿಕವಾದ ಬೋಸ್ಫೋರಸ್ ಜಲಸಂಧಿಯ ತೀರದಲ್ಲಿ ಕೋನ್‌ಸ್ಟೆಂಟಿನೋಪಲ್ ಎಂಬ ಪ್ರದೇಶವಿದೆ. ಈ ನಗರವು ರೋಮ್ ಚಕ್ರವರ್ತಿಯಾದ ಕೋನ್‌ಸ್ಟಂಟಿನ ಹೆಸರಿನಲ್ಲಿ ತಿಳಿಯಲ್ಪಟ್ಟಿತ್ತು. ಒಟ್ಟೋಮನ್ ತುರ್ಕಿಗಳ ಆಡಳಿತ ಕಾಲದಲ್ಲಿಯೂ ಕೋನ್‌ಸ್ಟಂಟಿನೋಪಲ್ ಅವರ ರಾಜಧಾನಿಯಾಗಿತ್ತು. ಈ ನಗರವು ಕಲೆ ಹಾಗೂ ವಾಸ್ತುವಿದ್ಯೆಯ ಕೇಂದ್ರವೂ ಆಗಿತ್ತು. ಇಸ್ತಾಂಬುಲ್ ಎಂಬುದು ಇದರ ಈಗಿನ ಹೆಸರಾಗಿದೆ.

> "ಚರಿತ್ರೆಯು ಪ್ರಜ್ಞಾಪೂರ್ವಕವಾಗಿ ಜಸ್ಟೀನಿಯನ್‌ನ ಯುದ್ಧಗಳನ್ನು ಮರೆತು ಅವನು ರಚಿಸಿದ ಕಾನೂನುಗಳಿಂದಾಗಿ ಅವನನ್ನು ಸ್ಮರಿಸುವುದು.
>
> ಸ್ಟೋರಿ ಓಫ್ ಸಿವಿಲೈಝೇಶನ್, ವಿಲ್‌ಡುರಂಟ್


ಜಸ್ಟೀನಿಯನ್

ಜಸ್ಟೀನಿಯನ್‌ನ್ನು ಪೌರಾತ್ಯ ರೋಮ್ ಸಾಮ್ರಾಜ್ಯದ ಪ್ರಸಿದ್ಧವಾದ ಚಕ್ರವರ್ತಿಯೆಂದು ಪರಿಗಣಿಸಿದ್ದಾರೆಂಬುದು ಜಸ್ಟೀನಿಯನ್‌ನ ಕುರಿತು ವಿಲ್‌ಡುರಂಟ್‌ನ ನಿರೀಕ್ಷಣೆಯಿಂದ ತಿಳಿದುಬರುತ್ತದೆ. ರೋಮಿನ ಕಾನೂನುಗಳನ್ನೆಲ್ಲಾ ಕ್ರೋಡೀಕರಿಸಿ "ಕೋರ್‌ಪ್ಪಸ್ ಜೂರಿಸ್ ಸಿವಿಲ್ಸ್" ಎಂಬ ನಿಯಮ ಸಂಹಿತೆಯೊಂದನ್ನು ತಯಾರಿಸಿರುವುದು ಅವನ ಪ್ರಧಾನ ಸಾಧನೆಯಾಗಿದೆ. ಜಸ್ಟೀನಿಯನ್‌ನ ನಿಯಮಸಂಹಿತೆಯು ಯುಕ್ತಿ, ನೀತಿ, ಉದಾರತೆ ಎಂಬೀ ಆಶಯಗಳಲ್ಲಿ ಹುದುಗಿಕೊಂಡಿದೆ. ಅನೇಕ ದೇಶಗಳು ತಮ್ಮ ದೇಶದ ಕಾನೂನುಗಳನ್ನು ರಚಿಸಲು ಇದನ್ನು ಉಪಯೋಗಿಸಿಕೊಂಡವು. ಫ್ರೆಂಚ್ ಆಡಳಿತಾಧಿಕಾರಿಯಾಗಿದ್ದ ನೆಪೋಲಿಯನ್‌ನ ನಿಯಮ ಸಂಹಿತೆಗೂ ತಳಹದಿಯಾದುದು ಜಸ್ಟೀನಿಯನ್ ಚಕ್ರವರ್ತಿಯ ನಿಯಮಗಳಾಗಿದ್ದುವು.




> ಮೇಲೆ ಕೊಟ್ಟಿರುವ ಪ್ರಸ್ತಾವನೆಯನ್ನೂ ಡಯಗ್ರಾಮನ್ನೂ ಗಮನಿಸಿರಿ. ಜಸ್ಟೀನಿಯನ್ ಚಕ್ರವರ್ತಿಯ ಕಾನೂನುಗಳ ವಿಶೇಷತೆಗಳು ಯಾವುವು? ಚರ್ಚಿಸಿರಿ.



ಜಸ್ಟೀನಿಯನ್‌ನ ಆಡಳಿತದ ನಂತರ ಸಾಮ್ರಾಜ್ಯವು ಶಿಥಿಲಗೊಳ್ಳಲಾರಂಭಿಸಿತು. ಹದಿನೈದನೇ ಶತಮಾನದಲ್ಲಿ ತುರ್ಕಿಗಳು ಕೋನ್‌ಸ್ಟಂಟಿನೋಪಲ್‌ನ್ನು ವಶಪಡಿಸುವುದರೊಂದಿಗೆ ಪೌರಾತ್ಯ ರೋಮ್ ಸಾಮ್ರಾಜ್ಯವು ಪತನವಾಯಿತು.



ಪವಿತ್ರ ರೋಮ್ ಸಾಮ್ರಾಜ್ಯ

## ಪವಿತ್ರ ರೋಮ್ ಸಾಮ್ರಾಜ್ಯ

ರೋಮ್ ರಾಜಧಾನಿಯಾಗಿದ್ದ ಪಶ್ಚಿಮ ರೋಮ್ ಸಾಮ್ರಾಜ್ಯದ ಕುರಿತು ತಿಳಿದಿರುವಿರಲ್ಲವೇ. ಈ ಸಾಮ್ರಾಜ್ಯವು ವಿದೇಶಿಯರ ಆಕ್ರಮಣದಿಂದ ಪತನವಾಯಿತು. ರೋಮ್ ಸಾಮ್ರಾಜ್ಯದ ಭಾಗವಾಗಿದ್ದ ಪ್ರದೇಶಗಳನ್ನು ಅಲೆಮಾರಿಗಳಾದ ಆಕ್ರಮಣಕಾರಿಗಳು ವಶಪಡಿಸಿಕೊಂಡರು. ಫ್ರಾಂಕುಗಳು ಅವರಲ್ಲೊಂದು ವಿಭಾಗದವರಾಗಿದ್ದರು. ಫ್ರಾಂಕಿಷ್ ಸಾಮ್ರಾಜ್ಯವು ಫ್ರಾಂಕುಗಳು ಸ್ಥಾಪಿಸಿದ ಸಾಮ್ರಾಜ್ಯವಾಗಿತ್ತು. ಕರೋಲಿನ್‌ಜಿಯನ್ ವಂಶದವನಾದ ಷಾಲಮೀನ್ ಫ್ರಾಂಕಿಷ್ ಸಾಮ್ರಾಜ್ಯದ ಪ್ರಸಿದ್ಧನಾದ ಚಕ್ರವರ್ತಿಯಾಗಿದ್ದನು.

ಷಾಲಮೀನ್‌ನ ಸಾಮ್ರಾಜ್ಯವು ಪೌರಾತ್ಯ ರೋಮ್ ಸಾಮ್ರಾಜ್ಯಕ್ಕಿಂತ ವಿಶಾಲವಾಗಿತ್ತು. ಕೆಥೋಲಿಕ್ ಮತದ ನೇತಾರನಾಗಿದ್ದ ಪೋಪ್ ಲಿಯೋ ಮೂರನೇಯವನನ್ನು ಅಲೆಮಾರಿಗಳಾದ ಲೊಬಾರ್ಡಿಕಲ್ ಎಂಬ ಆಕ್ರಮಣಕಾರಿಗಳಿಂದ ಷಾಲಮೀನ್ ರಕ್ಷಿಸಿದನು. ಇದಕ್ಕೆ ಪ್ರತಿಫಲವಾಗಿ ಪೋಪನು ಷಾಲಮೀನನ್ನು ಪವಿತ್ರ ರೋಮ್ ಚಕ್ರವರ್ತಿಯಾಗಿ ಕಿರೀಟಧಾರಣೆ ಮಾಡಿದನು. ಆ ಬಳಿಕ ಸಾಮ್ರಾಜ್ಯವು 'ಪವಿತ್ರ ರೋಮ್ ಸಾಮ್ರಾಜ್ಯ'ವೆಂದು ತಿಳಿಯಲ್ಪಟ್ಟಿತು.

ಜಾಗತಿಕ ಭೂಪಟವನ್ನು ಪರಿಶೀಲಿಸಿ ಇಂದು ಯುರೋಪಿನಲ್ಲಿರುವ ಯಾವ ಯಾವ ದೇಶಗಳು ಪವಿತ್ರ ರೋಮ್ ಸಾಮ್ರಾಜ್ಯದ ಭಾಗವಾಗಿದ್ದುವು ಎಂಬುದನ್ನು ಕಂಡುಹಿಡಿದು ಪಟ್ಟಿಮಾಡಿರಿ.


ಷಾಲಮೀನ್

ಷಾಲಮೀನ್ ಸಮರ್ಥನಾದ ಯುದ್ಧವೀರನೂ ಸಾಮರ್ಥ್ಯವುಳ್ಳ ಆಡಳಿತಾಧಿಕಾರಿಯೂ ಆಗಿದ್ದನು. ಪಶ್ಚಿಮ ಯುರೋಪಿನ ಹೆಚ್ಚಿನ ದೇಶಗಳನ್ನು ಆತನು ತನ್ನ ಅಧೀನಕ್ಕೆ ತಂದನು. ರಾಜಕೀಯ ಒಪ್ಪಂದಗಳ ಮೂಲಕ ಹಾಗೂ ವೈವಾಹಿಕ ಸಂಬಂಧಗಳ ಮೂಲಕ ಆತನು ಸಾಮ್ರಾಜ್ಯದ ವಿಸ್ತಾರವನ್ನು ಹೆಚ್ಚಿಸಿದನು. ಸಾಮ್ರಾಜ್ಯದಲ್ಲಿ ಕೇಂದ್ರೀಕೃತ ಆಡಳಿತ ವ್ಯವಸ್ಥೆಯನ್ನು ಜಾರಿಗೆ ತಂದನು. ಪ್ರಾದೇಶಿಕ ಆಡಳಿತವನ್ನು 'ಕೌಂಡಿಗಳು' ಎಂಬ ಹೆಸರಿನ ಉದ್ಯೋಗಿಗಳಿಗೆ ವಹಿಸಿಕೊಟ್ಟನು. ಕೌಂಡಿಗಳ ಕಾರ್ಯವೈಖರಿಗಳನ್ನು ಪರಿಶೋಧಿಸಲು 'ಮಿಸ್ಸೈ ಡೊಮಿನಿಸಿ' ಎಂಬ ರಹಸ್ಯ ವಿಭಾಗವನ್ನು ನೇಮಿಸಿದನು. ಬಡವರಿಗಾಗಿ ಬರಪರಿಹಾರ ನಿಧಿಗಳನ್ನು ಆರಂಭಿಸಿದನು. ಷಾಲಮೀನ್‌ನ ನೇತೃತ್ವದಲ್ಲಿ ಅನೇಕ ಶೈಕ್ಷಣಿಕ ಕೇಂದ್ರಗಳನ್ನು ಆರಂಭಿಸಲಾಯಿತು. ಆ ಮೂಲಕ ಉಂಟಾದ ವೈಜ್ಞಾನಿಕ ಪುನರುಜ್ಜೀವನವನ್ನು ಕರೋಲಿನ್‌ಜಿಯನ್ ನವೋತ್ಥಾನವೆಂದು ಕರೆಯಲಾಯಿತು.

## ಅರೇಬಿಯಾ ಸಾಮ್ರಾಜ್ಯ



ಅರೇಬಿಯಾ ಸಾಮ್ರಾಜ್ಯ

ಇರಾಕ್, ಇರಾನ್, ಸೌದಿ ಅರೇಬಿಯಾ ಮುಂತಾದ ದೇಶಗಳನ್ನೊಳಗೊಂಡ ಪ್ರದೇಶಗಳನ್ನು ಆರಂಭಕಾಲದಲ್ಲಿ ಅರೇಬಿಯಾ ಎಂಬ ಹೆಸರಿನಲ್ಲಿ ಕರೆಯುತ್ತಿದ್ದರು. ಅರೇಬಿಯನ್ನರು ಮಧ್ಯಕಾಲದ ಜಗತ್ತಿಗೆ ವಿಶೇಷವಾದ ಕೊಡುಗೆಗಳನ್ನು ನೀಡಿದ ಜನರಾಗಿದ್ದಾರೆ. ಸಾಂಸ್ಕೃತಿಕ ಕ್ಷೇತ್ರದಲ್ಲಿ ಅರೇಬಿಯನ್ನರು ನೀಡಿದ ಕೊಡುಗೆಗಳ ಕುರಿತು ಹಿಂದಿನ ತರಗತಿಗಳಲ್ಲಿ ಚರ್ಚಿಸಿದ್ದೇವಲ್ಲವೇ.

ರಾಜಕೀಯ ಕ್ಷೇತ್ರದಲ್ಲೂ ಅರೇಬಿಯನ್ನರು ತಮ್ಮದೇ ಆದ ಅನೇಕ ಕೊಡುಗೆಗಳನ್ನು ನೀಡಿದ್ದಾರೆ. ಇಸ್ಲಾಂ ಮತದ ಪ್ರವಾದಿ ಮುಹಮ್ಮದ್ ಅರಬ್ ರಾಷ್ಟ್ರದ ಮುಖ್ಯಸ್ಥನೂ ಆಗಿದ್ದನು. ಸಿ.ಇ. 632ರಲ್ಲಿ ಪ್ರವಾದಿ ಮುಹಮ್ಮದ್‌ನ ಮರಣಾನಂತರ ಖಲೀಫರು

ಅರೇಬಿಯಾದಲ್ಲಿ ಆಡಳಿತ ನಡೆಸಿದರು. ಖಲೀಫರ ಕಾಲದಲ್ಲಿ ಏಷ್ಯಾಮೈನರ್‌ನಿಂದ ಅರಬೀ ಸಮುದ್ರದ ವರೆಗಿನ ವಿಶಾಲವಾದ ಪ್ರದೇಶಗಳು ಅರೇಬಿಯಾ ಸಾಮ್ರಾಜ್ಯದ ಭಾಗವಾಗಿದ್ದುವು. ಮದೀನವು ಅವರ ರಾಜಧಾನಿಯಾಗಿತ್ತು. ಆರಂಭಕಾಲದ ಖಲೀಫರ ನಂತರ ಉಮವಿಯ್ಯ ವಂಶದವರು ಅರೇಬಿಯಾವನ್ನು ಆಳಿದರು. ಇವರ ಕಾಲದಲ್ಲಿ ಅರೇಬಿಯಾದಲ್ಲಿ ಕೇಂದ್ರೀಕೃತ ಆಡಳಿತವು ಆರಂಭವಾಯಿತು. ಉಮವಿಯ್ಯ ವಂಶದ ಆಡಳಿತ ಕಾಲದಲ್ಲಿ ಚಿನ್ನದ ನಾಣ್ಯವಾದ ದಿನಾರ್ ಮತ್ತು ಬೆಳ್ಳಿಯ ನಾಣ್ಯವಾದ ದಿರ್‌ಹಂ ಅರೇಬಿಯಾದಲ್ಲಿ ಚಲಾವಣೆಗೆ ಬಂತು. ಅವರು ಡಮಾಸ್ಕಸನ್ನು ರಾಜಧಾನಿಯನ್ನಾಗಿ ಮಾಡಿಕೊಂಡು ಆಳ್ವಿಕೆ ನಡೆಸಿದರು. ಅನಂತರ ಅಧಿಕಾರಕ್ಕೇರಿದ ಅಬ್ಬಾಸಿಯ ಆಡಳಿತ ಕಾಲದಲ್ಲಿ ರಾಜಧಾನಿಯನ್ನು ಬಾಗ್ದಾದಿಗೆ ವರ್ಗಾಯಿಸಿದರು.

### ಆರಂಭಕಾಲದ ಖಲೀಫರು

- ಅಬೂಬಕ್ಕರ್ (ಸಿ.ಇ. 632-634)
- ಉಮರ್ (ಸಿ.ಇ. 634-644)
- ಉಸ್ಮಾನ್ (ಸಿ.ಇ. 644-656)
- ಅಲಿ (ಸಿ.ಇ. 656-661)

### ಪ್ರವಾದಿ ಮುಹಮ್ಮದ್

ಮುಹಮ್ಮದ್ ಸಿ.ಇ. 571ರಲ್ಲಿ ಮಕ್ಕಾದಲ್ಲಿ ಖುರೈಷಿ ಗೋತ್ರದಲ್ಲಿ ಹುಟ್ಟಿದನು. ಮಕ್ಕಾವನ್ನು ಇಸ್ಲಾಮಿನ ಪವಿತ್ರ ನಗರವೆಂದು ಕರೆಯುತ್ತಾರೆ. ಮಕ್ಕಾದ ಮೇಲ್ವರ್ಗದವರ ವಿರೋಧದಿಂದಾಗಿ ಸಿ.ಇ. 622ರಲ್ಲಿ ಮುಹಮ್ಮದ್ ಮದೀನಕ್ಕೆ ಪಲಾಯನ ಮಾಡಿದನು. ಈ ಪಲಾಯನವು ಹಿಜಿರಾ ಎಂಬ ಹೆಸರಿನಲ್ಲಿ ತಿಳಿಯಲ್ಪಡುತ್ತದೆ. ಈ ಘಟನೆಯನ್ನು ಹಿನ್ನೆಲೆಯಾಗಿಟ್ಟುಕೊಂಡು ಹಿಜಿರಾ ವರ್ಷ ಆರಂಭವಾಯಿತು.

### ಬಗ್ದಾದ್

ಟೈಗ್ರಿಸ್ ನದೀತೀರದಲ್ಲಿ ಬಾಗ್ದಾದ್ ಎಂಬ ಪ್ರದೇಶವಿದೆ. 'ಅರೇಬಿಯನ್ ನೈಟ್ಸ್'ನ ಹಿನ್ನೆಲೆಯು ಈ ನಗರವಾಗಿದೆ. ಜಗತ್ತಿನ ಅತ್ಯಂತ ದೊಡ್ಡದಾದ ಮತ್ತು ಸಂಪನ್ನವಾದ ನಗರವಾಗಿ 'ಅರೇಬಿಯನ್ ನೈಟ್ಸ್' ನಲ್ಲಿ ಬಾಗ್ದಾದನ್ನು ಪರಾಮರ್ಶಿಸಲಾಗಿದೆ. ಜಗತ್ಪ್ರಸಿದ್ಧವಾಗಿ ಪ್ರಗತಿ ಹೊಂದಿದ ಬಾಗ್ದಾದ್ ವಿಶ್ವವಿದ್ಯಾಲಯ ಮತ್ತು ಅಬ್ಬಾಸಿಯ ಅರಮನೆ ಇಲ್ಲಿದೆ. ಮಂಗೋಲಿಯಾದವನಾದ ತಿಮೂರು ಮತ್ತು ಒಟ್ಟೋಮನ್ ಆಡಳಿತಾಧಿಕಾರಿಯಾದ ಸುಲೈಮಾನ್ ಬಾಗ್ದಾದನ್ನು ವಶಪಡಿಸಿಕೊಂಡಿದ್ದರು. ಮಂಗೋಲಿಯನರು ಬಾಗ್ದಾದನ್ನು ಆಕ್ರಮಿಸುವಾಗ ಬಾಗ್ದಾದ್ ನಗರದಲ್ಲಿಯೇ 36 ಸಾರ್ವಜನಿಕ ವಾಚನಾಲಯಗಳು ಇತ್ತೆಂದು ಹೇಳುತ್ತಾರೆ. ಬಾಗ್ದಾದ್ ಅಂದಿನ ಸಾಂಸ್ಕೃತಿಕ ಕೇಂದ್ರವಾಗಿತ್ತು.

ಅರೇಬಿಯಾದ ಭೂಪಟವನ್ನು ನಿರೀಕ್ಷಿಸಿ ಕೆಳಗೆ ಕೊಟ್ಟಿರುವ ಸ್ಥಳಗಳನ್ನು ಕಂಡುಹಿಡಿಯಿರಿ. ಅವುಗಳು ಇಂದು ಯಾವ ಯಾವ ದೇಶಗಳಲ್ಲಿವೆ?

- ಮಕ್ಕಾ
- ಮದೀನ
- ದಮಾಸ್ಕಸ್
- ಬಾಗ್ದಾದ್

ಅಬ್ಬಾಸಿಯ ಆಡಳಿತಾಧಿಕಾರಿಗಳಲ್ಲಿ ಹಾರೂನ್ - ಅಲ್ - ರಶೀದ್ ಪ್ರಸಿದ್ಧನಾಗಿದ್ದನು. ಪ್ರಜೆಗಳ ಕ್ಷೇಮದಲ್ಲಿ ಆಸಕ್ತಿ ಹೊಂದಿದ್ದ ಆಡಳಿತಾಧಿಕಾರಿಯಾಗಿದ್ದ ಹರೂನ್-ಅಲ್-ರಶೀದನು ಅನೇಕ ಕ್ಷೇಮ ಯೋಜನೆಗಳನ್ನು ಜಾರಿಗೊಳಿಸಿದನು. ಇವನ ಕಾಲದಲ್ಲಿ ಅರೇಬಿಯಾದಲ್ಲಿ ಮೊದಲ ಬಾರಿಗೆ ಆಸ್ಪತ್ರೆಗಳನ್ನು ಸ್ಥಾಪಿಸಲಾಯಿತು. ನ್ಯಾಯನೀತಿ, ಆಡಳಿತ ಇತ್ಯಾದಿಗಳು ಇಸ್ಲಾಂ ಮತದ ವಿಶ್ವಾಸಗಳಿಗೆ ಅನುಗುಣವಾಗಿತ್ತು ಹಾಗೂ ಕಠಿಣವಾದ ಕಾನೂನಿನ ಆಡಳಿತ ಜಾರಿಯಲ್ಲಿತ್ತು. ಆದುದರಿಂದ ಸಾಮ್ರಾಜ್ಯದ ಯಾವ ಭಾಗದಲ್ಲಾದರೂ ಜನರಿಗೆ ನಿರ್ಭಯವಾಗಿ ಸಂಚರಿಸಲು ಸಾಧ್ಯವಾಗುತ್ತಿತ್ತು. 'ಪವಿತ್ರ ರೋಮ್ ಸಾಮ್ರಾಜ್ಯ'ದೊಂದಿಗೆ ಸ್ನೇಹ ಸಂಬಂಧವನ್ನಿರಿಸಿದ ಹಾರೂನ್ - ಅಲ್- ರಶೀದ್ ಷಾಲಮೀನ್‌ನ ಅರಮನೆಗೆ ತನ್ನ ಪ್ರತಿನಿಧಿಗಳನ್ನು ಕಳುಹಿಸಿದ್ದನು.



ಮಧ್ಯಕಾಲದ ಜಗತ್ತಿನ ಆಡಳಿತಾಧಿಕಾರಿಗಳಲ್ಲಿ ಹಾರೂನ್ - ಅಲ್ - ರಶೀದನು ತುಂಬಾ ಭಿನ್ನನಾಗಿದ್ದನೆಂದು ಹೇಳಲು ಕಾರಣವೇನು?

## ಒಟ್ಟೋಮನ್ ಸಾಮ್ರಾಜ್ಯ




ಒಟ್ಟೋಮನ್ ಸಾಮ್ರಾಜ್ಯ

ಪೌರಾತ್ಯ ರೋಮ್ ಸಾಮ್ರಾಜ್ಯದ ಪತನಕ್ಕೆ ಕಾರಣಗಳಾವುವು? ಸಿ. ಇ. 1453ರಲ್ಲಿ ತುರ್ಕಿಯ ನೇತಾರನಾದ ಎರಡನೇ ಮುಹಮ್ಮದ್ ಕೋನ್‌ಸ್ಟಂಟಿನೋಪಲನ್ನು ವಶಪಡಿಸುವುದರೊಂದಿಗೆ ಒಟ್ಟೋಮನ್ ಸಾಮ್ರಾಜ್ಯವು ಪ್ರಬಲವಾಯಿತು. ಅದರೊಂದಿಗೆ ಪೌರಾತ್ಯ ರೋಮ್ ಸಾಮ್ರಾಜ್ಯದ ಭಾಗವಾಗಿದ್ದ ಹಲವು ಪ್ರದೇಶಗಳು ಒಟ್ಟೋಮನ್ ಸಾಮ್ರಾಜ್ಯದ ಭಾಗವಾದುವು.

ಒಟ್ಟೋಮನ್ ಸಾಮ್ರಾಜ್ಯವು ಸುಲೈಮಾನ್‌ನ ಕಾಲದಲ್ಲಿ ಅತ್ಯಂತ ಹೆಚ್ಚು ಬಲಿಷ್ಠವಾಯಿತು. ಸುಲೈಮಾನನನ್ನು ಅಲ್‌ಖುನಾನಿ (ನಿಯಮದಾತ) ಎಂದು ಕರೆಯುತ್ತಿದ್ದರು. ಅವನು ಒಟ್ಟೋಮನ್ ಸಾಮ್ರಾಜ್ಯದ ಕಾನೂನುಗಳನ್ನು ಕ್ರೋಡೀಕರಿಸಿದನು. ಸಾಮ್ರಾಜ್ಯದಲ್ಲಿ ಕೇಂದ್ರೀಕೃತ ಆಡಳಿತಕ್ಕೆ ನೇತೃತ್ವವನ್ನು ನೀಡಿದನು. ಈ ಕಾಲದಲ್ಲಿ ಯುರೋಪಿನ ಹಲವು ಪ್ರದೇಶಗಳು ಒಟ್ಟೋಮನ್ ಸಾಮ್ರಾಜ್ಯದ ಭಾಗವಾದುವು. ಏಷ್ಯಾದವರ ಯುದ್ಧ ಸಾಮರ್ಥ್ಯ ಮತ್ತು ಧೀರತೆ ಒಟ್ಟೋಮನ್ ಆಡಳಿತಾಧಿಕಾರಿಗಳ ಮೂಲಕ ಯುರೋಪಿಯನ್ನರಿಗೆ ತಿಳಿಯಿತು. ಒಂದನೇ ಜಾಗತಿಕ ಯುದ್ಧದ ಬಳಿಕ ಒಟ್ಟೋಮನ್ ಸಾಮ್ರಾಜ್ಯವು ಪತನವಾಯಿತು.



**ಒಟ್ಟೋಮನ್ ಸಾಮ್ರಾಜ್ಯ**

ಒಟ್ಟೋಮನ್ ಸಾಮ್ರಾಜ್ಯವನ್ನು ಹದಿಮೂರನೇ ಶತಮಾನದ ಕೊನೆಯಲ್ಲಿ ತುರ್ಕಿ ಗೋತ್ರಗಳಲ್ಲೊಂದರ ನೇತಾರನಾದ ಉಸ್ಮಾನ್ ಸ್ಥಾಪಿಸಿದನೆಂದು ನಂಬಲಾಗಿದೆ. 'ಉತ್‌ಮಾನ್' ಎಂದು ಕರೆಯುತ್ತಿದ್ದ ಅವನ ಹೆಸರಿನಿಂದ ಸಾಮ್ರಾಜ್ಯಕ್ಕೆ ಒಟ್ಟೋಮನ್ ಎಂಬ ಹೆಸರು ಬಂತು.



ಭೂಪಟವನ್ನು ಪರಿಶೋಧಿಸಿ ಜಗತ್ತಿನ ಯಾವೆಲ್ಲ ಪ್ರದೇಶಗಳು ಒಟ್ಟೋಮನ್ ಸಾಮ್ರಾಜ್ಯದ ಭಾಗವಾಗಿದ್ದುವು ಎಂಬುದನ್ನು ಕಂಡುಹಿಡಿದು ಪಟ್ಟಿಮಾಡಿರಿ.

## ಮಂಗೋಲಿಯಾ ಸಾಮ್ರಾಜ್ಯ

ಮಂಗೋಲಿಯವು ಮಧ್ಯಏಷ್ಯಾದಲ್ಲಿ ರಷ್ಯಾ ಮತ್ತು ಚೈನಾದ ಮಧ್ಯದಲ್ಲಿರುವ ಪ್ರದೇಶವಾಗಿದೆ. ಇದು ವಿಶಾಲವಾದ ಹುಲ್ಲುಗಾವಲು, ಮರುಭೂಮಿ, ಪರ್ವತಗಳಿಂದ ತುಂಬಿದ ಪ್ರದೇಶವಾಗಿದೆ. ಬೇಸಗೆ ಕಾಲದಲ್ಲಿ ಅತ್ಯಂತ ಹೆಚ್ಚು ಉಷ್ಣತೆಯೂ ಶೈತ್ಯಕಾಲದಲ್ಲಿ ಅತೀ ಶೈತ್ಯವೂ ಮಂಗೋಲಿಯದಲ್ಲಿ ಅನುಭವಕ್ಕೆ ಬರುತ್ತದೆ. ಅಲೆಮಾರಿಗಳಂತೆ ಗುಡಿಸಲುಗಳಲ್ಲಿ ಇವರು ವಾಸಿಸುತ್ತಿದ್ದರು.

ಕುದುರೆಯನ್ನೇರಿ ಊರು ಸುತ್ತಿ ವಿವಿಧ ಮಂಗೋಲಿಯಾ ಗೋತ್ರಗಳನ್ನು ಏಕೀಕರಿಸಿ ಚೆಂಗಿಸ್ ಖಾನ್ ಮಂಗೋಲಿಯಾ ಸಾಮ್ರಾಜ್ಯವನ್ನು ಸ್ಥಾಪಿಸಿದನು. ಸೈಬೀರಿಯಾದ ಒನೋಣ್ ನದೀದಡದಲ್ಲಿರುವ ಕಾರಕ್ಕೋರವು ಚೆಂಗಿಸ್ ಖಾನ್‌ನ ರಾಜಧಾನಿಯಾಗಿತ್ತು.



ಮಂಗೋಲಿಯಾ ಸಾಮ್ರಾಜ್ಯ

ಭೂಪಟವನ್ನು ನಿರೀಕ್ಷಿಸಿ ಮಂಗೋಲಿಯಾ ಸಾಮ್ರಾಜ್ಯವು ಯಾವೆಲ್ಲಾ ಭೂಖಂಡಗಳಲ್ಲಿ ವ್ಯಾಪಿಸಿತು ಎಂಬುದನ್ನು ಕಂಡುಹಿಡಿಯಿರಿ.

ಬಲಿಷ್ಠವಾದ ಅಶ್ವಸೇನೆಯು ಮಂಗೋಲಿಯನ್ನರ ಸೈನ್ಯದ ಪ್ರಧಾನ ವಿಶೇಷತೆಯಾಗಿತ್ತು. ಚೆಂಗಿಸ್ ಖಾನ್ ಹತ್ತರ ಗುಣಕಗಳಾಗಿ ಸೈನ್ಯವನ್ನು ಕ್ರಮೀಕರಿಸಿದ್ದನು. (10, 100, 1000, 10000)ಕುದುರೆಯ ಬೆನ್ನೇರಿ ಕುಳಿತು ಪ್ರಯೋಗಿಸಲು ಸಾಧ್ಯವಿರುವ ಸಣ್ಣ ಫಿರಂಗಿಗಳು ಸೈನ್ಯದ ಪ್ರಧಾನ ಆಕರ್ಷಣೆಯಾಗಿದ್ದುವು. ಸುಸಂಘಟಿತವಾದ ಗುಪ್ತಚರ ವಿಭಾಗವೂ ಚೆಂಗಿಸ್ ಖಾನ್‌ನಲ್ಲಿತ್ತು.


ಚೆಂಗಿಸ್ ಖಾನ್‌ನ ಶಿಲ್ಪ- ಮಂಗೋಲಿಯ

ದೂರದ ದೇಶದಲ್ಲಿರುವವರೊಂದಿಗೆ ವಿಚಾರ-ವಿನಿಮಯ ಮಾಡಲು ನಾವಿಂದು ಯಾವೆಲ್ಲ ಮಾರ್ಗಗಳನ್ನು ಉಪಯೋಗಿಸುತ್ತಿದ್ದೇವೆ? ಸಾಮ್ರಾಜ್ಯದ ಭಾಗವಾಗಿದ್ದ ದೂರದ ದೇಶಗಳನ್ನು ಆಡಳಿತ ಕೇಂದ್ರದೊಂದಿಗೆ ಸಂಯೋಜಿಸಲು ಮಂಗೋಲಿಯನ್ನರು ಕಾರ್ಯದಕ್ಷತೆಯಿಂದೊಡ ಗೂಡಿದ ಅಂಚೆ ವ್ಯವಸ್ಥೆಯನ್ನು ಜಾರಿಗೊಳಿಸಿದ್ದರು. ಕುದುರೆಗಳನ್ನು ಬಳಸಿಕೊಂಡು ನಡೆಸುತ್ತಿದ್ದ ಈ ವಿಚಾರ-ವಿನಿಮಯ ವಿಧಾನವನ್ನು 'ಕೊರಿಯರ್'ಎಂದು ಕರೆಯುತ್ತಿದ್ದರು. ಚೆಂಗಿಸ್ ಖಾನನ ಕೊರಿಯರ್ ವ್ಯವಸ್ಥೆಯು ಅತ್ಯಧಿಕ ವೇಗ ಹಾಗೂ ಕಾರ್ಯದಕ್ಷತೆಯಿಂದ ಕೂಡಿತ್ತು.

## ತಿಮೂರ್

ತಿಮೂರ್ ಸಮರ್ ಖಂಡವನ್ನು ರಾಜಧಾನಿಯನ್ನಾಗಿ ಮಾಡಿಕೊಂಡು ಮಂಗೋಲಿಯಾವನ್ನು ಆಳಿದ ಆಡಳಿತಾಧಿಕಾರಿಯಾಗಿದ್ದಾನೆ. ತಿಮೂರನು ಸಾಮ್ರಾಜ್ಯ ಸ್ಥಾಪಕನಾದ ಚೆಂಗಿಸ್ ಖಾನನ ಸೋದರಳಿಯನಾಗಿದ್ದನು. ಯುದ್ಧದಲ್ಲಿ ಕಾಲಿಗೆ ಗಾಯವಾದ ತಿಮೂರನನ್ನು 'ಟಾಮರ್ ಲೈನ್' (ಕುಂಟನಾದ ತಿಮೂರ್) ಎಂದು ಕರೆಯುತ್ತಿದ್ದರು. 1398ರಲ್ಲಿ ಸಿಂಧೂ ನದಿಯನ್ನು ದಾಟಿ ದೆಹಲಿಗೆ ಬಂದ ತಿಮೂರನು ಅಪಾರ ಸಂಪತ್ತನ್ನು ದೋಚಿ ಕೊಂಡೊಯ್ದನು.

ಆಧುನಿಕ ಜಗತ್ತಿಗೆ ಮಾದರಿಯಾಗಿದ್ದ ಯಾವ ಯಾವ ಆಡಳಿತ ಸುಧಾರಣೆಗಳನ್ನು ಚೆಂಗಿಸ್ ಖಾನ್ ಜಾರಿಗೊಳಿಸಿದನು? ಅದರ ವಿಶೇಷತೆಗಳನ್ನು ವಿವರಿಸುವ ಟಿಪ್ಪಣಿ ತಯಾರಿಸಿರಿ.

## ಮಾಲಿ ಸಾಮ್ರಾಜ್ಯ




ಮಾಲಿ ಸಾಮ್ರಾಜ್ಯ

### ತಿಂಬುಕ್ತು

ತಿಂಬುಕ್ತು ಮಧ್ಯಕಾಲೀನ ಆಫ್ರಿಕಾದ ಪ್ರಧಾನ ಸಾಂಸ್ಕೃತಿಕ ಕೇಂದ್ರ ಮತ್ತು ವ್ಯಾಪಾರ ಕೇಂದ್ರವಾಗಿತ್ತು. ವೆನ್ನಿಸ್, ಗ್ರಾನಡ, ಜನೋವಗಳಿಂದ ವ್ಯಾಪಾರಿಗಳು ಚಿನ್ನ, ಆನೆಯದಂತ ಮತ್ತು ಗುಲಾಮರನ್ನು ವ್ಯಾಪಾರ ಮಾಡುವುದಕ್ಕಾಗಿ 'ತಿಂಬುಕ್ತು'ವಿಗೆ ಬರುತ್ತಿದ್ದರು. ತಿಂಬುಕ್ತುವಿನಲ್ಲಿದ್ದ ವಿಶ್ವವಿದ್ಯಾಲಯವು ಮಧ್ಯಕಾಲೀನ ಜಗತ್ತಿನ ಪ್ರಧಾನ ವೈಜ್ಞಾನಿಕ ಕೇಂದ್ರಗಳಲ್ಲೊಂದಾಗಿತ್ತು. ಜಗತ್ತಿನ ವಿವಿಧ ಭಾಗಗಳಿಂದ ವಿದ್ಯಾರ್ಥಿಗಳು ಇಲ್ಲಿಗೆ ಬರುತ್ತಿದ್ದರು. ಕಂಕನ್‌ಮೂಸ ಕಟ್ಟಿಸಿದ ತಿಂಬುಕ್ತುವಿನಲ್ಲಿರುವ "ಗ್ರೇಟ್ ಮೋಸ್ಕ್" ಮಧ್ಯಕಾಲೀನ ಜಗತ್ತಿನ ಪ್ರಧಾನ ಇಸ್ಲಾಮಿಕ್ ಅಧ್ಯಯನ ಕೇಂದ್ರವಾಗಿತ್ತು.

ಮಾಲಿ ಸಾಮ್ರಾಜ್ಯವು ಮಧ್ಯಕಾಲದಲ್ಲಿ ಆಫ್ರಿಕಾದಲ್ಲಿದ್ದ ಪ್ರಸಿದ್ಧವಾದ ಸಾಮ್ರಾಜ್ಯಗಳಲ್ಲೊಂದಾಗಿತ್ತು. ಪಶ್ಚಿಮ ಆಫ್ರಿಕಾದ ಮಾಲಿಯು ಆಡಳಿತ ಕೇಂದ್ರವಾಗಿತ್ತು. ಕೊಟ್ಟಿರುವ ಭೂಪಟವನ್ನು ನಿರೀಕ್ಷಿಸಿ ಆಫ್ರಿಕಾದ ಯಾವೆಲ್ಲ ಪ್ರದೇಶಗಳಲ್ಲಿ ಮಾಲಿ ಸಾಮ್ರಾಜ್ಯವು ವ್ಯಾಪಿಸಿಕೊಂಡಿತ್ತು ಎಂಬುದನ್ನು ಕಂಡುಹಿಡಿಯಿರಿ. ಪಾಶ್ಚಾತ್ಯ ದೇಶಗಳ ದಾಖಲೆಗಳಲ್ಲಿ ಮನ್‌ಸಮೌಸ ಎಂದು ಕರೆಯಲ್ಪಡುವ ಕಂಕನ್ ಮೂಸೆಯನ್ನು ಮಧ್ಯಕಾಲೀನ ಆಫ್ರಿಕಾದ ಪ್ರಸಿದ್ಧವಾದ ಆಡಳಿತಾಧಿಕಾರಿಯಾಗಿ ಪರಿಗಣಿಸಲಾಗಿತ್ತು. ಅತ್ಯಧಿಕ ಚಿನ್ನದ ನಿಕ್ಷೇಪವನ್ನು ಹೊಂದಿದ್ದ ಮಾಲಿಯು ಆ ಕಾಲದ ಸಂಪದ್ಭರಿತ ಪ್ರದೇಶವಾಗಿತ್ತು. ಮಧ್ಯಕಾಲದ ಪ್ರಧಾನ ನಗರಗಳಲ್ಲೊಂದಾದ ತಿಂಬುಕ್ತುವನ್ನು ಒಳಗೊಂಡು ಸುಮಾರು 400ರಷ್ಟು ನಗರಗಳು ಆ ಕಾಲದಲ್ಲಿ ಮಾಲಿ ಸಾಮ್ರಾಜ್ಯದಲ್ಲಿತ್ತು.

ಆಫ್ರಿಕಾವು ಕತ್ತಲೆಯ ಭೂಖಂಡವೇ? ಮಾಲಿ ಸಾಮ್ರಾಜ್ಯವನ್ನು ಆಧಾರವಾಗಿಟ್ಟುಕೊಂಡು ಚರ್ಚಿಸಿರಿ.



**ಮಕ್ಕಾದೆಡೆಗಿರುವ ಪಯಣ**

1324ರಲ್ಲಿ ಕಂಕನ್‌ಮೂಸ ಮಕ್ಕಾದ ಕಡೆಗೆ ನಡೆಸಿದ ತೀರ್ಥಯಾತ್ರೆಯು ಜಗತ್ಪ್ರಸಿದ್ಧವಾಗಿದೆ. ಕಿಲೋಗಳಷ್ಟು ಇರುವ ಚಿನ್ನದ ಗಟ್ಟಿಗಳೊಂದಿಗೆ ಆತನು ತನ್ನ ಸಂಗಡಿಗರೊಂದಿಗೆ ಪ್ರಯಾಣವನ್ನಾರಂಭಿಸಿದನು. ಪ್ರಯಾಣದ ಮಧ್ಯೆ ಭೇಟಿಯಾದ ಸಾಧುಗಳಿಗೂ ಬಡವರಿಗೂ ಮಸೀದಿಗಳಿಗೂ ತೀರ್ಥಯಾತ್ರಿಕರಿಗೂ ಚಿನ್ನವನ್ನು ದಾನವಾಗಿ ಕೊಟ್ಟನು. ಮಕ್ಕಾಕ್ಕಿರುವ ಈ ಪಯಣವು ಮಾಲಿ ಸಾಮ್ರಾಜ್ಯಕ್ಕೆ ಅಧ್ಯಾಪಕರನ್ನು ಹಾಗೂ ಮತಪಂಡಿತರನ್ನು ಆಮಂತ್ರಿಸುವುದಕ್ಕೆ ಆಗಿತ್ತು. ಕಂಕನ್‌ಮೂಸ ಮಧ್ಯಕಾಲೀನ ಜಗತ್ತಿನ ಅತ್ಯಂತ ಸಂಪನ್ನನಾದ ಆಡಳಿತಾಧಿಕಾರಿಯಾಗಿದ್ದನೆಂದು ಇಬನ್‌ಬತ್ತೂತ ವರ್ಣಿಸಿದ್ದಾನೆ.

## ಚೀನಾ ಮತ್ತು ಜಪಾನ್

ಇಂದು ಜಗತ್ತಿನಲ್ಲಿ ಅತಿ ಹೆಚ್ಚು ಜನಸಂಖ್ಯೆಯಿರುವ ದೇಶ ಯಾವುದು? ಉದಯಸೂರ್ಯನ ನಾಡೆಂದು ಕರೆಯುವ ದೇಶ ಯಾವುದು?

ಭೂಪಟದಿಂದ ಈ ದೇಶಗಳನ್ನು ಕಂಡುಹಿಡಿಯಿರಿ. ಅವುಗಳ ಇನ್ನಿತರ ಯಾವ ವಿಶೇಷತೆಗಳು ನಿಮ್ಮ ಗಮನಕ್ಕೆ ಬಂದಿವೆ? ಚರ್ಚಿಸಿ ಪಟ್ಟಿಮಾಡಿರಿ.



ದೂರದ ಪೂರ್ವದ ಪ್ರದೇಶ

ಮಧ್ಯಕಾಲದ ಆರಂಭದಲ್ಲಿ ಟಾಂಗ್ ರಾಜವಂಶವು ಚೀನಾದಲ್ಲಿ ಆಡಳಿತ ನಡೆಸುತ್ತಿತ್ತು. ದೇಶದ ಪರಮಾಧಿಕಾರವು ಚಕ್ರವರ್ತಿಯಲ್ಲಿ ನಿಕ್ಷಿಪ್ತವಾಗಿತ್ತು. ವಿದ್ಯಾಭ್ಯಾಸ ಯೋಗ್ಯತೆ ಮತ್ತು ಹಿರಿಮೆಗಳನ್ನು ಮಾನದಂಡವಾಗಿರಿಸಿ ಸ್ಪರ್ಧಾತ್ಮಕ ಪರೀಕ್ಷೆಗಳ ಮೂಲಕ ಉದ್ಯೋಗಿಗಳನ್ನು ಆಯ್ಕೆಮಾಡುತ್ತಿದ್ದರು. ಮತಸಹಿಷ್ಣುತೆಯನ್ನು ಪಾಲಿಸುತ್ತಿದ್ದ ಟಾಂಗ್ ಆಡಳಿತಾಧಿಕಾರಿಗಳು ವ್ಯಾಪಾರವನ್ನು ಪ್ರೋತ್ಸಾಹಿಸುತ್ತಿದ್ದರು. ಟಾಂಗ್ ರಾಜವಂಶದ ನಂತರ ಸೊಂಗ್, ಮಿಂಗ್, ಮಾಂಚು ರಾಜವಂಶಗಳು ಚೀನಾದಲ್ಲಿ ಆಡಳಿತ ನಡೆಸಿದವು.

ಮಧ್ಯಕಾಲೀನ ಜಪಾನಿನಲ್ಲಿಯೂ ರಾಜಕೀಯ ವಿಚಾರದಲ್ಲಿ ಅತ್ಯುನ್ನತ ಪದವಿಯನ್ನು ಚಕ್ರವರ್ತಿಯು ನಿರ್ವಹಿಸುತ್ತಿದ್ದನು. ಆದರೆ ಅಧಿಕಾರವು ಶೋಗನರೆಂದು ಕರೆಯುತ್ತಿದ್ದ ಫ್ಯೂಡಲ್ ಪ್ರಭುಗಳಲ್ಲಿ ನಿಕ್ಷಿಪ್ತವಾಗಿತ್ತು. ಭೂಮಿಯ ನಿಯಂತ್ರಣವೂ ಶೋಗನರದ್ದಾಗಿತ್ತು. ಶೋಗನರ ಕಾಲದಲ್ಲಿ ಟೋಕಿಯೋ ಆಡಳಿತ ಕೇಂದ್ರವಾಗಿ ವಿಕಾಸಗೊಂಡಿತು.

**ಮಧ್ಯಕಾಲೀನ ಚೀನಾ ಮತ್ತು ಜಪಾನಿನ ಅಧಿಕಾರದ ರಚನೆಯನ್ನು ಹೋಲಿಸಿರಿ.**



## ಮಧ್ಯಕಾಲೀನ ಅಮೇರಿಕ

ಉತ್ತರ ಅಮೇರಿಕ ಮತ್ತು ದಕ್ಷಿಣ ಅಮೇರಿಕಗಳಲ್ಲಿ ಪುರಾತನ ಕಾಲದಿಂದಲೇ ತನ್ನದೇ ಆದ ಸಂಸ್ಕೃತಿಗಳು ನೆಲೆನಿಂತಿದ್ದುವು. ಅವು ಮಧ್ಯಕಾಲದಲ್ಲಿಯೂ ಮುಂದುವರಿದುವು. ಸ್ಥಳೀಯವಾದ ಆಡಳಿತ ರೀತಿಗಳು ಅಲ್ಲಿ ಜಾರಿಯಲ್ಲಿದ್ದುವು.

| ಉತ್ತರ ಅಮೇರಿಕದ ಸಂಸ್ಕೃತಿಗಳು | ದಕ್ಷಿಣ ಅಮೇರಿಕದ ಸಂಸ್ಕೃತಿಗಳು |
|---|---|
| ◆ ಮಿಸ್ಸಿಸ್ಸಿಪಿ | ◆ ಮಾಯಾ |
| ◆ ಕೆರೀಬಿಯನ್ | ◆ ಇನ್‌ಕಾ |
| ◆ ಮೆಗಲ್ | ◆ ಅಸ್‌ಟೆಕ್ |
| ◆ ಪಡಯನ್ | ◆ ಟೊಲ್‌ಟೆಕ್ |

ವಸಾಹತುಗಳನ್ನು ಸ್ಥಾಪಿಸಲು ಹೊಸ ಪ್ರದೇಶಗಳನ್ನು ಅನ್ವೇಷಿಸುತ್ತಾ ಯುರೋಪಿಯನ್ನರು ಹದಿನಾರನೇ ಶತಮಾನದಲ್ಲಿ ಅಮೇರಿಕಾವನ್ನು ತಲುಪಿದರು. ಅಲ್ಲಿಯ ಸಂಸ್ಕೃತಿಗಳನ್ನು ನಾಶಮಾಡಿ ತೋಟಗಳನ್ನೂ ಗಣಿಗಳನ್ನೂ ನಿರ್ಮಿಸಿದರು. ಅಲ್ಲಿ ದುಡಿಯಲು ಆಫ್ರಿಕಾದಿಂದ ನೀಗ್ರೋಗಳನ್ನು ಹಿಡಿದು ತಂದು ಗುಲಾಮರನ್ನಾಗಿಸಿದರು. ಮೂಲನಿವಾಸಿಗಳ ವಂಶಹತ್ಯೆಯನ್ನೂ ಮಾಡಿದರು.

**ಮಾಯಾ ಸಂಸ್ಕೃತಿಯ ಕ್ಯಾಲೆಂಡರು**

ಮಾಯಾ ಸಂಸ್ಕೃತಿಯ ಕ್ಯಾಲೆಂಡರಿನಲ್ಲಿ 365 ದಿನಗಳಿದ್ದುವು. 20 ದಿನಗಳುಳ್ಳ 18 ತಿಂಗಳುಗಳು ಒಳಗೊಂಡಿರುವುದೇ ಒಂದು ವರ್ಷವಾಗಿತ್ತು. ಉಳಿದ 5 ದಿನಗಳು ಉತ್ಸವಗಳಿಗೂ ಆಚರಣೆಗಳೂ ಇರುವ ರಜಾದಿನಗಳಾಗಿದ್ದುವು.

**ಚಿನಂಬ**

ಜೌಗು ಪ್ರದೇಶಗಳಲ್ಲಿ ಹಸಿರು ಎಲೆಗಳನ್ನು ಒಟ್ಟಿಗೆ ಸೇರಿಸಿ ಆಸ್ಟೆಕ್‌ಗಳು ಚಿಕ್ಕ ಚಿಕ್ಕ ದ್ವೀಪಗಳನ್ನು ನಿರ್ಮಿಸಿದರು. ಫಲವತ್ತಾದ ಈ ಪ್ರದೇಶಗಳಲ್ಲಿ ಮರಗಿಡಗಳನ್ನು ನೆಟ್ಟು ಬೆಳೆಸುತ್ತಿದ್ದರು ಹಾಗೂ ಕೃಷಿ ಮಾಡುತ್ತಿದ್ದರು. ಇದನ್ನು ತೇಲುವ ಉದ್ಯಾನ (ಚಿನಂಬ)ವೆಂದು ಕರೆಯುತ್ತಿದ್ದರು.

## ಫ್ಯೂಡಲಿಸಂನ ಪತನ

ಮಧ್ಯಕಾಲೀನ ಯುರೋಪಿನಲ್ಲಿ ಜಾರಿಯಲ್ಲಿದ್ದ ಭೂ ಆಧಾರಿತ ಸಾಮಾಜಿಕ-ರಾಜಕೀಯ-ಆರ್ಥಿಕ ವ್ಯವಸ್ಥೆಯನ್ನು ಫ್ಯೂಡಲಿಸಂ ಎಂದು ಕರೆಯುತ್ತಿದ್ದರು. ಫ್ಯೂಡಲಿಸಂನ ರಚನೆ ಮತ್ತು ವಿಶೇಷತೆಗಳನ್ನು ಹಿಂದಿನ ತರಗತಿಗಳಲ್ಲಿ ಚರ್ಚಿಸಿದ್ದೇವಲ್ಲವೇ. ಹದಿನೈದನೇ ಶತಮಾನದಲ್ಲಿ ಯುರೋಪಿನಲ್ಲಿ ಫ್ಯೂಡಲಿಸಂ ಪತನಗೊಳ್ಳಲು ಆರಂಭವಾಯಿತು. ಫ್ಯೂಡಲಿಸಂನ ಪತನಕ್ಕೆ ಕಾರಣಗಳು ಯಾವುವು?

ಮಧ್ಯಕಾಲದ ಅಂತ್ಯದಲ್ಲಿ ಹವಾಮಾನದಲ್ಲಾದ ಏರುಪೇರುಗಳು ಕೃಷಿ ಉತ್ಪಾದನೆ ಕಡಿಮೆಯಾಗಲು ಕಾರಣವಾದುವು. ಇದರಿಂದ ಯುರೋಪಿನ ಹಲವೆಡೆಗಳಲ್ಲಿ ಬರಗಾಲ ವ್ಯಾಪಿಸಿತು. ನಿರಂತರವಾಗಿ

ಬಂದ 'ಕರಿಮರಣ'ವೆಂದು ಕರೆಯುತ್ತಿದ್ದ ಪ್ಲೇಗ್ ಯುರೋಪಿನ ಒಟ್ಟು ಜನಸಂಖ್ಯೆಯ ಅರ್ಧಾಂಶದಷ್ಟು ಜನರ ಜೀವವನ್ನು ನಾಶಮಾಡಿತು. ಮತದ ಹೆಸರಿನಲ್ಲಿ ಆರಂಭಿಸಿದ ಶಿಲುಬೆ ಯುದ್ಧಗಳು ಫ್ಯೂಡಲ್ ಪ್ರಭುಗಳ ಪತನಕ್ಕೆ ಕಾರಣವಾದುವು. ಫ್ಯೂಡಲ್ ಪ್ರಭುಗಳನ್ನು ದಮನಿಸಲು ರಾಜರು ಪಿರಂಗಿಗಳನ್ನು ಮತ್ತು ಸಿಡಿಮದ್ದುಗಳನ್ನು ತಮ್ಮ ನಿಯಂತ್ರಣಕ್ಕೊಳಪಡಿಸಿದರು. ಯುರೋಪಿನ ವಿವಿಧ ಭಾಗಗಳಲ್ಲಿ ನಡೆದ ಕೃಷಿಕರ ದಂಗೆಗಳು ಮತ್ತು ಯುದ್ಧಗಳು ಫ್ಯೂಡಲ್ ಪ್ರಭುಗಳನ್ನು ದುರ್ಬಲಗೊಳಿಸಲು ಹಾಗೂ ರಾಜಾಡಳಿತವನ್ನು ಸುದೃಢಗೊಳಿಸಲು ಸಹಾಯಕವಾಯಿತು. ಇದು ದೇಶ ರಾಷ್ಟ್ರಗಳ ಹುಟ್ಟಿಗೆ ಕಾರಣವಾಯಿತು.

**ಫ್ಯೂಡಲಿಸಂನ ಪತನಕ್ಕೆ ಕಾರಣಗಳಾವುವು?**



### ಶಿಲುಬೆ ಯುದ್ಧಗಳು

ಹನ್ನೊಂದನೇ ಶತಮಾನದಿಂದ ಹದಿಮೂರನೇ ಶತಮಾನದ ವರೆಗೆ ಯುರೋಪಿನ ಫ್ಯೂಡಲ್ ಪ್ರಭುಗಳ ಮತ್ತು ಒಟ್ಟೋಮನ್ ತುರ್ಕಿಗಳೊಳಗೆ ನಡೆದ ಯುದ್ಧಗಳನ್ನು 'ಶಿಲುಬೆ ಯುದ್ಧಗಳು' ಎಂದು ಕರೆಯುತ್ತಾರೆ. ಕ್ರೈಸ್ತ, ಇಸ್ಲಾಂ ಮತ್ತು ಯಹೂದಿ ಮತಾನುಯಾಯಿಗಳೆಲ್ಲರೂ ಪವಿತ್ರ ನಗರವಾಗಿ ಪರಿಗಣಿಸಿರುವ ಜರುಸಲೇಂ ಪಟ್ಟಣವನ್ನು ವಶಪಡಿಸುವುದಕ್ಕಾಗಿ ಈ ಯುದ್ಧಗಳು ನಡೆದುವು. ಪೌರಾತ್ಯ ಸಂಸ್ಕೃತಿಯು ಯುರೋಪಿನಲ್ಲಿ ವ್ಯಾಪಿಸಲಿರುವ ಪ್ರಧಾನ ಕಾರಣಗಳಲ್ಲೊಂದಾಗಿ ಶಿಲುಬೆ ಯುದ್ಧಗಳನ್ನು ಪರಿಗಣಿಸಬಹುದು.

### ಮೆಗ್ನಾಕಾರ್ಟ

ಮಧ್ಯಕಾಲದಲ್ಲಿ ಇಂಗ್ಲೆಂಡನ್ನು ಆಳುತ್ತಿದ್ದ ಪ್ಲಾಂಟೊ ಜನಟ್ ರಾಜವಂಶದ ಜೋನ್ ರಾಜನು ತುಂಬ ಸ್ವೇಚ್ಛಾಧಿಪತಿಯಾಗಿದ್ದನು. ಜನರ ಮೂಲಭೂತ ಅವಶ್ಯಕತೆಗಳನ್ನೂ ಕೂಡಾ ನಿಷೇಧಿಸುವಂತಹ ಸಮೀಪನವನ್ನು ಆತನು ಸ್ವೀಕರಿಸಿದನು. ತಾಳ್ಮೆಯನ್ನು ಕಳೆದುಕೊಂಡ ಜನರು ರಾಜನಿಗೆದುರಾಗಿ ಪ್ರತಿಭಟಿಸಿದರು. 1215 ಜೂನ್ 15ರಂದು ರನ್ನಿಮೀಡ್‌ನಲ್ಲಿರುವ ಮೈದಾನದಲ್ಲಿ ಹಕ್ಕುಪತ್ರವೊಂದಕ್ಕೆ ರಾಜನನ್ನು ನಿರ್ಬಂಧಿಸಿ ಸಹಿ ಹಾಕಿಸಿದರು. ಇದುವೇ ಇಂಗ್ಲಿಷ್ ಚರಿತ್ರೆಯಲ್ಲಿ ಸುಪ್ರಸಿದ್ಧವಾದ ಮೆಗ್ನಾಕಾರ್ಟವಾಗಿದೆ. ಇಂಗ್ಲಿಷರು ಇಂದು ಅನುಭವಿಸುತ್ತಿರುವ ಹಕ್ಕುಗಳಿಗೆ ಆಧಾರ ಈ ದಾಖಲೆಯಾಗಿದೆ. ಎಲ್ಲ ಪ್ರಜೆಗಳನ್ನು ಕಾನೂನಿನ ಮುಂದೆ ಸಮಾನರೆಂಬ ನಿಯಮವನ್ನು ಈ ದಾಖಲೆಯಲ್ಲಿ ಸೇರಿಸಲಾಗಿದೆ.

ಮಧ್ಯಕಾಲೀನ ಜಗತ್ತಿನ ವಿವಿಧ ಭಾಗಗಳಲ್ಲಿ ಜಾರಿಯಲ್ಲಿದ್ದ ಅಧಿಕಾರದ ರಚನೆಗಳ ಕುರಿತು ಸೆಮಿನಾರೊಂದನ್ನು ಆಯೋಜಿಸಿರಿ.



ಮಧ್ಯಕಾಲೀನ ಜಗತ್ತಿನಲ್ಲಿ ಜಾರಿಯಲ್ಲಿದ್ದ ಅಧಿಕಾರದ ರಚನೆಗಳನ್ನು ನಾವು ಈ ಅಧ್ಯಾಯದಲ್ಲಿ ಪರಿಚಯಿಸಿಕೊಂಡೆವು. ಇತರ ಕಾಲಗಳಂತೆಯೇ ಈ ಕಾಲದಲ್ಲಿಯೂ ಆಡಳಿತ ಕ್ಷೇತ್ರದಲ್ಲಿ ಗಮನಾರ್ಹವಾದ ಅನೇಕ ಸುಧಾರಣೆಗಳು ಏಷ್ಯಾ, ಆಫ್ರಿಕಾ, ಯುರೋಪು ಹಾಗೂ ಅಮೇರಿಕಾದಲ್ಲಿ ಉಂಟಾದುವು. ಆಧುನಿಕ ಕಾಲದ ಕಡೆಗಿನ ಪ್ರಯಾಣಕ್ಕೆ ಈ ಸುಧಾರಣೆಗಳು ಮತ್ತು ಅಧಿಕಾರದ ರಚನೆಗಳು ನವಚೈತನ್ಯವನ್ನು ತುಂಬಿದುವು.




## ಪ್ರಧಾನ ಕಲಿಕಾ ಸಾಧನೆಗಳಲ್ಲಿ ಒಳಪಡುವವುಗಳು

- ಸಿ.ಇ. 5ನೇ ಶತಮಾನದಿಂದ ಸಿ.ಇ. 15ನೇ ಶತಮಾನದವರೆಗಿನ ಜಗತ್ತಿನ ಪ್ರಧಾನ ಅಧಿಕಾರದ ರಚನೆಗಳನ್ನು ವಿಶ್ಲೇಷಿಸುವುದು.
- ಪೌರಾತ್ಯ ರೋಮ್ ಸಾಮ್ರಾಜ್ಯದ ವಿಶೇಷತೆಗಳನ್ನು ಕಂಡುಹಿಡಿಯುವುದು.
- ಮಧ್ಯಕಾಲೀನ ಜಗತ್ತಿಗೆ ಅರೇಬಿಯನ್ನರು ನೀಡಿದ ರಾಜಕೀಯ ಕೊಡುಗೆಗಳನ್ನು ತಿಳಿಯುವುದು.
- ಒಟ್ಟೋಮನ್ ಸಾಮ್ರಾಜ್ಯವು ರೂಪುಗೊಳ್ಳಲಿರುವ ಸನ್ನಿವೇಶವನ್ನು ವಿಶ್ಲೇಷಿಸುವುದು.
- ಮಂಗೋಲಿಯನ್ನರ ವಿಶೇಷತೆಗಳನ್ನು ಸ್ಪಷ್ಟಪಡಿಸುವುದು.
- ಮಧ್ಯಕಾಲೀನ ಯುರೋಪಿನ ರಾಜಕೀಯ ರಂಗದಲ್ಲಿ ಷಾಲಮೀನ್ ರಾಜನ ಪ್ರತ್ಯೇಕತೆಯನ್ನು ತಿಳಿಯುವುದು.
- ಮಧ್ಯಕಾಲೀನ ಆಫ್ರಿಕಾದ ಅಧಿಕಾರದ ರಚನೆಯನ್ನು ಸ್ಪಷ್ಟಪಡಿಸುವುದು.
- ಮಧ್ಯಕಾಲೀನ ಜಪಾನಿನಲ್ಲಿ ಮತ್ತು ಚೀನಾದಲ್ಲಿ ಜಾರಿಯಲ್ಲಿದ್ದ ಅಧಿಕಾರದ ರಚನೆಗಳನ್ನು ಹೋಲಿಸುವುದು.
- ಮಧ್ಯಕಾಲೀನ ಅಮೇರಿಕಾದಲ್ಲಿದ್ದ ಸಂಸ್ಕೃತಿಗಳ ಪಟ್ಟಿತಯಾರಿಸುವುದು.

## ಮೌಲ್ಯನಿರ್ಣಯ ಮಾಡುವ

- 'ಎ' ಯೊಂದಿಗಿನ ಸಂಬಂಧಗಳನ್ನು ತಿಳಿದುಕೊಂಡು 'ಬಿ'ಯನ್ನು ಪೂರ್ತಿಗೊಳಿಸಿರಿ.

1 . ಎ. ಬೈಝಾಂಟೈನ್ ಸಾಮ್ರಾಜ್ಯ - ಜಸ್ಟೀನಿಯನ್
ಬಿ. .............................. - ಷಾಲಮೀನ್

2 . ಎ. ತಿಂಬುಕ್ತು - ಮಾಲಿ ಸಾಮ್ರಾಜ್ಯ
ಬಿ. ಬಾಗ್ದಾದ್ - ..........................

3 . ಎ. ಟಾಂಗ್ ರಾಜವಂಶ - ಚೀನಾ
ಬಿ. ಶೋಗನರು - ..........................

4 . ಎ. ಹಿಜಿರ - ಸಿ.ಇ. 622
ಬಿ. ತುರ್ಕಿಯ ಕೋನ್‌ಸ್ಟೆಂಟಿನೋಪಲ್ ಆಕ್ರಮಣ - ..........................

- 'ಎ' ವಿಭಾಗದಲ್ಲಿ ಕೊಟ್ಟಿರುವವುಗಳಿಗೆ ಸರಿಹೊಂದುವವುಗಳನ್ನು 'ಬಿ' ವಿಭಾಗದಿಂದ ಕಂಡುಹಿಡಿದು ಬರೆಯಿರಿ.

| ಎ | ಬಿ |
|---|---|
| ♦ ಚೆಂಗಿಸ್‌ಖಾನ್ | ಅರೇಬಿಯನ್ ನೈಟ್ಸ್ |
| ♦ ಕಂಕನ್ ಮೂಸ | ಹಿಜಿರ |
| ♦ ಹಾರೂನ್-ಅಲ್-ರಶೀದ್ | ಮಕ್ಕಾದ ಕಡೆಗಿನ ತೀರ್ಥಯಾತ್ರೆ |
| ♦ ಪ್ರವಾದಿ ಮುಹಮ್ಮದ್ | ಕೊರಿಯರ್ ವ್ಯವಸ್ಥೆ |

- ಜಸ್ಟೀನಿಯನ್‌ನ ನಿಯಮಸಂಹಿತೆಯ ವಿಶೇಷತೆಗಳು ಯಾವುವು?
- ಪೌರಾತ್ಯ ರೋಮ್ ಸಾಮ್ರಾಜ್ಯದ ಪತನಕ್ಕಿರುವ ಪ್ರಧಾನ ಕಾರಣಗಳಾವುವು?
- ಅಬ್ಬಾಸಿಯಾ ಖಲೀಫರಲ್ಲಿ ಹಾರೂನ್-ಅಲ್-ರಶೀದ್‌ನು ಸುಪ್ರಸಿದ್ಧ ಆಡಳಿತಾಧಿಕಾರಿಯಾಗಿದ್ದನು. ಈ ಹೇಳಿಕೆಯ ಸತ್ಯಾಂಶಗಳನ್ನು ಪರಿಶೀಲಿಸಿರಿ.
- ಮಂಗೋಲಿಯಾ ಸೈನ್ಯದ ಪ್ರಧಾನ ವಿಶೇಷತೆಗಳು ಯಾವುವು?
- ಚೆಂಗಿಸ್‌ಖಾನ್ ಜಾರಿಗೆ ತಂದ ಆಶಯವಿನಿಮಯ ವಿಧಾನದ ಹೆಸರನ್ನು ಬರೆಯಿರಿ. ಇದರ ವಿಶೇಷತೆಗಳು ಯಾವುವು?

- ಕೋನ್‌ಸ್ಟೆಂಟಿನೋಪಲ್, ಬಾಗ್ದಾದ್, ತಿಂಬುಕ್ತು ಮುಂತಾದ ಮಧ್ಯಕಾಲೀನ ನಗರಗಳ ವಿಶೇಷತೆಗಳನ್ನು ಪಟ್ಟಿಮಾಡಿರಿ.
- ಫ್ಯೂಡಲಿಸಂನ್ನು ಪತನದೆಡೆಗೆ ಸಾಗಿಸಿದ ಸನ್ನಿವೇಶಗಳನ್ನು ವಿಶ್ಲೇಷಿಸಿರಿ.
- ಕೋನ್‌ಸ್ಟೆಂಟಿನೋಪಲ್, ಬಾಗ್ದಾದ್, ಮಕ್ಕ, ಮದೀನ, ಡಮಾಸ್ಕಸ್, ಕಾರಕೋರಂ, ಮಾಲಿ, ತಿಂಬುಕ್ತು, ಟೋಕಿಯೋ ಮುಂತಾದ ಮಧ್ಯಕಾಲೀನ ನಗರಗಳ ಸ್ಥಾನವನ್ನು ಜಾಗತಿಕ ಭೂಪಟದಲ್ಲಿ ಕಂಡುಹಿಡಿಯಿರಿ. ಇಂದು ಈ ನಗರಗಳು ಯಾವ ಯಾವ ದೇಶದಲ್ಲಿವೆಯೆಂದು ಕಂಡುಹಿಡಿದು ಪಟ್ಟಿಮಾಡಿರಿ.



## ಮುಂದುವರಿದ ಚಟುವಟಿಕೆಗಳು

- ಮಧ್ಯಕಾಲೀನ ಜಗತ್ತು 'ಕತ್ತಲೆಯ ಯುಗ'ವಾಗಿತ್ತೇ? ತರಗತಿಯಲ್ಲಿ ಸಂವಾದವನ್ನು ನಡೆಸಿರಿ.
- ಪ್ರವಾಸ ಕಥನವನ್ನೊಳಗೊಂಡ ಗ್ರಂಥಗಳನ್ನು ಸಂಗ್ರಹಿಸಿ ಏಷ್ಯಾ, ಆಫ್ರಿಕಾ, ಯುರೋಪು, ಅಮೇರಿಕಾ ಎಂಬ ಪ್ರದೇಶಗಳ ಕುರಿತು ಟಿಪ್ಪಣಿಯೊಂದನ್ನು ತಯಾರಿಸಿರಿ.



ಅಧ್ಯಾಯ

02



# ಪೌರಾತ್ಯ ಮತ್ತು ಪಾಶ್ಚಾತ್ಯ ವಿನಿಮಯಗಳ ಕಾಲ

> ಮರುಭೂಮಿಯ ಯಾತ್ರಾಮಧ್ಯೆ ರಾತ್ರಿಸಮಯದಲ್ಲಿ ಯಾವುದಾದರೊಂದು ಕಾರಣದಿಂದ ಗುಂಪಿನಿಂದ ತಪ್ಪಿದೆವೆಂದು ಭಾವಿಸುವ. ಗುಂಪಿನಲ್ಲಿ ಪುನಃ ಸೇರಲು ಪ್ರಯತ್ನಿಸುವ ಸಮಯದಲ್ಲಿ ಕತ್ತಲೆಯಿಂದ ತನ್ನ ಗುಂಪಿನಲ್ಲಿದ್ದವರು ಮಾತನಾಡುತ್ತಾರೆಂದು ಅವನಿಗೆ ಭಾಸವಾಗುತ್ತದೆ. ಕೆಲವೊಮ್ಮೆ ತನ್ನ ಹೆಸರು ಹೇಳಬಹುದು. ಈ ಶಬ್ದಗಳ ಹಿಂದೆ ಹೋದರೆ ದಾರಿತಪ್ಪಿಹೋಗಿ ಮರಣಹೊಂದಬಹುದು. ಕೆಲವೊಮ್ಮೆ ರಾತ್ರಿಕಾಲದಲ್ಲಿ ಕುದುರೆಗಳ ಗೊರಸುಗಳ ಶಬ್ದವನ್ನೂ ಕೇಳಬಹುದು. ಶಬ್ದ ಬಂದ ದಿಕ್ಕಿನತ್ತ ಹೋದರೆ ತೊಂದರೆ ನಿಶ್ಚಿತ. ಕೆಲವು ಸಲ ಗಾಳಿಯ ಝೇಂಕಾರ ಶಬ್ದವೂ ಆಯುಧಗಳನ್ನು ಝಳಪಿಸುವಾಗ ಬರುವ ಶಬ್ದವೂ ಆಗಿರಬಹುದು. ಈ ರೀತಿಯ ಅಪಾಯಗಳನ್ನು ತಪ್ಪಿಸಲು ವ್ಯಾಪಾರಿ ಸಂಘಗಳು ಸಾಧ್ಯವಾದಷ್ಟು ಒಟ್ಟಾಗಿ ಸೇರಿಕೊಂಡು ರಾತ್ರಿ ಮಲಗುವ ಸಮಯದಲ್ಲಿ ಮುಂದಿನ ದಿನ ಹೋಗುವ ಸ್ಥಳದ ಕುರಿತಾದ ಮಾಹಿತಿಗಳನ್ನು ಪಡೆಯಲು ಅನುಕೂಲವಾಗುವಂತೆ ದಿಕ್ಸೂಚಿಗಳನ್ನು ಇಡುತ್ತಿದ್ದರು ಮತ್ತು ಮೃಗಗಳ ಕುತ್ತಿಗೆಗೆ ಚಿಕ್ಕದಾದ ಮಣಿಗಳನ್ನು ಕಟ್ಟುತ್ತಿದ್ದರು.
>
> **ಮಾರ್ಕೋಪೋಲೋ**

ಮೇಲಿನ ವಿವರಣೆಗಳನ್ನು ಓದಿದಿರಲ್ಲವೇ. ಈ ಪ್ರವಾಸ ಕಥನದಿಂದ ಯುರೋಪಿನ ಪ್ರಸಿದ್ಧ ಸಂಚಾರಿಯಾಗಿದ್ದ ಮಾರ್ಕೋಪೋಲೋನ ಗ್ರಂಥದಿಂದ ಆರಿಸಲಾಗಿದೆ. ಇವುಗಳು ಮಧ್ಯಕಾಲದ 'ವ್ಯಾಪಾರಿ ಸಂಘ' ಗಳ ಕುರಿತಾದ ವಿವರಣೆಗಳಾಗಿವೆ. ಪ್ರಧಾನವಾಗಿ ಪೌರಾತ್ಯ ಮತ್ತು ಪಾಶ್ಚಿಮಾತ್ಯ ದೇಶಗಳೊಂದಿಗೆ ವ್ಯಾಪಾರ ಮಾಡುವ ಈ ಸಂಘಗಳು ಅಪಾಯವನ್ನು ತಂದೊಡ್ಡಬಲ್ಲ ವಾಣಿಜ್ಯ ಮಾರ್ಗಗಳ ಮೂಲಕ ಅತ್ಯಂತ ಸಾಹಸಿಕವಾಗಿ ಸಂಚರಿಸುತ್ತಿದ್ದರು.

ಕೆಳಗಿನ ಭೂಪಟದಲ್ಲಿ ಮಧ್ಯಕಾಲದ ಎರಡು ವಾಣಿಜ್ಯ ಮಾರ್ಗಗಳನ್ನು ಗುರುತಿಸಲಾಗಿದೆ. ಇದನ್ನು ಗಮನಿಸಿದಾಗ ನಿಮಗೆ ತಿಳಿಯಬಹುದಾದ ವಿಷಯಗಳು ಯಾವುವು?




*ರೇಶ್ಮೆ ಮಾರ್ಗ ಮತ್ತು ಸುಗಂಧದ್ರವ್ಯ ವಾಣಿಜ್ಯ ಮಾರ್ಗಗಳನ್ನು ಸೂಚಿಸುವ ಭೂಪಟ*

### ರೇಷ್ಮೆ ದಾರಿ(Silk Route)

ಚೀನಾದಿಂದ ಯುರೋಪಿನ ತನಕ ನೆಲದ ಮೂಲಕ ಸಾಗುವ ವಾಣಿಜ್ಯ ಮಾರ್ಗವು ರೇಷ್ಮದಾರಿ ಎಂದು ಕರೆಯಲ್ಪಟ್ಟಿತ್ತು. ಪೂರ್ವ ಮತ್ತು ಪಶ್ಚಿಮವನ್ನು ಜೋಡಿಸುವ ಈ ವಾಣಿಜ್ಯ ಮಾರ್ಗವು ಸುಮಾರು 6000 ಕಿ.ಮೀ. ಉದ್ದವಾಗಿತ್ತು. ಚೀನಾ, ಭಾರತ ಉಪ ಭೂಖಂಡ, ಪರ್ಶಿಯ, ಯುರೋಪ್, ಆಫ್ರಿಕಾದ ಉತ್ತರ ಭಾಗದಲ್ಲಿರುವ ಪ್ರದೇಶಗಳ ವಾಣಿಜ್ಯ ಸಾಂಸ್ಕೃತಿಕ-ವೈಜ್ಞಾನಿಕ ಬೆಳವಣಿಗೆಗೆ ರೇಶ್ಮೆ ದಾರಿ ಮತ್ತು ಅವುಗಳ ಮಧ್ಯೆ ಕಂಡುಬರುವ ವಿಶ್ರಾಂತಿಧಾಮಗಳಾದ "ಸರಾಯಿ"ಗಳು ಸಹಾಯಕವಾಗಿದ್ದವು.

- ಚೀನಾದ ಪೂರ್ವಭಾಗದಿಂದ ಪಶ್ಚಿಮ ಯುರೋಪಿನ ತನಕ ಈ ಮಾರ್ಗಗಳು ವ್ಯಾಪಿಸಿದ್ದವು.
- ರೇಶ್ಮೆದಾರಿ ನೆಲಮಾರ್ಗವಾಗಿತ್ತು ಮತ್ತು ಸುಗಂಧ ದ್ರವ್ಯ ದಾರಿಯು ಸಮುದ್ರಮಾರ್ಗವಾಗಿತ್ತು.
- ಹಲವಾರು ವ್ಯಾಪಾರ ಕೇಂದ್ರಗಳ ಮೂಲಕ ಈ ದಾರಿಗಳು ಹಾದುಹೋಗುತ್ತಿದ್ದವು.
- 
- 

ಮಧ್ಯಕಾಲದ ಆರಂಭದಲ್ಲಿ ದುರ್ಬಲವಾಗಿದ್ದ ಪಾಶ್ಚಾತ್ಯ-ಪೌರಾತ್ಯ ವ್ಯಾಪಾರವು ಶಿಲುಬೆಯುದ್ಧದ ಬಲಗೊಂಡಿತು. ಯುದ್ಧದ ಆರಂಭದೊಂದಿಗೆ ಇಟೆಲಿಯ ವ್ಯಾಪಾರಿಗಳು ಪೌರಾತ್ಯ ರೋಮ್ ಸಾಮ್ರಾಜ್ಯದೊಂದಿಗೂ ಅರಬರೊಂದಿಗೂ ದೀರ್ಘದೂರದ ವ್ಯಾಪಾರ ಸಂಬಂಧಗಳನ್ನಿಟ್ಟುಕೊಂಡಿದ್ದರು. ಬಾಗ್ದಾದ್, ಡಮಾಸ್ಕಸ್, ಜೆರುಸಲೇಂ ಮೊದಲಾದ ಪಟ್ಟಣಗಳಿಗೆ ಇಟೆಲಿಯ ವ್ಯಾಪಾರಿಗಳು ಜನರನ್ನು ಮತ್ತು ವಸ್ತುಗಳನ್ನು ರಫ್ತುಮಾಡುತ್ತಿದ್ದರು.


ಮಧ್ಯಕಾಲದ ಒಂದು ವ್ಯಾಪಾರಿ ಸಂಘ- ಚಿತ್ರಕಾರನ ಕಲ್ಪನೆಯಲ್ಲಿ

ಉತ್ಪಾದನೆಯ ಹೆಚ್ಚಳ, ಉತ್ಪನ್ನಗಳ ವೈವಿಧ್ಯ, ರಸ್ತೆ ಮತ್ತು ಸೇತುವೆಗಳ ನಿರ್ಮಾಣ, ಕಳ್ಳರನ್ನೂ ದರೋಡೆಕೋರರನ್ನೂ ದಮನಿಸುವ ಕಾರ್ಯದಕ್ಷತೆಯಿಂದ ಕೂಡಿದ ಕ್ರಮಗಳ ಫಲವಾಗಿ ಪಾಶ್ಚಿಮಾತ್ಯ-ಪೌರಾತ್ಯ ರಾಷ್ಟ್ರಗಳೊಳಗಿನ ವಾಣಿಜ್ಯ ಸಂಬಂಧವು ಬಲಗೊಂಡಿತು.

### ಸುಗಂಧ ದ್ರವ್ಯ ಮಾರ್ಗ (Spice Route)

ಸುಗಂಧದ್ರವ್ಯವು ಪೂರ್ವ ಮತ್ತು ಪಶ್ಚಿಮವನ್ನು ಜೋಡಿಸುವ ಸಮುದ್ರದ ಮೂಲಕ ಸಾಗುವ ಮಾರ್ಗವಾಗಿದೆ. ಜಪಾನಿನ ತೀರಪ್ರದೇಶ, ಭಾರತ, ಚೀನಾ, ಇಂಡೋನೇಶ್ಯಾ, ಶ್ರೀಲಂಕಾ, ಮಧ್ಯಏಷ್ಯಾ ಎಂಬೀ ಪ್ರದೇಶಗಳ ಮೂಲಕ ಹಾದುಹೋಗುವ ಈ ಮಾರ್ಗದ ಪ್ರಧಾನ ವ್ಯಾಪಾರ ವಸ್ತುವು ಸುಗಂಧದ್ರವ್ಯವಾಗಿತ್ತು.

## ಮಧ್ಯಕಾಲ ಜಗತ್ತಿನ ನಗರಗಳು

ಹನ್ನೊಂದನೇ ಶತಮಾನದಲ್ಲಿ ಯುರೋಪಿನಲ್ಲಿ ಶಾಂತಿ, ಸಮಾಧಾನ, ಸ್ಥಿರತೆಗಳು ಉಂಟಾದಾಗ ಪ್ರಾಚೀನ ರೋಮ್ ಸಾಮ್ರಾಜ್ಯದ ನಗರಗಳು ಪುನಃ ಸಕ್ರಿಯವಾದುವು. ಇದಲ್ಲದೆ ಹಲವು ಹೊಸ ನಗರಗಳು ತಲೆಎತ್ತಿದುವು. ಅವುಗಳು

- ಫ್ಯೂಡಲ್ ದೊರೆಗಳ ಅರಮನೆಗಳ ಹತ್ತಿರದಲ್ಲಿರುವ ನಗರಗಳು.
- ಇಗರ್ಜಿಗಳ ಸುತ್ತಲೂ ಬೆಳೆದು ಬಂದ ನಗರಗಳು.
- ವ್ಯಾಪಾರಿ ಕೇಂದ್ರಗಳು ವಿಸ್ತರಿಸಲ್ಪಟ್ಟಾಗ ಬೆಳೆದು ಬಂದ ನಗರಗಳು.

ಮಧ್ಯಕಾಲದಲ್ಲಿ ಕೃಷಿಕರು ತಮ್ಮ ಉತ್ಪನ್ನಗಳೊಂದಿಗೆ ಸಾರ್ವಜನಿಕ ಮಾರುಕಟ್ಟೆಗಳಿಗೆ ವ್ಯಾಪಾರಕ್ಕಾಗಿ ಬಂದರು. ವ್ಯಾಪಾರಿಗಳು, ಕರಕುಶಲವಸ್ತುಗಳ ಕೆಲಸಗಾರರು ಇಂತಹ ಕೇಂದ್ರಗಳಲ್ಲಿ ಸ್ಥಿರವಾಗಿ ನೆಲೆಸಿ ದೂರದ ಪ್ರದೇಶಗಳೊಂದಿಗೆ ವ್ಯಾಪಾರ ನಡೆಸಿದರು. ಇದು ಮುಂದೆ ನಗರಗಳ ಬೆಳವಣಿಗೆಗೆ ಕಾರಣವಾಯಿತು.

ಫ್ಯೂಡಲ್ ಆಡಳಿತದ ಕುರಿತು ಹಿಂದಿನ ತರಗತಿಗಳಲ್ಲಿ ಕಲಿತಿರುವಿರಲ್ಲವೇ. ಈ ಕಾಲದಲ್ಲಿ ನಾಣ್ಯದ ಬಳಕೆಗೆ ಹೆಚ್ಚಿನ ಪ್ರಾಧಾನ್ಯವಿರಲಿಲ್ಲ. ಆದರೆ ಯುರೋಪಿನ ಹಲವೆಡೆಗಳಲ್ಲಿ ವ್ಯಾಪಾರಿ ಕೇಂದ್ರಗಳು ಬೆಳೆದು ಬಂದಾಗ ವಿನಿಮಯಕ್ಕೆ ನಾಣ್ಯದ ಬಳಕೆಯು ಅತ್ಯವಶ್ಯಕವೆನಿಸಿತು. 13ನೇ ಶತಮಾನದ ವೇಳೆಗೆ ಇಟಲಿಯ ನಗರಗಳಾದ ಫ್ಲೋರೆನ್ಸ್, ವೆನಿಸ್ ಮೊದಲಾದೆಡೆಗಳಲ್ಲಿ ನಾಣ್ಯದ ಮುದ್ರಣ ಮತ್ತು ಬಳಕೆಯು ಪ್ರಾರಂಭವಾಯಿತು. ಇತರ ಯುರೋಪಿನ ದೇಶಗಳಿಗೆ

ಹೋಲಿಸಿದರೆ ಇಟಲಿಯ ಉಪದ್ವೀಪದ ಬಂದರುಗಳು ಮತ್ತು ನಗರಗಳು, ವ್ಯಾಪಾರಿಗಳಿಗೆ ಲಭಿಸಿದ ಸೌಲಭ್ಯಗಳು, ಆಡಳಿತಾಧಿಕಾರಿಗಳ ಪ್ರೋತ್ಸಾಹ ಮೊದಲಾದುವು ಇಟಲಿಯ ನಗರಗಳ ವಿಕಾಸಕ್ಕೆ ಅನುಕೂಲಕರವಾದ ಸನ್ನಿವೇಶವನ್ನು ಒದಗಿಸಿದವು. ಸಿ.ಇ. 1050ರಿಂದ ಸಿ.ಇ. 1300ರ ಮಧ್ಯೆ ಜಿನೇವಾ, ಪೀಸಾ, ವೆನ್ನಿಸ್, ಫ್ಲೋರೆನ್ಸ್ ಮೊದಲಾದ ಇಟಲಿಯ ನಗರಗಳು ಪ್ರಧಾನ ವಾಣಿಜ್ಯ ಕೇಂದ್ರಗಳಾದುವು.

ಭೂಪಟವನ್ನು ನೋಡಿ ಯುರೋಪಿನ ಪ್ರಧಾನ ವಾಣಿಜ್ಯ ಕೇಂದ್ರಗಳನ್ನು ಕಂಡುಹಿಡಿದು ಪಟ್ಟಿ ತಯಾರಿಸಿರಿ.

ಮಧ್ಯಕಾಲದಲ್ಲಿ ಇಟಲಿಯಲ್ಲಿ ವ್ಯಾಪಾರ ಕೇಂದ್ರಗಳು ಬೆಳೆಯಲು ಸಹಾಯಕವಾದ ಸನ್ನಿವೇಶವನ್ನು ಅವಲೋಕಿಸಿರಿ.


ಮಧ್ಯಕಾಲದ ಯುರೋಪಿನ ಒಂದು ನಗರ - ಚಿತ್ರಕಾರನ ಕಲ್ಪನೆಯಲ್ಲಿ

ಮಧ್ಯಕಾಲದ ನಗರಗಳಲ್ಲಿ ಹೆಚ್ಚಿನವುಗಳು ನದೀದಡದಲ್ಲಿ ಬೆಳೆದು ಬಂದುವು. ನದಿಗಳ ಮೂಲಕ ವಸ್ತುಗಳನ್ನು ಸಾಗಿಸಲು ಸುಲಭವಾದುದರಿಂದ ತಾವು ಉತ್ಪಾದಿಸಿದ ವಸ್ತುಗಳನ್ನು ದೊಡ್ಡ ಪ್ರಮಾಣದಲ್ಲಿ ಮಾರಾಟ ಮಾಡಲು ಸೌಕರ್ಯಗಳು ಲಭಿಸಿದವು. ವ್ಯಾಪಾರ ಕೇಂದ್ರಗಳಲ್ಲಿ ಉತ್ಪಾದನೆಗೆ ಬೇಕಾದ ಸೌಕರ್ಯಗಳು ಅಧಿಕಾರಿಗಳಿಂದ ಲಭಿಸಿದುದು ಮತ್ತು ಮಧ್ಯಕಾಲದಲ್ಲಿ ಉಂಟಾದ ಜನಸಂಖ್ಯಾ ಹೆಚ್ಚಳವು ಹೊಸ ನಗರಗಳ ಬೆಳವಣಿಗೆಗೆ ಸಹಾಯಕವಾದ ಇತರ ಘಟಕಗಳಾಗಿವೆ.

ಸಮಾಜವಿಜ್ಞಾನ ಪ್ರಯೋಗಾಲಯದಲ್ಲಿರುವ ಅಟ್ಲಸ್ ನಿರೀಕ್ಷಿಸಿ ಕೆಳಗೆ ನೀಡಿರುವ ನಗರಗಳು ಯಾವ ನದಿಗಳ ತೀರದಲ್ಲಿವೆಯೆಂದು ಕಂಡುಹಿಡಿದು ಪಟ್ಟಿ ತಯಾರಿಸಿರಿ.

| ನಗರ | ನದಿ |
|---|---|
| ♦ ಲಂಡನ್ | ♦ |
| ♦ ಪ್ಯಾರಿಸ್ | ♦ |
| ♦ ರೋಮ್ | ♦ |
| ♦ ವಿಯೆನ್ನಾ | ♦ |

ಮಧ್ಯಕಾಲದ ಯುರೋಪಿನ ನಗರಗಳು ಆಧುನಿಕ ಕಾಲದ ನಗರಗಳಂತೆ ಇರಲಿಲ್ಲ. ಅವುಗಳು ಸಣ್ಣ ನಗರಗಳಾಗಿದ್ದವು. ನಗರಗಳ ರಸ್ತೆಗಳು ಅಗಲಕಿರಿದಾಗಿದ್ದು ಮಾಲಿನ್ಯಗಳಿಂದ ಕೂಡಿದ್ದವು. ಕಟ್ಟಡಗಳನ್ನು ಮರ ಮತ್ತು ಹುಲ್ಲುಗಳನ್ನುಪಯೋಗಿಸಿ ನಿರ್ಮಿಸುತ್ತಿದ್ದರು.

ಜನದಟ್ಟಣೆಯಿಂದ ಕೂಡಿದ ನಗರಗಳಲ್ಲಿ ಬೆಂಕಿ ಅನಾಹುತಗಳಿಗೆ ಸಾಧ್ಯತೆ ಅಧಿಕವಾಗಿತ್ತು. ವ್ಯಾಪಾರಿಗಳು, ಕರಕುಶಲ ವೃತ್ತಿಯವರು, ಕಾರ್ಮಿಕರು ಮೊದಲಾದವರು ನಗರವಾಸಿಗಳಾಗಿದ್ದರು. ನಗರಗಳಲ್ಲಿ ವಾಸಿಸುತ್ತಿದ್ದ ಕಾರ್ಮಿಕರಿಗೆ ಪ್ರತ್ಯೇಕ ಆದಾಯವಿಲ್ಲದಿರುವ ಕಾರಣ ಅವರು ಇತರರನ್ನು ಆಶ್ರಯಿಸಿ ಜೀವಿಸುತ್ತಿದ್ದರು. ಆಹಾರಕ್ಕಾಗಿ ನಗರವಾಸಿಗಳು ಗ್ರಾಮಗಳನ್ನು ಆಶ್ರಯಿಸುತ್ತಿದ್ದರು.

**ನಗರಗಳನ್ನು ಸುತ್ತುವರಿದ ಕೋಟೆಗಳು**

ಗ್ರಾಮಗಳು ಕೊನೆಗೊಳ್ಳುವ ಮತ್ತು ಪಟ್ಟಣಗಳು ಆರಂಭಿಸುವ ಗಡಿಗಳಲ್ಲಿ ಎತ್ತರದ ಗೋಡೆಗಳನ್ನು ಕಟ್ಟುತ್ತಿದ್ದರು. ನಗರಗಳನ್ನು ಪ್ರವೇಶಿಸಲು ಗೋಡೆಗಳಿಗೆ ಪ್ರತ್ಯೇಕ ಬಾಗಿಲುಗಳು ಮತ್ತು ಕಾವಲು ಗೋಪುರಗಳು ಇದ್ದುವು. ನಗರಗಳ ಹೆಬ್ಬಾಗಿಲುಗಳಲ್ಲಿ ತೆರಿಗೆಯನ್ನು ವಸೂಲು ಮಾಡಲು ಪ್ರತ್ಯೇಕ ವ್ಯವಸ್ಥೆಯಿತ್ತು.



ಮಧ್ಯಕಾಲ ನಗರವನ್ನು ಸುತ್ತುವರಿದ ಕೋಟೆ

**ಕರ್ಫ್ಯೂ**

ಮಧ್ಯಕಾಲದ ಇಂಗ್ಲೆಂಡಿನಲ್ಲಿ ರಾತ್ರಿ 8 ಗಂಟೆಗೆ ಮನೆಗಳಲ್ಲಿನ ಬೆಂಕಿಯನ್ನು ನಂದಿಸಲು ಅಥವಾ ಮುಚ್ಚಿ ಇಡಲು ಗಂಟೆಗಳನ್ನು ಬಾರಿಸುತ್ತಿದ್ದರು. ಆಗಾಗ ಸಂಭವಿಸುತ್ತಿದ್ದ ಬೆಂಕಿ ಅನಾಹುತಗಳನ್ನು ತಪ್ಪಿಸಲು ಈ ಕ್ರಮವು ಜಾರಿಯಲ್ಲಿತ್ತು. ಇಂಗ್ಲೆಂಡಿನಲ್ಲಿ ಜಾರಿಗೊಳಿಸಿದ ಈ ನಿಯಮವನ್ನು "ಕರ್ಫ್ಯೂ" ಎಂದು ಕರೆಯುತ್ತಿದ್ದರು. ಬೆಂಕಿಯನ್ನು ಮುಚ್ಚಿ ಇಡು (Cover the fire) ಎಂಬುದು ಇದರ ಅರ್ಥ. ಈಗ ಕರ್ಫ್ಯೂ ಎಂಬುದು ಸಮಸ್ಯೆಗಳನ್ನು ಬಾಧಿಸುವ ಪ್ರದೇಶಗಳನ್ನು ಶಾಂತಿ ಸಮಾಧಾನದತ್ತ ಕೊಂಡೊಯ್ಯಲು ಆಧುನಿಕ ಸರಕಾರಗಳು ಸ್ವೀಕರಿಸುವ ತುರ್ತು ಕ್ರಮಗಳಾಗಿವೆ.

**ಮಧ್ಯಕಾಲೀನ ನಗರಗಳ ವಿಶೇಷತೆಗಳನ್ನು ವಿವರಿಸಿರಿ.**

## ಪೂರ್ವದ ನಗರಗಳು

ಮಧ್ಯಕಾಲದಲ್ಲಿ ಪಶ್ಚಿಮ ಯುರೋಪಿನ ನಗರಗಳಲ್ಲದೆ ಬೃಹತ್ ಪಟ್ಟಣಗಳು ಮತ್ತು ವ್ಯಾಪಾರ ಕೇಂದ್ರಗಳಿದ್ದ ಇನ್ನಿತರ ಪ್ರದೇಶಗಳ ಕಡೆಗೆ ಗಮನಹರಿಸೋಣ.

ಅಬ್ಬಾಸಿಯಾ ಸಾಮ್ರಾಜ್ಯದ ರಾಜಧಾನಿಯಾದ ಬಾಗ್ದಾದ್ ಮಧ್ಯಕಾಲದ ಪ್ರಧಾನ ವ್ಯಾಪಾರ-ವಾಣಿಜ್ಯ ಕೇಂದ್ರವಾಗಿತ್ತು. ಪ್ರಪಂಚದ ವಿವಿಧ ಮೂಲೆಗಳಿಂದ ತಂದ ವೈವಿಧ್ಯಮಯ ವಸ್ತುಗಳಿಂದ

ಈ ಪಟ್ಟಣ, ಮಾರುಕಟ್ಟೆ ತುಂಬಿ ತುಳುಕುತ್ತಿತ್ತು ಎಂದು ಹಲವು ಸಂಚಾರಿಗಳು ತಮ್ಮ ಗ್ರಂಥಗಳಲ್ಲಿ ಉಲ್ಲೇಖಿಸಿದ್ದಾರೆ.

ಪೌರಾತ್ಯ ರೋಮ್ ಸಾಮ್ರಾಜ್ಯದ ರಾಜಧಾನಿಯಾದ ಕೋನ್‌ಸ್ಟೆಂಟಿನೋಪಲ್ (ಇಸ್ತಾಂಬುಲ್) ಇನ್ನೊಂದು ಪ್ರಧಾನ ವಾಣಿಜ್ಯ ಕೇಂದ್ರವಾಗಿತ್ತು. ರೇಶ್ಮೆ ಮಾರ್ಗವಾಗಿ ಮತ್ತು ಸುಂಗಂಧದ್ರವ್ಯ ಮಾರ್ಗವಾಗಿ ಇಲ್ಲಿಗೆ ತಲುಪುತ್ತಿದ್ದ ವಸ್ತುಗಳನ್ನು ಈ ನಗರಗಳ ಮೂಲಕ ಯುರೋಪಿಗೆ ತೆಗೆದುಕೊಂಡು ಹೋಗುತ್ತಿದ್ದರು. ಟೈಗ್ರಿಸ್ ನದೀ ತೀರದ "ಬಸರ ಬಂದರು" ಆಕಾಲದ ಪ್ರಧಾನ ಬಂದರು ನಗರವಾಗಿತ್ತು. ಏದನ್, ಮಕ್ಕಾ, ಮಸ್ಕತ್, ಡಮಾಸ್ಕತ್ ಮೊದಲಾದವುಗಳು ಮಧ್ಯಕಾಲದ ಇನ್ನಿತರ ಪ್ರಧಾನ ನಗರಗಳಾಗಿದ್ದುವು. ಕಲ್ಲಿಕೋಟೆಯು ಸುಗಂಧದ್ರವ್ಯ ಮಾರ್ಗದ ಪ್ರಧಾನವಾದ ಇನ್ನೊಂದು ವಾಣಿಜ್ಯಕೇಂದ್ರವೂ ಬಂದರು ನಗರವೂ ಆಗಿತ್ತು. ಮಧ್ಯ ಏಷ್ಯಾ ಮತ್ತು ಯುರೋಪಿನಿಂದ ಸುಗಂಧದ್ರವ್ಯಗಳನ್ನು ಹೇರಿಕೊಂಡು ಹೋಗಲು ಹಲವಾರು ಹಡಗುಗಳು ಈ ಬಂದರಿನಲ್ಲಿ ಲಂಗರು ಹಾಕುತ್ತಿದ್ದವು. ಗುಜರಾತಿನ ಸೂರತ್ ಇನ್ನೊಂದು ವಾಣಿಜ್ಯ ಕೇಂದ್ರವಾಗಿತ್ತು.



ಪಾಠಭಾಗದಲ್ಲಿ ನೀಡಿರುವ ವಾಣಿಜ್ಯ ಮಾರ್ಗಗಳ ಭೂಪಟ ನೋಡಿ ಮಧ್ಯ ಏಷ್ಯಾದ ಪ್ರಧಾನ ನಗರಗಳನ್ನು ಪಟ್ಟಿ ಮಾಡಿರಿ.

- ಬಾಗ್ದಾದ್
- 
- 
- 
- 
- 

ಪಾಶ್ಚಾತ್ಯ ಮತ್ತು ಪೌರಾತ್ಯಗಳಲ್ಲಿ ನೆಲೆನಿಂತಿದ್ದ ಪ್ರಧಾನ ವಾಣಿಜ್ಯ ಕೇಂದ್ರಗಳ ಮತ್ತು ನಗರಗಳ ಕುರಿತು ತಿಳಿದುಕೊಂಡಿರಲ್ಲವೇ. ಈ ನಗರಗಳ ಜನರ ಸಾಮಾಜಿಕ, ಆರ್ಥಿಕ ಸ್ಥಿತಿ-ಗತಿಗಳು ಹೇಗಿತ್ತೆಂದು ನೋಡೋಣ.

## ಗಿಲ್ಡ್‌ಗಳು (Guilds)

ಗಿಲ್ಡ್‌ಗಳು ಮಧ್ಯಕಾಲದ ಸಾಮಾಜಿಕ - ಆರ್ಥಿಕ ಕ್ಷೇತ್ರದ ಪ್ರಧಾನ ವಿಶೇಷತೆಗಳಾಗಿವೆ. ಇವು ವಿವಿಧ ರಂಗಗಳಲ್ಲಿ ನೈಪುಣ್ಯ ಹೊಂದಿದ ಕೆಲಸಗಾರರ ಸಂಘಟನೆಗಳಾಗಿದ್ದವು.

- ವ್ಯಾಪಾರಿ ಗಿಲ್ಡ್‌ಗಳು (Merchant Guilds)
- ಕರಕುಶಲ ಗಿಲ್ಡ್‌ಗಳು (Craft Guilds)

ಎಂಬ ಎರಡು ವಿಧದ ಗಿಲ್ಡ್‌ಗಳಿದ್ದುವು.



ಮಧ್ಯಕಾಲದ ಚಪ್ಪಲಿ ನಿರ್ಮಾಣ ಕೇಂದ್ರ

ಮಧ್ಯಕಾಲದ ಯುರೋಪಿನಲ್ಲಿ ವಾಣಿಜ್ಯದಲ್ಲುಂಟಾದ ಪ್ರಗತಿ, ವಿವಿಧ ಉದ್ಯೋಗರಂಗಗಳ ರೂಪೀಕರಣ, ಪಟ್ಟಣಗಳಲ್ಲಿ ಉಂಟಾದ ತೆರಿಗೆಯ ಹೆಚ್ಚಳ ಮತ್ತು ಶೋಷಣೆಗೆದುರಾಗಿ ಹೋರಾಡಬೇಕಾದ ಅವಶ್ಯಕತೆ, ಸಂಘಟನಾ ಪ್ರಜ್ಞೆ ಮೊದಲಾದುವುಗಳು ಗಿಲ್ಡ್‌ಗಳ ರೂಪೀಕರಣಕ್ಕೆ ಕಾರಣವಾದ ಘಟಕಗಳಾಗಿವೆ.

ಪರಸ್ಪರ ಸಹಾಯ - ಸಹಕಾರವನ್ನು ಬೆಳೆಸುವುದು, ವ್ಯಾಪಾರದಲ್ಲಿ ಏಕಸ್ವಾಮ್ಯ ಗಳಿಸುವುದು, ಆರ್ಥಿಕ ಸ್ಥಿರತೆಯನ್ನು ಕಾಪಾಡುವುದು ಮೊದಲಾದುವುಗಳು ಗಿಲ್ಡ್‌ಗಳ ಗುರಿಗಳಾಗಿದ್ದವು. ಮೊದಲಿಗೆ ವ್ಯಾಪಾರಿಗಳ ಗಿಲ್ಡ್‌ಗಳು ಸ್ಥಾಪಿಸಲ್ಪಟ್ಟವು. ಇವು ವ್ಯಾಪಾರದ ಪ್ರಗತಿಯನ್ನು ಗುರಿಯಾಗಿರಿಸಿ ನಗರಗಳನ್ನು ಪರಸ್ಪರ ಬೆಸೆದು ಅಂತರ್ನಗರ ಲೀಗ್‌ಗಳೆಂಬ (Intercity League) ಸಂಸ್ಥೆಗಳನ್ನು ರೂಪಿಸಿದವು. ಯುರೋಪಿನ ವಿವಿಧ ನಗರಗಳ ವ್ಯಾಪಾರಗಳನ್ನು ನಿಯಂತ್ರಿಸುತ್ತಿದ್ದ ಹಾನ್ಸಿಯಾಟಿಕ್ ಲೀಗ್ (Hansiatic League) ಸಹಾಯಕವಾದ ಇಂತಹ ಒಂದು ಸಂಸ್ಥೆಗೆ ಉದಾಹರಣೆಯಾಗಿದೆ.



ಮಧ್ಯಕಾಲದ ಒಂದು ಹೊಲಿಗೆ ಕೇಂದ್ರ



ಮಧ್ಯಕಾಲದ ನೇಯ್ಗೆಗಾರ

ಮಧ್ಯಕಾಲದ ಕರಕುಶಲ ಕಾರ್ಮಿಕರ ಮತ್ತು ಇತರ ನೈಪುಣ್ಯ ಹೊಂದಿದ ಕೆಲಸಗಾರರ ಸಂಘಟನೆಯನ್ನು ಕರಕುಶಲ ಗಿಲ್ಡ್ (Craft Guilds)ಗಳೆಂದು ಕರೆಯುತ್ತಾರೆ. ಚರ್ಮದ ಕೆಲಸಗಾರರು, ಕಬ್ಬಿಣದ ಕೆಲಸಗಾರರು, ಮರದ ಕೆಲಸಗಾರರು ಮೊದಲಾದ ಪ್ರತಿಯೊಂದು ವಿಭಾಗದ ಜನರಿಗೂ ಪ್ರತ್ಯೇಕ ಗಿಲ್ಡ್‌ಗಳು ಇದ್ದವು.

ಕೈಗಾರೀಕರಣ, ವಿಜ್ಞಾನ - ತಂತ್ರಜ್ಞಾನ ರಂಗಗಳ ಪ್ರಗತಿ ಮೊದಲಾದುವುಗಳು ನಂತರದ ಕಾಲದಲ್ಲಿ 'ಗಿಲ್ಡ್‌ಗಳ' ಪತನಕ್ಕೆ ಕಾರಣವಾದುವು.




**ಮಧ್ಯಕಾಲದಲ್ಲಿ ಯುರೋಪಿನಲ್ಲಿ ಗಿಲ್ಡ್‌ಗಳು ವ್ಯಾಪಾರ ರಂಗದಲ್ಲಿ ಬೀರಿದ ಪ್ರಭಾವವನ್ನು ವಿವರಿಸಿರಿ.**



## ಮಧ್ಯಕಾಲದ ವಿದ್ಯಾಭ್ಯಾಸ





*ಮಧ್ಯಕಾಲದ ವಿದ್ಯಾಭ್ಯಾಸ ಕೇಂದ್ರಗಳು ಚಿತ್ರಗಾರರ ಕಲ್ಪನೆಯಲ್ಲಿ*

ಮೇಲಿನ ಚಿತ್ರಗಳನ್ನು ಗಮನಿಸಿದಿರಲ್ಲವೇ. ಮಧ್ಯಕಾಲದ ಪ್ರಾಥಮಿಕ ಶಿಕ್ಷಣ, ಉನ್ನತ ಶಿಕ್ಷಣಗಳ ಕುರಿತಾದ ಮಾಹಿತಿಗಳು ಇವುಗಳಲ್ಲಿವೆ. ಯುರೋಪಿನಲ್ಲಿ ಈ ಕಾಲದಲ್ಲಿ ಶಿಕ್ಷಣವು ಹೆಚ್ಚು ಪ್ರಗತಿಯನ್ನು ಹೊಂದಿತು.



**ಕರೋಲಿನ್‌ಜಿಯನ್ ನವೋತ್ಥಾನ**

8 ನೆಯ ಮತ್ತು 9ನೇ ಶತಮಾನಗಳಲ್ಲಿ ಯುರೋಪಿನಲ್ಲಿ ಬೆಳೆದು ಬಂದ ಸಾಂಸ್ಕೃತಿಕ ಮತ್ತು ಬೌದ್ಧಿಕ ಬೆಳವಣಿಗೆಯನ್ನು ಚರಿತ್ರೆಗಾರರು ಕರೋಲಿನ್‌ಜಿಯನ್ ನವೋತ್ಥಾನ (Carolingian Renaissance) ಎಂದು ಕರೆಯುತ್ತಾರೆ. ಷಾಲಮಿನ್ ಚಕ್ರವರ್ತಿ ಮತ್ತು ಆತನ ಉತ್ತರಾಧಿಕಾರಿಯಾದ ಲೂಯಿಯ ಕಾಲದಲ್ಲಿ ಈ ನವೋತ್ಥಾನವು ನಡೆಯಿತು. ವಿದ್ಯಾವಂತರಾದ ಒಂದು ವಿಭಾಗವು ಸಮಾಜಕ್ಕೆ ಅಗತ್ಯವೆಂದು ಮನಗಂಡ ಷಾಲಮೀನ್ ಚಕ್ರವರ್ತಿಯು ತನ್ನ ಸಾಮ್ರಾಜ್ಯದಲ್ಲಿರುವ ಸನ್ಯಾಸಿ ಮಠಗಳು ಮತ್ತು ಕೆಥಿಡ್ರಲ್‌ಗಳು ಉಚಿತ ಪ್ರಾಥಮಿಕ ಶಿಕ್ಷಣವನ್ನು ನೀಡಬೇಕೆಂಬ ಆಜ್ಞೆಯನ್ನು ಹೊರಡಿಸಿದನು.

ಪ್ರಾಥಮಿಕ ಶಿಕ್ಷಣ, ವಿಶ್ವವಿದ್ಯಾಲಯಗಳು, ಗ್ರೀಕೋ-ರೋಮ್ ವಿಜ್ಞಾನ, ಇಸ್ಲಾಮಿಕ್-ವಿಜ್ಞಾನ ಎಂಬವುಗಳ ಬೆಳವಣಿಗೆಗಳು ಮಧ್ಯಕಾಲ ಶಿಕ್ಷಣದ ವಿಶೇಷತೆಗಳಾಗಿವೆ. ಪ್ರಾಥಮಿಕ ವಿದ್ಯಾಭ್ಯಾಸವನ್ನು ಒದಗಿಸುವುದಕ್ಕಾಗಿ ಈ ಕಾಲದಲ್ಲಿ ಅನೇಕ ಶಾಲೆಗಳನ್ನು ಆರಂಭಿಸಿದರು.

ವ್ಯಾಕರಣ, ಲ್ಯಾಟಿನ್ ಭಾಷೆ, ಜ್ಯೋತಿಶ್ಯಾಸ್ತ್ರ, ಸಾಹಿತ್ಯ, ತತ್ವಜ್ಞಾನ, ಗಣಿತ, ಪ್ರಕೃತಿ ನಿಯಮಗಳು ಮೊದಲಾದುವುಗಳು ಆ ಕಾಲದ ಪ್ರಧಾನ ಕಲಿಕಾ ವಿಷಯಗಳಾಗಿದ್ದುವು. ಈ ಕಾಲದಲ್ಲಿ ಕನ್ಯಾಸ್ತ್ರೀಗಳಿಗೆ ಹಾಗೂ ಶ್ರೀಮಂತ ಪ್ರಭುಗಳ ಮತ್ತು ಆಡಳಿತಾಧಿಕಾರಿಗಳ ಹೆಣ್ಣು ಮಕ್ಕಳಿಗೆ ಮಾತ್ರವೇ ಶಿಕ್ಷಣ ಲಭಿಸುತ್ತಿತ್ತು.



ಮಧ್ಯಕಾಲ ಯುರೋಪಿನಲ್ಲಿನ ಶಾಲೆಗಳ ಚಟುವಟಿಕಾ ವಿಧಾನಗಳ ಕುರಿತು ಚರ್ಚಿಸಿರಿ.

ಮಧ್ಯಕಾಲದಲ್ಲಿ ವಿದ್ಯಾಭ್ಯಾಸವು ಕೇವಲ ಪ್ರಾಥಮಿಕ ಹಂತಕ್ಕೆ ಸೀಮಿತವಾಗಿರಲಿಲ್ಲ. ವಿಶ್ವವಿದ್ಯಾಲಯ ಶಿಕ್ಷಣವೂ ಆ ಕಾಲದಲ್ಲಿ ಪ್ರಸಿದ್ಧಿ ಪಡೆಯಿತು. ಸಾಹಿತ್ಯ, ವೈದ್ಯಶಾಸ್ತ್ರ, ವಿವಿಧ ಭಾಷೆಗಳು, ಜ್ಯಾಮಿತಿ ಮೊದಲಾದುವುಗಳು ವಿಶ್ವವಿದ್ಯಾಲಯಗಳ ಕಲಿಕಾ ವಿಷಯಗಳಾಗಿದ್ದವು. 11 ಮತ್ತು 12ನೇ ಶತಮಾನಗಳಲ್ಲಿ ಯುರೋಪಿನಲ್ಲಿ ಹಲವಾರು ವಿಶ್ವವಿದ್ಯಾಲಯಗಳು ಸ್ಥಾಪಿಸಲ್ಪಟ್ಟವು. ಅವುಗಳಲ್ಲಿ ಪ್ರಧಾನವಾದವುಗಳು ಈ ಕೆಳಗಿನಂತಿವೆ.



ಬೊಳೋನ ವಿಶ್ವವಿದ್ಯಾಲಯ

- ಬೊಳೋನ - ಇಟಲಿ
- ಕೊನ್‌ಸ್ಟಂಟಿನೋಪಲ್ - ಟರ್ಕಿ
- ಪ್ಯಾರಿಸ್ - ಫ್ರಾನ್ಸ್
- ಒಕ್ಸ್‌ಫೋರ್ಡ್, ಕೇಂಬ್ರಿಡ್ಜ್ - ಇಂಗ್ಲೆಂಡ್

ಮಧ್ಯಕಾಲದಲ್ಲಿ ಅರಬರು ಸ್ಪೈನ್‌ನಲ್ಲಿ ಸ್ಥಾಪಿಸಿದ ಕಾರ್ನೋವ ವಿಶ್ವವಿದ್ಯಾಲಯವು ಇನ್ನೊಂದು ಪ್ರಸಿದ್ಧ ವಿಶ್ವವಿದ್ಯಾಲಯವಾಗಿತ್ತು. ಸಾವಿರಾರು ಕೈಬರಹಗಳ ಪ್ರತಿಗಳನ್ನು ಇದರ ಗ್ರಂಥಾಲಯದಲ್ಲಿ ಸಂರಕ್ಷಿಸಲಾಗಿತ್ತೆಂಬುದು ಈ ವಿಶ್ವವಿದ್ಯಾಲಯದ ಇನ್ನೊಂದು ವಿಶೇಷತೆಯಾಗಿದೆ. ಇಲ್ಲಿ ಗ್ರೀಕ್, ಸಿರಿಯಾಕ್, ಪರ್ಶಿಯನ್, ಸಂಸ್ಕೃತ ಮೊದಲಾದ ಭಾಷೆಗಳನ್ನು ಕಲಿಯಲಿರುವ ವ್ಯವಸ್ಥೆಯಿತ್ತು. ಮೇಲೆ ಹೇಳಿದ ಭಾಷೆಗಳ ಗ್ರಂಥಗಳು ಅರೇಬಿಕ್ ಭಾಷೆಗೆ ಅನುವಾದ ಮಾಡಿದ ಹಸ್ತಪ್ರತಿಗಳು ಈ ಗ್ರಂಥಾಲಯದಲ್ಲಿತ್ತು.



ಕಾರ್ನೋವ ವಿಶ್ವವಿದ್ಯಾಲಯ

ವಿದ್ಯಾಭ್ಯಾಸದ ಪ್ರಗತಿಯು ಯುರೋಪಿಗೆ ಮಾತ್ರ ಸೀಮಿತವಾಗಿರಲಿಲ್ಲ. ಅಬ್ಬಾಸಿಯಾ ಖಲೀಫರ ಕಾಲದಲ್ಲಿ ಮಧ್ಯ ಏಷ್ಯಾದಲ್ಲಿ ಶಿಕ್ಷಣವು ವ್ಯಾಪಿಸಿತು. 10ನೇ ಶತಮಾನದಲ್ಲಿ ಪ್ರಾರಂಭವಾದ ಪ್ರಾಥಮಿಕ ವಿದ್ಯಾಲಯಗಳಲ್ಲಿ (ಮಕ್ತಬ್) 6 ರಿಂದ 14ನೇ ವಯಸ್ಸಿನ ಮಕ್ಕಳಿಗೆ ಶಿಕ್ಷಣವನ್ನು ನೀಡುತ್ತಿದ್ದರು.

ಅರಬ್ ಲೋಕದಲ್ಲಿ ಸ್ತ್ರೀಯರಿಗೂ ಶಿಕ್ಷಣವನ್ನು ನೀಡಲಾಗುತ್ತಿತ್ತು. ಸ್ತ್ರೀಯರಿಗೆ ಪಠ್ಯದಲ್ಲಿ 'ಇಜಾಸ್' ಎಂಬ ಡಿಗ್ರಿ ಪಡೆದು ಅಧ್ಯಾಪಿಕೆಯಾಗಲು ಅವಕಾಶವಿತ್ತು.

ಮಧ್ಯಏಷ್ಯಾದ ಬಾಗ್ದಾದ್, ಡಮಾಸ್ಕಸ್‌ಗಳಲ್ಲಿ ವಿಶ್ವವಿದ್ಯಾಲಯಗಳು ಮತ್ತು ಈಜಿಪ್ಟ್‌ನ ಅಲ್ ಅಸ್‌ಹರ್ ವಿಶ್ವವಿದ್ಯಾಲಯವು ಮಧ್ಯಕಾಲದ ಪ್ರಸಿದ್ಧವಾದ ಶಿಕ್ಷಣ ಕೇಂದ್ರಗಳಾಗಿದ್ದವು.



ಅಲ್ - ಅಸ್‌ಹರ್ ವಿಶ್ವವಿದ್ಯಾಲಯ

ಮಧ್ಯಕಾಲದಲ್ಲಿ ದೂರದ ಪೌರಾತ್ಯ ಪ್ರದೇಶಗಳು ಶಿಕ್ಷಣ ಪ್ರಗತಿಗೆ ಮಹತ್ತರ ಕೊಡುಗೆ ನೀಡಿವೆ. ಪ್ರಾಚೀನ ಕಾಲದ ಪ್ರಾರಂಭದಿಂದಲೇ ಚೀನಾದ ವಿವಿಧ ಪ್ರದೇಶಗಳಲ್ಲಿ ಶಾಲೆಗಳನ್ನು ಸ್ಥಾಪಿಸಿದ್ದರು. ವೈಯಕ್ತಿಕ ವಿಕಾಸದೊಂದಿಗೆ ವ್ಯಕ್ತಿಗಳು ಕುಟುಂಬಕ್ಕೂ

### ಪುಸ್ತಕಗಳ ನಿರ್ಮಾಣ

ಕೋರ್‌ನೋವ, ಬಾಗ್ದಾದ್, ಕೈರೋ ಮೊದಲಾದ ವಾಚನಾಲಯಗಳಲ್ಲಿ ಸಾವಿರಾರು ಜನರು ಕೈಬರಹದ ಪ್ರತಿಗಳನ್ನು ತಯಾರಿಸುವ ಕೆಲಸದಲ್ಲಿ ನಿರತರಾಗಿದ್ದರು. ಬಟ್ಟೆಯಿಂದ ನಿರ್ಮಿಸಿದ ಪೇಪರ್‌ಗಳನ್ನು ಇವರು ಉಪಯೋಗಿಸುತ್ತಿದ್ದರು. ಮರದಿಂದ ನಿರ್ಮಿಸಿದ ಅಕ್ಷರದ ಅಚ್ಚುಗಳನ್ನು ಅವರು ಉಪಯೋಗಿಸುತ್ತಿದ್ದರು. ಪ್ರಪಂಚದ ಮೊತ್ತಮೊದಲ ಪೇಪರ್ ಮಿಲ್ ಬಾಗ್ದಾದ್‌ನಲ್ಲಿ ಸ್ಥಾಪಿಸಲ್ಪಟ್ಟಿತು. ನಂತರ ಕೋರ್‌ದೋವದಲ್ಲಿ ಎರಡನೆಯ ಮಿಲ್ ಆರಂಭಿಸಲ್ಪಟ್ಟಿತು.

ದೇಶಕ್ಕೂ ಪ್ರಯೋಜನಕರವಾದ ಕೊಡುಗೆಗಳನ್ನು ನೀಡಲು ವಿದ್ಯಾಭ್ಯಾಸದಿಂದ ಸಾಧ್ಯವಾಗುವುದೆಂದು ಅವರು ನಂಬಿದ್ದರು. ಚೀನಾದಲ್ಲಿ 6ನೇ ವಯಸ್ಸಿನಿಂದ ಶಿಕ್ಷಣ ನೀಡಲು ಆರಂಬಿಸುತ್ತಿದ್ದರು. ಅಲ್ಲಿನ ಹೆಚ್ಚಿನ ವಿದ್ಯಾಲಯಗಳು ಏಕೋಪಾಧ್ಯಾಯ ಶಾಲೆಗಳಾಗಿದ್ದವು. ಬೌದ್ಧ ವಿಹಾರಗಳಲ್ಲಿ ನಡೆಸುತ್ತಿದ್ದ ಶಾಲೆಗಳಲ್ಲಿ ಬೌದ್ಧಮತ ಸಿದ್ಧಾಂತಗಳನ್ನು ಕಡ್ಡಾಯವಾಗಿ ಬೋಧಿಸಲಾಗುತ್ತಿತ್ತು.

ಮಧ್ಯಕಾಲ ಭಾರತದಲ್ಲಿ ವಿದ್ಯಾರ್ಥಿಗಳು ಅಧ್ಯಾಪಕರೊಂದಿಗಿದ್ದು ಕಲಿಯುವ ಗುರುಕುಲ ಸಂಪ್ರದಾಯವು ಪ್ರಚಾರದಲ್ಲಿತ್ತು. ವ್ಯಾಕರಣ, ಭಾಷೆ, ಸಾಹಿತ್ಯ, ತತ್ವಶಾಸ್ತ್ರ, ಜ್ಯೋತಿಶ್ಯಾಸ್ತ್ರ ಮೊದಲಾದ ವಿಷಯಗಳು ಇಲ್ಲಿನ ಪ್ರಧಾನ ಪಠ್ಯವಿಷಯಗಳಾಗಿದ್ದವು. ದಕ್ಷಿಣ ಭಾರತದಲ್ಲಿ ಮಧ್ಯಕಾಲದಲ್ಲಿ ದೇವಸ್ಥಾನಗಳನ್ನು ಕೇಂದ್ರೀಕರಿಸಿ ಶಿಕ್ಷಣವನ್ನು ನೀಡುತ್ತಿದ್ದರು.

"ಮಧ್ಯಕಾಲದಲ್ಲಿ ಸಾಮಾಜಿಕ ಪ್ರಗತಿಯನ್ನು ಸಾಧಿಸಲು ಶಿಕ್ಷಣವು ವಹಿಸಿದ ಪಾತ್ರ" ಎಂಬ ವಿಷಯದಲ್ಲಿ ಚರ್ಚೆ ನಡೆಸಿರಿ.

## ಕಲೆ ಮತ್ತು ಸಾಹಿತ್ಯ


ರೋಮನಸ್ಕ್ ಶೈಲಿ


ಗೋಥಿಕ್ ಶೈಲಿ


ಕರೋಲಿಜಿಯನ್ ಶೈಲಿ

ಮಧ್ಯಕಾಲೀನ ಜಗತ್ತು ವಾಸ್ತುಕಲೆಗಳಿಂದ ಪ್ರಗತಿಯನ್ನು ಸೂಚಿಸುವ ಕೆಲವು ಚಿತ್ರಗಳನ್ನು ನೋಡಿರಿ. ರೋಮನಸ್ಕ್, ಗೋಥಿಕ್ ಶೈಲಿಗಳ ಕುರಿತು ಹಿಂದಿನ ತರಗತಿಗಳಲ್ಲಿ ಚರ್ಚಿಸಿರುವಿರಲ್ಲವೇ. ಪ್ರಾಚೀನ ರೋಮನ್ ವಾಸ್ತುಶೈಲಿಯನ್ನು ಬೈಝಾಂಟೈನ್ ವಾಸ್ತುಶೈಲಿಯೊಂದಿಗೆ ಸಂಯೋಜಿಸಿ ಒಂದು ಹೊಸ ವಾಸ್ತುಶೈಲಿಯನ್ನು ಷಾಲಮಿನ್ ಚಕ್ರವರ್ತಿಯು ಅಭಿವೃದ್ಧಿಪಡಿಸಿದನು. ಇದನ್ನು ಕರೋಲಿಜಿಯನ್ ಶೈಲಿ ಎಂಬ ಹೆಸರಿನಿಂದ ಕರೆಯುತ್ತಾರೆ. ಗೊಮ್ಮಟಗಳು, ಕಮಾನಿನ

ಆಕೃತಿಯ ಬಾಗಿಲುಗಳು, ದೊಡ್ಡ ಕಂಬಗಳು ಮತ್ತು ಮೊಸಾಯಿಕ್ ನೆಲಗಳು ಇದರ ವಿಶೇಷತೆಗಳಾಗಿವೆ.



ಪ್ಲಾಟೋನಿಕ್ ಅಕಾಡಮಿ – ಫ್ಲೋರೆನ್ಸ್

ಶಿಲುಬೆ ಯುದ್ಧಗಳ ಕಾಲದಲ್ಲಿ ಯುರೋಪಿಯನ್ನರು ಇಸ್ಲಾಮಿಕ್ ಸಂಸ್ಕೃತಿಯೊಂದಿಗೆ ಹೆಚ್ಚಿನ ಸಂಪರ್ಕ ಹೊಂದಿದರು. ಕಲೆ ಮತ್ತು ಸಾಹಿತ್ಯವು ಈ ಕಾಲದಲ್ಲಿ ವಿನಿಮಯಕ್ಕೊಳಪಟ್ಟಿತು. ಪೌರಾತ್ಯ ಕಲೆ ಮತ್ತು ವಾಸ್ತುಶಿಲ್ಪವು ಪಾಶ್ಚಿಮಾತ್ಯ ಶೈಲಿಯ ಮೇಲೆ ಹೆಚ್ಚಿನ ಪ್ರಭಾವ ಬೀರಿತು. ಶಿಲುಬೆಯುದ್ಧಗಳಲ್ಲಿ ಭಾಗವಹಿಸಿ ದೇಶಕ್ಕೆ ಹಿಂದಿರುಗಿ ಬಂದ ಫ್ರೆಂಚ್ ಚಕ್ರವರ್ತಿಯಾಗಿದ್ದ IXನೇ ಲೂಯಿ ನಿರ್ಮಿಸಿದ ಪ್ಯಾರಿಸ್ಸಿನ ಮೊದಲ ಆಸ್ಪತ್ರೆಯಾದ “ಕ್ವಿನ್‌ಸೇವಿಂಗಿಟ್ಟ್” (Quinze-Vingts) ಮತ್ತು ಫ್ಲೋರೆನ್ಸ್‌ನ ಪ್ಲಾಟೋನಿಕ್ ಅಕಾಡಮಿಗಳು ಇದಕ್ಕೆ ಉದಾಹರಣೆಯಾಗಿವೆ.



ಕ್ವೀನ್‌ಸೆವಿಂಗಿಟ್ಟ್ ಆಸ್ಪತ್ರೆ – ಪ್ಯಾರಿಸ್

ಪಾಶ್ಚಾತ್ಯ ಸಂಗೀತದ ಆರಂಭವು ಮಧ್ಯಕಾಲದಲ್ಲಾಗಿತ್ತು. ಚರ್ಚುಗಳ ಸಂಗೀತದೊಂದಿಗೆ ಮತೇತರ ಸಂಗೀತವೂ ಆ ಕಾಲದಲ್ಲಿ ವಿಕಾಸಗೊಂಡಿತು. ಸಿ.ಇ. 500ರಿಂದ ಸಿ.ಇ. 1400ರ ವರೆಗಿನ ಕಾಲದಲ್ಲಿ ಯುರೋಪಿನ ಸಂಗೀತದ ಮೇಲೆ ಅರಬಿ ಸಂಗೀತವು ಪ್ರಭಾವ ಬೀರಿತು.

ಉಮವಿಯ್ಯಾ ಮತ್ತು ಅಬ್ಬಾಸಿಯಾ ಖಲೀಫರ ಕಾಲದಲ್ಲಿ ಅರಬ್ ಸಂಗೀತವು ಹೆಚ್ಚು ಪ್ರಚಾರ ಪಡೆಯಿತು. ಇಬ್ನ್ ಮಿಸ್‌ಜಾನು ಉಮವಿಯ್ಯಾ ಚಕ್ರವರ್ತಿಯ ಕಾಲದ ಪ್ರಸಿದ್ಧ ಸಂಗೀತಗಾರರಾಗಿದ್ದರು. ಅವನು ಸಿರಿಯಾ ಮತ್ತು ಪರ್ಶಿಯಾಗಳಲ್ಲಿ ಸಂಚರಿಸಿ ಬೈಝಾಂಟೈನ್ ಮತ್ತು ಪರ್ಶಿಯನ್ ಸಂಗೀತದಲ್ಲಿ ಜ್ಞಾನಪಡೆದು ಅರಬ್ ಸಂಗೀತ ಶೈಲಿಯನ್ನು ಪ್ರಾರಂಭಿಸಿದನು. ‘ಇಬ್ನ್ – ಮುಹರಿಸ್’ (IBN Muhriz) ಇಬ್ನ್ ಸುರಾಯಿ (IBN Suryai) ಮೊದಲಾದವರು ಈ ಕಾಲದ ಪ್ರಸಿದ್ಧ ಪರ್ಷಿಯನ್ ಸಂಗೀತಜ್ಞರಾಗಿದ್ದರು.

ಮಧ್ಯಕಾಲದಲ್ಲಿ ಜಗತ್ತಿನ ಸಾಹಿತ್ಯ ಕೃತಿಗಳಲ್ಲಿ ಮತಕ್ಕೆ ಸಂಬಂಧಿಸಿದ ವಿಷಯಗಳನ್ನು ಪ್ರತಿಪಾದಿಸುತ್ತಿದ್ದರು. ಆದರೆ ಮತೇತರ ವಿಷಯಗಳ ರಚನೆಗಳನ್ನೂ ಇಲ್ಲಿ ಕಾಣಬಹುದು. ಆಕಾಲದ ಕೆಲವು ಸಾಹಿತಿಗಳು ಮತ್ತು ಅವರ ಕೃತಿಗಳನ್ನು ಕೆಳಗೆ ನೀಡಲಾಗಿದೆ.



ಮಧ್ಯಕಾಲದಲ್ಲಿ ಪ್ರಚಾರದಲ್ಲಿದ್ದ ‘ ಲ್ಯೂಟ್’ ಎಂಬ ಸಂಗೀತೋಪಕರಣ


ರೋಂನಲ್ಲಿ ಸ್ಥಾಪಿಸಿದ ಫಿರ್ದೌಸಿಯ ಪ್ರತಿಮೆ

| ಸಾಹಿತಿಗಳು | ಕೃತಿಗಳು |
|---|---|
| ಒಮರ್ ಖಯ್ಯಾಂ | ರುಬಿಯ್ಯಾತ್ |
| ಅಲ್ - ಫಿರ್ದೌಸಿ | ಷಾನಾಮ |
| ಇಬ್‌ನೂ ಖಲ್‌ದೂನ್ | ಕಿತಾಬುಲ್ ಇಬಾದ್ |
| ಥೋಮಸ್ ಅಕ್ವಿನಾಸ್ | ಸಮ್ಮಾ ಥಿಯೋಲಜಿ |
| ಸೈಂಟ್ - ಅಗಸ್ಟಿನ್ | ಸಿಟಿ ಆಫ್ ಗೋಡ್ |
| ಪೀಟರ್ ಅಬಿಲೋರ್ಡ್ | ಡಯಲೋಗ್ |


ಸೈಂಟ್ ಟ್ರಿನಿಟ್ ಮಡೋನ್ನಾ

ಮಧ್ಯಕಾಲದಲ್ಲಿ ಚಿತ್ರಕಲೆಯು ಗಮನಾರ್ಹವಾದ ವಿಕಾಸ ಹೊಂದಿತು. ಚಿತ್ರಕಲೆಯ ಮೇಲೆ ಧಾರ್ಮಿಕ ಪ್ರಭಾವವಿತ್ತು. ಸೆನ್ನಿ ಡಿ ಪೆಪ್ಪೊ (Cenni-di-pepo) ರಚಿಸಿದ ಸೈಂಟ್ ಟ್ರಿನಿಟ್ ಮಡೋನ್ನಾ (Santa Trinita Madonna) ಎಂಬ ಚಿತ್ರವು ಮಧ್ಯಕಾಲದ ಚಿತ್ರಕಲೆಯು ಗಳಿಸಿದ ಬೆಳವಣಿಗೆಯನ್ನು ಸೂಚಿಸುವ ಒಂದು ಉತ್ತಮ ಉದಾಹರಣೆಯಾಗಿದೆ.


ಮಧ್ಯಕಾಲದ ಕಲೆ ಮತ್ತು ಸಾಹಿತ್ಯವು ಪೌರಾತ್ಯ ಸಮ್ಮಿಲನಕ್ಕೆ ಉದಾಹರಣೆಯಾಗಿದೆ. ಈ ಹೇಳಿಕೆಯ ಕುರಿತು ಚರ್ಚೆ ನಡೆಸಿರಿ.

## ವಿಜ್ಞಾನ

ಮಧ್ಯಕಾಲದಲ್ಲಿ ವೈಜ್ಞಾನಿಕ ಕ್ಷೇತ್ರಕ್ಕೆ ಹಲವಾರು ಕೊಡುಗೆಗಳನ್ನು ನೀಡಿದ ಸಾಕಷ್ಟು ವಿಜ್ಞಾನಿಗಳು ಜೀವಿಸಿದ್ದರು. ಅದರಲ್ಲಿ ಕೆಲವರ ಕುರಿತು ಮಾಹಿತಿಗಳನ್ನು ಕೆಳಗೆ ನೀಡಲಾಗಿದೆ.

| ಪಂಡಿತರು | ಕೊಡುಗೆಗಳು |
|---|---|
| ಇಬ್ನೂ ಸೀನ (ಅವಿಸಣ) | ಕಾನೂನ್ - ಫಿಕ್-ತ್ವಿಬ್, ಕಿತಾಬ್-ಅಲ್-ಶಿಫಾ |
| ಅಬು-ಅಲ್-ಖಾಸಿಂ | ಶಸ್ತ್ರಕ್ರಿಯೆಯ ಪಿತಾಮಹ |
| ಅಲ್ಬೆರುನಿ | ಭೂಗರ್ಭ ಶಾಸ್ತ್ರ ಮತ್ತು ಮಾನವ ವಂಶಶಾಸ್ತ್ರದ ಕುರಿತಾದ ಪ್ರತಿಪಾದಕ |
| ಮೊಹಮ್ಮದ್ ಅಲ್‌ರಾಸಿ | ಕಿತಾಬುಲ್ ಹವೈ |


ಇಬ್ನೂಸಿನ

ಮಧ್ಯಕಾಲದಲ್ಲಿ ವಿಜ್ಞಾನಕ್ಕೆ ಅರಬರು ನೀಡಿದ ಕೊಡುಗೆಗಳನ್ನು ನೋಡೋಣ.

- ಅರಬ ಅಂಕೆಗಳನ್ನು, ಸೊನ್ನೆಯನ್ನು ಭಾರತದಿಂದ ಯುರೋಪಿನಲ್ಲಿ ಪ್ರಚಾರ ಮಾಡಿದರು.

- ರಸಾಯನ ಶಾಸ್ತ್ರವನ್ನು ವಿಜ್ಞಾನದ ಒಂದು ಶಾಖೆಯನ್ನಾಗಿ ಅಭಿವೃದ್ಧಿಗೊಳಿಸಿದರು.
- ಅರಬರು ಆಲ್‌ಜೀಬ್ರಾ (Algebra) ಮತ್ತು ಪ್ರಕಾಶ ಶಾಸ್ತ್ರದ (Optics) ವಕ್ತಾರರಾಗಿದ್ದರು.

ಶಿಲುಬೆ ಯುದ್ಧಗಳು ವೈಜ್ಞಾನಿಕ-ತಾಂತ್ರಿಕ ರಂಗದ ಜ್ಞಾನದ ವಿನಿಮಯಕ್ಕೆ ಕಾರಣವಾದವು. ಅರಬರೊಂದಿಗಿನ ಸಂಬಂಧದಿಂದ ಯುರೋಪಿನ ಜನರು ಪ್ರಚಾರಕ್ಕೆ ತಂದ ತಂತ್ರಜ್ಞಾನದಲ್ಲಿ ಕೆಲವೊಂದನ್ನು ಕೆಳಗೆ ನೀಡಲಾಗಿದೆ.

- ಟೆಲಿಸ್ಕೋಪ್ ನಿರ್ಮಾಣಕ್ಕೆ ಉಪಯೋಗಿಸುವ ಉಪಕರಣಗಳು.
- ನಗರಗಳ ದಾರಿದೀಪಗಳು, ಮಾಲಿನ್ಯ ನಿರ್ವಹಣೆ ಯೋಜನೆಗಳು.
- ಯಾಂತ್ರಿಕ ಗಡಿಯಾರಗಳು.
- ಗೇರ್‌ನ ತತ್ವ
- ಶಸ್ತ್ರಕ್ರಿಯೆಯಲ್ಲಿ ಉಪಯೋಗಿಸುವ ಉಪಕರಣಗಳು
- ಆಲ್‌ಜಿಬ್ರಾ, ಅಲ್ಕೆಮಿ, ತ್ರಿಕೋನಮಿತಿ.

**ಕೈಫಂಗಿಯ ಕ್ಲಾಕ್ ಟವರ್**





8ನೇ ಶತಮಾನದಲ್ಲಿ ಚೀನೀಯರು ಪ್ರಪಂಚದಲ್ಲೇ ಮೊದಲಬಾರಿಗೆ ಗಡಿಯಾರಗಳನ್ನು ನಿರ್ಮಿಸಿದರು. ಜಲಶಕ್ತಿಯಿಂದ ಚಲಿಸುತ್ತಿದ್ದ 12 ಮೀಟರ್ ಎತ್ತರದ ಜ್ಯೋತಿಶಾಸ್ತ್ರ ಗಡಿಯಾರದ ಕುರಿತು ಚೀನಾದ ಗ್ರಂಥಗಳಲ್ಲಿ ಉಲ್ಲೇಖವಿದೆ. ಈ ಗಡಿಯಾರದಲ್ಲಿ ಕಾಣುವ ಮನುಷ್ಯರೂಪಗಳು ಸರಿಯಾದ ಸಮಯಕ್ಕೆ ಗಂಟೆ ಬಾರಿಸುತ್ತಿದ್ದವು ಮತ್ತು ಚೆಂಡೆ ಬಡಿಯುತ್ತಿದ್ದವು.

ಯುರೋಪಿನಲ್ಲಿ ಪ್ರಚಾರಕ್ಕೆ ಬಂದ ಮಧ್ಯಕಾಲದ ಪೌರಾತ್ಯ ಚಿಂತನೆಗಳು, ವಿಜ್ಞಾನ ಮತ್ತು ತಂತ್ರಜ್ಞಾನದ ಕುರಿತಾದ ಜ್ಞಾನ ಮೊದಲಾದುವುಗಳು ಆಧುನಿಕ ಲೋಕದ ಉದಯ ಹಾಗೂ ಕೈಗಾರಿಕೆ ಮತ್ತು ವೈಜ್ಞಾನಿಕ ರಂಗದ ಪ್ರಗತಿಗೆ ಭದ್ರವಾದ ಅಡಿಪಾಯವನ್ನು ಹಾಕಲು ಸಹಾಯಕವಾಯಿತು.

ಮಧ್ಯಕಾಲದ ಶೈಕ್ಷಣಿಕ-ವೈಜ್ಞಾನಿಕ ಪ್ರಗತಿಯು ಆಧುನಿಕ ಜಗತ್ತಿನ ಉದಯಕ್ಕೆ ಕಾರಣವಾಯಿತು. ಈ ವಿಷಯದಲ್ಲಿ ಒಂದು ಸಂವಾದ ನಡೆಸಿರಿ.



## ಪೌರಾತ್ಯ ಮತ್ತು ಪಾಶ್ಚಾತ್ಯ ವಿನಿಮಯಗಳ ಕಾಲ

**ವಾಣಿಜ್ಯ**

ವಾಣಿಜ್ಯ ಮಾರ್ಗಗಳು → ರೇಶ್ಮೆದಾರಿ → ಸುಗಂಧದ್ರವ್ಯ ದಾರಿ → ವ್ಯಾಪಾರ ಕೇಂದ್ರಗಳು → ನಗರಗಳ ರೂಪೀಕರಣ → ಗಿಲ್ಡ್‌ಗಳು

**ಸಂಸ್ಕೃತಿ**

ಶಿಕ್ಷಣ → ವಿಶ್ವವಿದ್ಯಾಲಯಗಳು → ಸಾಂಸ್ಕೃತಿಕ ವಿನಿಮಯ → ಕಲೆ → ಸಾಹಿತ್ಯ → ಸಂಗೀತ → ವಿಜ್ಞಾನ



### ಪ್ರಧಾನ ಕಲಿಕಾ ಸಾಧನೆಗಳಲ್ಲಿ ಒಳಪಡುವವುಗಳು

- ಪೌರಾತ್ಯ ಮತ್ತು ಪಾಶ್ಚಾತ್ಯ ಪ್ರದೇಶಗಳನ್ನು ಪರಸ್ಪರ ಜೋಡಿಸುವ ವಾಣಿಜ್ಯ ಮಾರ್ಗಗಳನ್ನು ಮತ್ತು ವ್ಯಾಪಾರ ಸಂಬಂಧಗಳನ್ನು ತಿಳಿಯುತ್ತಾರೆ.
- ಮಧ್ಯಯುಗದ ವಾಣಿಜ್ಯ ಕೇಂದ್ರಗಳ ಮತ್ತು ನಗರಗಳ ಪಟ್ಟಿ ತಯಾರಿಸುತ್ತಾರೆ.
- ಮಧ್ಯಯುಗದಲ್ಲಿ ವ್ಯಾಪಾರಕ್ಕಿರುವ ಪ್ರಾಧಾನ್ಯವನ್ನು ವಿಶದೀಕರಿಸುತ್ತಾರೆ.
- ಯುರೋಪಿನಲ್ಲಿ ನೆಲೆ ನಿಂತಿದ್ದ ಗಿಲ್ಡ್‌ಗಳ ವಿಶೇಷತೆಗಳನ್ನು ವಿಶದೀಕರಿಸುತ್ತಾರೆ.
- ಯುರೋಪ್, ಮಧ್ಯಏಷ್ಯಾ, ಚೀನಾ ಮೊದಲಾದೆಡೆಗಳಲ್ಲಿ ಶೈಕ್ಷಣಿಕ-ವೈಜ್ಞಾನಿಕ ರಂಗಗಳಲ್ಲಿ ಉಂಟಾದ ಪ್ರಗತಿಯನ್ನು ವಿಶ್ಲೇಷಿಸುತ್ತಾರೆ.

- ಮಧ್ಯಕಾಲದ ಜಗತ್ತಿನ ವಿವಿಧ ಭಾಗಗಳಲ್ಲಿ ಕಲಾರಂಗದಲ್ಲಿ ಉಂಟಾದ ಬದಲಾವಣೆಗಳನ್ನು ವಿವರಿಸುತ್ತಾರೆ.
- ಮಧ್ಯಕಾಲದಲ್ಲಿ ಅರಬರು ವಿವಿಧ ವಲಯಗಳಿಗೆ ನೀಡಿದ ಕೊಡುಗೆಗಳನ್ನು ಅವಲೋಕಿಸುತ್ತಾರೆ.



## ಮೌಲ್ಯನಿರ್ಣಯ ಮಾಡುವ

- 'ವಾಣಿಜ್ಯ ಮಾರ್ಗಗಳು ಪೌರಾತ್ಯ ಮತ್ತು ಪಾಶ್ಚಾತ್ಯ ಪ್ರದೇಶಗಳನ್ನು ಪರಸ್ಪರ ಜೋಡಿಸಿದವು' ಸಮರ್ಥಿಸಿರಿ.
- ವಾಣಿಜ್ಯದ ದೂರ ಬೆಳವಣಿಗೆಗೆ ಕಾರಣವಾದ ಸನ್ನಿವೇಶಗಳನ್ನು ಪರಿಶೋಧಿಸಿರಿ.
- ನಗರಗಳು ವ್ಯಾಪಾರದ ಕೇಂದ್ರಗಳಾಗಿ ಬದಲಾವಣೆಯಾಗಲಿರುವ ಕಾರಣಗಳು ಯಾವುವು ?
- ಮಧ್ಯಯುಗದಲ್ಲಿ ವಿಜ್ಞಾನ ಮತ್ತು ತಂತ್ರಜ್ಞಾನದಲ್ಲಿ ಉಂಟಾದ ಪ್ರಗತಿಯ ಕುರಿತು ಟಿಪ್ಪಣಿ ತಯಾರಿಸಿರಿ.
- ಮಧ್ಯಕಾಲ ಜಗತ್ತಿನಲ್ಲಿ ಸ್ವಂತವಾಗಿ ನಾಣ್ಯಗಳನ್ನು ಮುದ್ರಿಸಿದ ನಗರಗಳು ಯಾವುವು?
- ಕೆಳಗೆ ನೀಡಿರುವ ನಗರಗಳ ಪಟ್ಟಿ ತಯಾರಿಸಿ ಬಾಗ್ದಾದ್, ಫ್ಲೋರೆನ್ಸ್, ಜೆನೋವಾ, ಡಮಾಸ್ಕಸ್, ವೆನ್ನಿಸ್, ಮಕ್ಕ.

| ಯುರೋಪಿನ ನಗರಗಳು | ಪೂರ್ವದ ನಗರಗಳು |
|---|---|
| ♦ | ♦ |
| ♦ | ♦ |
| ♦ | ♦ |
| ♦ | ♦ |

- ಗಿಲ್ಡ್‌ಗಳ ಪ್ರಧಾನ ಜವಾಬ್ದಾರಿಗಳನ್ನು ಪಟ್ಟಿಮಾಡಿರಿ.
- ಮಧ್ಯಯುಗದಲ್ಲಿ ಯುರೋಪಿನ ಶಾಲೆಗಳಲ್ಲಿ ಕಲಿಸುತ್ತಿದ್ದ ಪ್ರಧಾನ ಪಠ್ಯವಿಷಯಗಳು ಯಾವುವು?
- ಪಟ್ಟಿಯನ್ನು ಪೂರ್ತಿಗೊಳಿಸಿರಿ.

| ವಿಜ್ಞಾನಿಗಳು | ಕೊಡುಗೆಗಳು |
|---|---|
| ♦ ಇಬ್ನೂ ಸೀನ | ♦.................................... |
| ♦ ಮುಹಮ್ಮದ್ ಅಲ್‌ರಾಸಿ | ♦.................................... |
| ♦ .................................... | ♦ಶಸ್ತ್ರಕ್ರಿಯೆಯ ಪಿತ |



## ಮುಂದುವರಿದ ಚಟುವಟಿಕೆಗಳು

- ಮಧ್ಯಕಾಲದಲ್ಲಿ ಪ್ರಪಂಚದ ವಿವಿಧ ಭಾಗಗಳಲ್ಲಿದ್ದ ವಿಶ್ವವಿದ್ಯಾಲಯಗಳ ಕುರಿತು ಅನ್ವೇಷಣೆ ಮಾಡಿ ಮಾಹಿತಿ ಸಂಗ್ರಹಿಸಿ ಟಿಪ್ಪಣಿ ತಯಾರಿಸಿರಿ.
- ಮಧ್ಯಕಾಲದಲ್ಲಿ ಪ್ರಪಂಚಕ್ಕೆ ಮಹತ್ತರ ಕೊಡುಗೆಗಳನ್ನು ನೀಡಿದ ತತ್ವಚಿಂತಕರ ಮತ್ತು ಪಂಡಿತರ ಕುರಿತು ಒಂದು ಪ್ರಬಂಧ ತಯಾರಿಸಿರಿ.

ಅಧ್ಯಾಯ

03




# ಭಾರತದ ಸಂವಿಧಾನ: ಹಕ್ಕುಗಳು ಮತ್ತು ಕರ್ತವ್ಯಗಳು

## ಭಾರತದ ಸಂವಿಧಾನ

### ಪ್ರಸ್ತಾವನೆ

**ಭಾರತದ ಜನಗಳಾದ ನಾವು** ಭಾರತವನ್ನು ಒಂದು [ಸಾರ್ವಭೌಮ ಸಮಾಜವಾದೀ ಸರ್ವಧರ್ಮ, ಸಮಭಾವದ ಪ್ರಜಾಸತ್ತಾತ್ಮಕ ಗಣರಾಜ್ಯವಾಗಿ] ರಚಿಸಲು ಮತ್ತು ಅದರ ಸಮಸ್ತ ನಾಗರಿಕರಿಗೆ:

ಸಾಮಾಜಿಕ, ಆರ್ಥಿಕ ಮತ್ತು ರಾಜಕೀಯ ನ್ಯಾಯ:

ವಿಚಾರ, ಅಭಿವ್ಯಕ್ತಿ, ವಿಶ್ವಾಸ, ಧರ್ಮಶ್ರದ್ಧೆ ಮತ್ತು ಉಪಾಸನಾ ಸ್ವಾತಂತ್ರ್ಯ:

ಸ್ಥಾನಮಾನ ಹಾಗೂ ಅವಕಾಶ ಸಮಾನತೆ.

ದೊರೆಯುವಂತೆ ಮಾಡಲು ಮತ್ತು ವ್ಯಕ್ತಿ ಗೌರವವನ್ನು, [ರಾಷ್ಟ್ರದ ಏಕತೆಯನ್ನು ಹಾಗೂ ಅಖಂಡತೆಯನ್ನು] ಸುನಿಶ್ಚಿತಗೊಳಿಸಿ ಅವರಲ್ಲಿ ಭ್ರಾತೃಭಾವನೆಯನ್ನು ವೃದ್ಧಿಗೊಳಿಸಲು ಶ್ರದ್ಧಾಪೂರ್ವಕ ಸಂಕಲ್ಪ ಮಾಡಿದವರಾಗಿ;

ನಮ್ಮ ಸಂವಿಧಾನ ಸಭೆಯಲ್ಲಿ 1949ನೆಯ ಇಸವಿ ನವೆಂಬರ್ ತಿಂಗಳ ಇಪ್ಪತ್ತಾರನೆಯ ತಾರೀಖಾದ ಈ ದಿವಸ ಈ ಮೂಲಕ ಈ ಸಂವಿಧಾನವನ್ನು ಅಂಗೀಕರಿಸಿ, ಅಧಿನಿಯಮಿಸಿ ಅರ್ಪಿಸಿಕೊಂಡಿದ್ದೇವೆ.

## THE CONSTITUTION OF INDIA

### PREAMBLE

WE, THE PEOPLE OF INDIA, having solemnly resolved to constitute India into a [SOVEREIGN SOCIALIST SECULAR DEMOCRATIC REPUBLIC] and to secure to all its citizens:

JUSTICE, social, economic and political;

LIBERTY of thought, expression, belief, faith and worship;

EQUALITY of status and of opportunity;

and to promote among them all

FRATERNITY assuring the dignity of the individual and the [unity and integrity of the Nation];

IN OUR CONSTITUENT ASSEMBLY this twenty-sixth day of November, 1949, do HEREBY ADOPT, ENACT AND GIVE TO OURSELVES THIS CONSTITUTION.

ನೀವು ಓದಿದ್ದು ಭಾರತೀಯ ಸಂವಿಧಾನದ ಪ್ರಸ್ತಾವನೆಯಾಗಿದೆ. ಪ್ರಸ್ತಾವನೆಯಲ್ಲಿ ಭಾರತ ಒಂದು ಪರಮಾಧಿಕಾರ, ಸಮಾಜವಾದಿ, ಜಾತ್ಯತೀತ, ಪ್ರಜಾಪ್ರಭುತ್ವ, ಗಣರಾಜ್ಯ ಆಗಿದೆ ಎಂದು ಸಾರಿದೆ. ಅದರೊಂದಿಗೆ ನಮ್ಮ ಸಂವಿಧಾನವು ಕೆಲವು ಸಾಮಾಜಿಕ, ರಾಜಕೀಯ, ಆರ್ಥಿಕ ಗುರಿಗಳು ಖಚಿತಪಡಿಸುತ್ತವೆಂದು ಪ್ರಸ್ತಾಪಿಸಲಾಗಿದೆ. ಅವು ಯಾವುವೆಲ್ಲ.....

- ಸಾಮಾಜಿಕ, ಆರ್ಥಿಕ ಮತ್ತು ರಾಜಕೀಯ ನೀತಿ.
- 
- 
- 
- 

ಪ್ರಸ್ತಾವನೆಯಲ್ಲಿ ಪ್ರಸ್ತಾಪಿಸಿದ ಈ ಗುರಿಗಳನ್ನು ಪಡೆಯಲಿರುವ ವ್ಯವಸ್ಥೆಗಳನ್ನು ನಮ್ಮ ಸಂವಿಧಾನದಲ್ಲಿ ಒಳಪಡಿಸಲಾಗಿದೆ. ಅವುಗಳಲ್ಲಿ ಪ್ರಧಾನವಾದವುಗಳನ್ನು ಕೆಳಗೆ ಕೊಡಲಾಗಿದೆ.

- ಮೂಲಭೂತ ಹಕ್ಕುಗಳು
- ನಿರ್ದೇಶಕ ತತ್ವಗಳು
- ಮೂಲಭೂತ ಕರ್ತವ್ಯಗಳು

## ಮೂಲಭೂತ ಹಕ್ಕುಗಳು

ಹಕ್ಕುಗಳ ಕುರಿತು ಹಿಂದಿನ ತರಗತಿಗಳಲ್ಲಿ ಚರ್ಚಿಸಿರುವಿರಲ್ಲವೇ. ಪ್ರಜಾಪ್ರಭುತ್ವ ಸಮಾಜದ ಅವಿಭಾಜ್ಯ ಘಟಕವಾದ ಹಕ್ಕುಗಳನ್ನು ಭಾರತವು ಖಚಿತಪಡಿಸುತ್ತದೆ. ಇದರಲ್ಲಿ ಅತ್ಯಂತ ಅನಿವಾರ್ಯವಾಗಿರುವ ಹಕ್ಕುಗಳನ್ನು ಮೂಲಭೂತ ಹಕ್ಕುಗಳು ಎಂಬ ಹೆಸರಿನಲ್ಲಿ ನಮ್ಮ ಸಂವಿಧಾನದ IIIನೇ ಭಾಗದಲ್ಲಿ (Part - 3) ಒಳಪಡಿಸಲಾಗಿದೆ.

ಯಾಕಾಗಿ ಕೆಲವು ಹಕ್ಕುಗಳನ್ನು ಮೂಲಭೂತ ಹಕ್ಕುಗಳು ಎಂಬುದಾಗಿ ಕರೆಯುತ್ತಾರೆ?

ಮೂಲಭೂತ ಹಕ್ಕುಗಳು ಓರ್ವ ವ್ಯಕ್ತಿಗೆ ಯಾವುದೇ ಕಾರಣಕ್ಕೂ ನಿಷೇಧಿಸಲು ಸಾಧ್ಯವಿಲ್ಲದ ಹಕ್ಕುಗಳಾಗಿವೆ. ಅವುಗಳನ್ನು ವ್ಯಕ್ತಿಯ ಸರ್ವಾಂಗೀಣ ಅಭಿವೃದ್ಧಿಯಿಂದ ಹೊರತುಪಡಿಸಲು ಸಾಧ್ಯವಿಲ್ಲ. ಉತ್ತಮ ಜೀವನ ನಡೆಸಲು ಅವುಗಳು ಅತಿ ಅಗತ್ಯವಾಗಿವೆ. ಆದುದರಿಂದಲೇ ಮೂಲಭೂತ ಹಕ್ಕುಗಳು ಹಾಗೂ ಅವುಗಳ ಸಂರಕ್ಷಣೆಗೆ ಪ್ರಜಾಪ್ರಭುತ್ವ ಸಮಾಜದಲ್ಲಿ ಮಹತ್ತರವಾದ ಪ್ರಾಧಾನ್ಯವಿದೆ.

ವಿದೇಶೀಯರ ಅಧೀನದಲ್ಲಿರುವಾಗ ಭಾರತದ ಪ್ರಜೆಗಳಿಗೆ ಹಕ್ಕು ಹಾಗೂ ಸ್ವಾತಂತ್ರ್ಯ ಲಭ್ಯವಾಗಿತ್ತೇ.

ಬ್ರಿಟಿಷ್ ಆಡಳಿತ ಕಾಲದಲ್ಲಿ ಭಾರತೀಯರಿಗೆ ಹಲವು ಹಕ್ಕುಗಳು ನಿಷೇಧಿಸಲ್ಪಟ್ಟಿರುವುದಾಗಿ ನೀವು ಅರ್ಥಮಾಡಿಕೊಂಡಿದ್ದೀರಲ್ಲವೇ. ಭಾರತದ ಸ್ವಾತಂತ್ರ್ಯ ಚಳುವಳಿಯು ಪೌರರಿಗೆ ಹಕ್ಕುಗಳನ್ನು ಒದಗಿಸಬೇಕೆಂದು ನಿರಂತರವಾಗಿ ಆಗ್ರಹಿಸಿತು. ಇದರಲ್ಲಿ 1928ರ ನೆಹರು ಸಮಿತಿಯ ವರದಿಯು ಅತಿ ಪ್ರಧಾನವಾದುದಾಗಿದೆ. ಈ ವರದಿಯು ಭಾರತೀಯ ಪ್ರಜೆಗಳಿಗೆ ಖಚಿತಪಡಿಸಿದ ಹಕ್ಕುಗಳ ಪಟ್ಟಿಯನ್ನು ಸಮರ್ಪಿಸಿತು. ಸ್ವಾತಂತ್ರ್ಯ ಚಳವಳಿಯ ಗುರಿ ಹಾಗೂ

ನೆಹರು ಸಮಿತಿಯ ವರದಿಯು ನಿರ್ದೇಶಿಸಿರುವ ಹಕ್ಕುಗಳ ಆಧಾರದಲ್ಲಿ ಸಂವಿಧಾನ ರಚನಾ ಸಭೆಯು ಮೂಲಭೂತ ಹಕ್ಕುಗಳನ್ನು ತಯಾರಿಸಿತು. ಅಮೇರಿಕಾದ ಸಂವಿಧಾನದಲ್ಲಿರುವ ಹಕ್ಕುಗಳ ಪಟ್ಟಿಯು ನಮ್ಮ ಮೂಲಭೂತ ಹಕ್ಕುಗಳನ್ನು ರೂಪಿಸುವುದರಲ್ಲಿ ಪ್ರಭಾವ ಬೀರಿದೆ.




ಭಾರತದ ಸಂವಿಧಾನದ ಮೂಲಭೂತ ಹಕ್ಕುಗಳನ್ನು ಚಿತ್ರದಲ್ಲಿ ನಿರೀಕ್ಷಿಸಿರಿ.

ಭಾರತದ ಸಂವಿಧಾನವು ಪ್ರಧಾನವಾದ 6 ಮೂಲಭೂತ ಹಕ್ಕುಗಳನ್ನು ಪ್ರಸ್ತಾಪಿಸಿದೆ. ಅವುಗಳಲ್ಲಿ ಪ್ರತಿಯೊಂದನ್ನು ವಿವರವಾಗಿ ಪರಶೀಲಿಸುವ.

"ಮೂಲಭೂತ ಹಕ್ಕುಗಳು ಉತ್ತಮವಾದ ಜೀವನ ನಡೆಸಲು ಅನಿವಾರ್ಯವಾಗಿದೆ". ಚರ್ಚಿಸಿರಿ.



## ಸಮಾನತೆಯ ಹಕ್ಕು

### ಮಧ್ಯಮಪುರ ಗ್ರಾಮದ 'ಜಾತಿಗೋಡೆಯನ್ನು' ಒಡೆಯಬೇಕೆಂದ ಮಾನವ ಹಕ್ಕು ಸಂಘಟನೆಗಳು

ದೆಹಲಿ: ಉತ್ತರ ಭಾರತದ ಗ್ರಾಮವಾದ ಮಧ್ಯಮಪುರದಲ್ಲಿ ದಲಿತ ವಿಭಾಗದವರು ಉನ್ನತ ಜಾತಿಯಲ್ಲಿ ಸೇರಿದವರ ವಾಸಸ್ಥಳಗಳಿಗೆ ಪ್ರವೇಶಿಸುವುದನ್ನು ತಡೆಯಲು ನಿರ್ಮಿಸಿದ ಅಡ್ಡಗೋಡೆಯನ್ನು ಮುರಿಯಬೇಕೆಂದು ವಿವಿಧ ಮಾನವ ಹಕ್ಕು ಸಂಘಟನೆಗಳು ಸರಕಾರದೊಂದಿಗೆ ಕೇಳಿಕೊಂಡವು... ಮಧ್ಯಮಪುರದ ಅಸ್ಪೃಶ್ಯತೆಯು ವ್ಯವಸ್ಥೆಗೆ ಮಾತ್ರ ಸೀಮಿತವಾಗಿದೆ. ಸ್ತ್ರೀಯರಿಗೆ ಬೀದಿಗಳಲ್ಲಿಯೂ ಹೋಟಲ್‌ಗಳಿಗೂ ಪ್ರವೇಶ ನಿಷೇಧಿಸಿರುವುದು ಮತ್ತು ಇತರ ಪ್ರದೇಶದವರು ಈ ಊರಿಗೆ ಪ್ರವೇಶಿಸದಂತೆ ತಡೆದಿರುವ ವಾರ್ತೆ ಈ ಹಿಂದೆಯೇ ಸುದ್ದಿಯಾಗಿತ್ತು.

ಯಾವೆಲ್ಲ ರೀತಿಯಲ್ಲಿರುವ ಬೇದಭಾವಗಳ ಕುರಿತು ಪತ್ರಿಕಾ ವಾರ್ತೆಯಲ್ಲಿ ವಿವರಿಸಲಾಗಿದೆ?

- ಜಾತಿಯ ಆಧಾರದಲ್ಲಿರುವ ಬೇದಭಾವ.
- ಸ್ತ್ರೀ-ಪುರುಷ ಅಸಮಾನತೆ.
- ಜನನ ಸ್ಥಳದ ಆಧಾರದಲ್ಲಿರುವ ಬೇದಭಾವ.

ನಮ್ಮ ಸಮಾಜದಲ್ಲಿ ಅನೇಕ ಅಸಮಾನತೆ ಹಾಗೂ ಬೇದಭಾವಗಳು ನೆಲೆನಿಂತಿದೆ. ಈ ರೀತಿ ಇರುವ ಸಾಮಾಜಿಕ ಅಸಮಾನತೆಗಳನ್ನು ಕೊನೆಗೊಳಿಸುವುದಕ್ಕೆ ಮತ್ತು ಸಮಾನತೆಯನ್ನು

### ಕಾನೂನಿನ ಮುಂದೆ ಸಮಾನತೆ

ಅಸ್ತಿತ್ವದಲ್ಲಿರುವ ಕಾನೂನು ವ್ಯವಸ್ಥೆಯ ಮುಂದೆ ಎಲ್ಲ ಪ್ರಜೆಗಳು ಸಮಾನರು ಎಂಬುದಾಗಿ ಈ ಮೇಲಿನ ಆಶಯವು ಉದ್ದೇಶಿಸುತ್ತದೆ. ವ್ಯಕ್ತಿಯೊಬ್ಬನ ಔದ್ಯೋಗಿಕ ಪದವಿ, ಅಧಿಕಾರ ಯಾವುದಾಗಿದ್ದರೂ ಅವರು ಕಾನೂನಿಗೆ ಅತೀತರಲ್ಲ.

### ವಿಶೇಷ ಸ್ಥಾನಮಾನವನ್ನು(ಪದವಿ) ಕೊನೆಗೊಳಿಸವುದು.

ಬ್ರಿಟಿಷರ ಆಡಳಿತ ಕಾಲದಲ್ಲಿ ಅವರ ಇಷ್ಟಗಳನ್ನು ಸಂರಕ್ಷಿಸಲು ಸಹಾಯ ಮಾಡುವ ಭಾರತೀಯ ಉದ್ಯೋಗಿಗಳಿಗೆ 'ಸರ್' ಎಂಬ ವಿಶೇಷ ಪದವಿಯನ್ನು ನೀಡುತ್ತಿದ್ದರು. ಸಾಮ್ರಾಜ್ಯಶಾಹಿತ್ವದ ಹಿತಾಸಕ್ತಿಗಳನ್ನು ಸಂರಕ್ಷಿಸುವುದಕ್ಕಾಗಿ ಈ ರೀತಿಯ ಪದವಿಗಳನ್ನು ದುರುಪಯೋಗಗೊಳಿಸುವುದನ್ನು ಭಾರತದ ಸ್ವಾತಂತ್ರ್ಯ ಚಳವಳಿಗಾರರು ವಿರೋಧಿಸುತ್ತಿದ್ದರು. ಈ ರೀತಿಯ ಪದವಿಗಳು ಅಸಮತ್ವಕ್ಕೆ ಕಾರಣವಾಗುವುದರಿಂದ ಭಾರತದ ಸಂವಿಧಾನವು ವಿಶೇಷ ಪದವಿಗಳನ್ನು ನಿಷೇಧಿಸಿತು.

ಖಾತರಿ ಪಡಿಸುವುದಕ್ಕೆ ಬೇಕಾಗಿ ಸಮಾನತೆಯ ಹಕ್ಕು ಜಾರಿಗೊಂಡಿದೆ.

ಸಮಾನತೆಗಿರುವ ಹಕ್ಕಿನಲ್ಲಿ ಸೇರಿಸಲಾಗಿರುವ ಆಶಯಗಳನ್ನು ಕೆಳಗೆ ಕೊಡಲಾಗಿದೆ.

- ಕಾನೂನಿನ ಮುಂದೆ ಸಮತ್ವ ಹಾಗೂ ಸಮಾನವಾದ ಕಾನೂನಿನ ಸಂರಕ್ಷಣೆಯನ್ನು ಖಚಿತಪಡಿಸುವುದು.
- ಜಾತಿ, ಮತ, ವರ್ಗ, ಲಿಂಗ, ಜನನ ಸ್ಥಳ ಎಂಬುದರ ಆಧಾರದಲ್ಲಿರುವ ತಾರತಮ್ಯವನ್ನು ನಿಷೇಧಿಸುವುದು.
- ಸಾಮಾನ್ಯ ಕಾನೂನುಗಳಲ್ಲಿ ಸಮಾನ ಅವಕಾಶವನ್ನು ಖಚಿತಪಡಿಸುವುದು.
- ಅಸ್ಪೃಶ್ಯತೆಯನ್ನು ಕೊನೆಗೊಳಿಸುವುದು.
- ವಿಶೇಷ ಸ್ಥಾನಮಾನವನ್ನು ಕೊನೆಗೊಳಿಸುವುದು.

ಆದರೆ ಮಹಿಳೆಯರು, ಮಕ್ಕಳು, ಹಿಂದುಳಿದ ವಿಭಾಗದವರಿಗೆ ಪ್ರತ್ಯೇಕ ಸೌಲಭ್ಯ ಒದಗಿಸುವುದು ಸಮಾನತೆಗಿರುವ ಹಕ್ಕುಗಳಿಗೆ ವಿರುದ್ಧವಲ್ಲ. ಈ ವಿಭಾಗಕ್ಕೆ ಪ್ರತ್ಯೇಕ ಪರಿಗಣನೆಯನ್ನು ನೀಡುವ ಮೂಲಕ ಅಸಮಾನತೆಯನ್ನು ಹೋಗಲಾಡಿಸಿ ಸಮಾನತೆಯನ್ನು ಕಾಪಾಡಲು ಸಾಧ್ಯವಾಗುತ್ತದೆ.

ಸಮಾನತೆಯನ್ನು ಗಳಿಸುವುದಕ್ಕಾಗಿ ಸರಕಾರ ಸ್ವೀಕರಿಸಿದ ಕ್ರಮಗಳನ್ನು ಕಂಡುಹಿಡಿದು ಪಟ್ಟಿಯನ್ನು ಉತ್ತಮಗೊಳಿಸಿರಿ.

- 1955ರ ಅಸ್ಪೃಶ್ಯತೆಯನ್ನು ಹೋಗಲಾಡಿಸುವ ಕಾನೂನು.
- 
- 

## ಸ್ವಾತಂತ್ರ್ಯದ ಹಕ್ಕು



ಇದು ಸಂವಿಧಾನ ಶಿಲ್ಪಿಯಾದ ಡಾ. ಅಂಬೇಡ್ಕರ್‌ರವರು ಜನರನ್ನು ಉದ್ದೇಶಿಸಿ ಮಾತನಾಡುತ್ತಿರುವುದು ಮತ್ತು ಭಾಷಣ ಕೇಳುವುದಕ್ಕಾಗಿ ಜನರು ಶಾಂತಿಯುತವಾಗಿ ಸಭೆ ಸೇರಿರುವ ಚಿತ್ರವಾಗಿದೆ. ಇವುಗಳೆರಡೂ ಭಾರತದ ಸಂವಿಧಾನ ಖಚಿತಪಡಿಸುವ ಕೆಲವು ಸ್ವಾತಂತ್ರ್ಯದ ಹಕ್ಕುಗಳಿಗೆ ಸಂಬಂಧಿಸಿವೆ. ಅವುಗಳು ಯಾವುವು?

- ವಾಕ್ ಸ್ವಾತಂತ್ರ್ಯ ಹಾಗೂ ಅಭಿವ್ಯಕ್ತಿ ಸ್ವಾತಂತ್ರ್ಯ.
- ಶಸ್ತ್ರಗಳನ್ನು ಹೊಂದದೆ ಶಾಂತಿಯುತವಾಗಿ ಸಭೆ ಸೇರುವ ಸ್ವಾತಂತ್ರ್ಯ.

ಅದಲ್ಲದೆ,

- ಸಂಘ-ಸಂಸ್ಥೆಗಳನ್ನು ರೂಪಿಸುವ ಸ್ವಾತಂತ್ರ್ಯ.
- ಭಾರತದೆಲ್ಲೆಡೆಯೂ ಸಂಚರಿಸಲಿರುವ ಸ್ವಾತಂತ್ರ್ಯ.
- ಭಾರತದೆಲ್ಲೆಡೆಯೂ ವಾಸಿಸಲಿಕ್ಕಿರುವ ಸ್ವಾತಂತ್ರ್ಯ.
- ಯಾವುದೇ ಉದ್ಯೋಗ, ವಾಣಿಜ್ಯ, ವ್ಯಾಪಾರಗಳನ್ನು ನಡೆಸಲಿರುವ ಸ್ವಾತಂತ್ರ್ಯ.
- ಜೀವ ಹಾಗೂ ವ್ಯಕ್ತಿ ಸ್ವಾತಂತ್ರ್ಯದ ಸಂರಕ್ಷಣೆ.
- 6ರಿಂದ 14 ವಯಸ್ಸಿನವರೆಗಿನ ಎಲ್ಲ ಮಕ್ಕಳಿಗೆ ಕಡ್ಡಾಯ ಮತ್ತು ಉಚಿತ ವಿದ್ಯಾಭ್ಯಾಸಕ್ಕಿರುವ ಸ್ವಾತಂತ್ರ್ಯ.
- ಅನ್ಯಾಯವಾಗಿ ಬಂಧನ ಹಾಗೂ ಜೈಲುವಾಸದಿಂದ ಸಂರಕ್ಷಣಾ ಸ್ವಾತಂತ್ರ್ಯ.

**ಜೀವ ಹಾಗೂ ವ್ಯಕ್ತಿ ಸ್ವಾತಂತ್ರದ ಸಂರಕ್ಷಣೆ**

ಸಂವಿಧಾನದ ಪ್ರಕಾರ ಒಬ್ಬ ವ್ಯಕ್ತಿಯ ಜೀವಕ್ಕೂ ಸ್ವಾತಂತ್ರ್ಯಕ್ಕೂ ಹಾನಿಯಾಗಬಾರದು. ಈ ಹಕ್ಕುಗಳು ತುರ್ತು ಪರಿಸ್ಥಿತಿಯ ಸಂದರ್ಭದಲ್ಲಿಯೂ ನಿಷೇಧಿಸಬಾರದು. ಆಡಳಿತಾಧಿಕಾರಿಗಳ ಏಕಾಧಿಪತ್ಯದ ನಡತೆಯನ್ನು ತಡೆಯಲು ಈ ಹಕ್ಕು ಜನರಿಗೆ ಸಹಾಯ ಮಾಡುತ್ತದೆ.

ಇವುಗಳು ಸ್ವಾತಂತ್ರ್ಯಕ್ಕಿರುವ ಹಕ್ಕುಗಳಲ್ಲಿ ಒಳಗೊಳ್ಳುತ್ತವೆ.

ಪ್ರಜಾಪ್ರಭುತ್ವ ದೇಶದಲ್ಲಿ ಸ್ವಾತಂತ್ರ್ಯಕ್ಕಿರುವ ಹಕ್ಕುಗಳಿಗೆ ಬಹಳ ಪ್ರಾಧಾನ್ಯವಿದೆ. ಮೇಲೆ ಸೂಚಿಸಿರುವ ಸ್ವಾತಂತ್ರ್ಯದ ಹಕ್ಕುಗಳು ಭಾರತದಲ್ಲಿ ಪ್ರಜಾಪ್ರಭುತ್ವ ಸಂಸ್ಕೃತಿಯನ್ನು ಬಲಗೊಳಿಸಲು ಸಹಾಯ ಮಾಡಿದೆ. ಅದೇ ಸಂದರ್ಭದಲ್ಲಿ ಇವುಗಳೆಲ್ಲವೂ ನಿಯಂತ್ರಣಕ್ಕೊಳಪಡುವವುಗಳು ಆಗಿವೆ. ದೇಶದ ಐಕ್ಯತೆಗೂ ಶಾಂತಿಯುತ ವಾತಾವರಣಕ್ಕೂ ಸವಾಲಾಗುವ ರೀತಿಯಲ್ಲಿ ಈ ಸ್ವಾತಂತ್ರ್ಯವನ್ನು ಅನುಭವಿಸಲು ಸಾಧ್ಯವಿಲ್ಲ.

'ಸ್ವಾತಂತ್ರ್ಯದ ಹಕ್ಕು ಪ್ರಜಾಪ್ರಭುತ್ವ ವ್ಯವಸ್ಥೆಯನ್ನು ಬಲಪಡಿಸುತ್ತದೆ.' ವಿಶ್ಲೇಷಿಸಿರಿ.

## ಶೋಷಣೆಯಿಂದ, ರಕ್ಷಣೆ ಪಡೆಯಲಿರುವ ಹಕ್ಕು



ಚಿತ್ರಗಳನ್ನು ಗಮನಿಸಿರಿ. ಅವುಗಳಿಂದ ಯಾವೆಲ್ಲ ಮಾಹಿತಿಗಳನ್ನು ತಿಳಿದುಕೊಳ್ಳಬಹುದು.

- ಇದು ಕೆಲಸದ ಸ್ಥಳಗಳಲ್ಲಿ ದುಡಿಯುವ ಮಕ್ಕಳ ಚಿತ್ರವಾಗಿದೆ.
- 
- 

ಬಾಲ ಕಾರ್ಮಿಕತೆ ಒಳಗೊಂಡಂತೆ ಹಲವು ರೀತಿಯ ಶೋಷಣೆಗಳು ಭಾರತದಲ್ಲಿ ಅಸ್ತಿತ್ವದಲ್ಲಿವೆ. ಗುಲಾಮಗಿರಿಗೆ ಸಮಾನವಾದ ಆರ್ಥಿಕ ಶೋಷಣೆಗಳು ನಮ್ಮ ಸುತ್ತಲೂ ಕಾಣಲು ಸಾಧ್ಯವಿದೆ. ಶೋಷಣೆಯಿಂದ ರಕ್ಷಣೆ ಪಡೆಯುವ ಹಕ್ಕು ಇಂತಹ ಶೋಷಣೆಗಳನ್ನು ನಿಷೇಧಿಸಲು ಸ್ವಾಭಿಮಾನದ ಜೀವನ ಸಾಗಿಸಲು ಜನರನ್ನು ಪ್ರಾಪ್ತರನ್ನಾಗಿಸಲು ಬೇಕಾಗಿರುವ ಹಕ್ಕಾಗಿದೆ.

ಈ ಹಕ್ಕಿನ ಪ್ರಕಾರ:

- ಒತ್ತಾಯದ ದುಡಿಮೆ, ಗುಲಾಮ ವ್ಯಾಪಾರ ಎಂಬವುಗಳನ್ನು ನಿಷೇಧಿಸಲಾಗಿದೆ.
- ಕಾರ್ಖಾನೆಗಳಲ್ಲಿ ಹಾಗೂ ಅಪಾಯಕಾರಿಯಾದ ಇತರ ಯಾವುದೇ ಕ್ಷೇತ್ರಗಳಲ್ಲಿ ಮಕ್ಕಳನ್ನು ಕೆಲಸಕ್ಕೆ ನೇಮಿಸುವುದನ್ನು ನಿಷೇಧಿಸಲಾಗಿದೆ.



ಶೋಷಣೆಯಿಂದ ರಕ್ಷಣೆ ಪಡೆಯಲಿರುವ ಹಕ್ಕುಗಳು ಪೌರರನ್ನು ಯಾವ ರೀತಿಯಲ್ಲಿ ಸಂರಕ್ಷಿಸುತ್ತದೆ ಚರ್ಚಿಸಿರಿ.

## ಧಾರ್ಮಿಕ-ಸ್ವಾತಂತ್ರ್ಯದ ಹಕ್ಕು



"ಅನೇಕ ಧರ್ಮಗಳಿರುವ ಭಾರತದಂತಹ ಒಂದು ದೇಶದ ಸರಕಾರಕ್ಕೆ ಆಧುನಿಕ ಕಾಲದಲ್ಲಿ ಜಾತ್ಯತೀತತೆಯನ್ನು ಪಾಲಿಸದಿರಲು ಸಾಧ್ಯವಿಲ್ಲ. ನಮ್ಮ ಸಂವಿಧಾನವು ಜಾತ್ಯತೀತತೆ ಆಶಯವನ್ನು ಒಳಗೊಂಡು ಧಾರ್ಮಿಕ ಸ್ವಾತಂತ್ರ್ಯವನ್ನು ಖಾತರಿಪಡಿಸುತ್ತದೆ."

ಜವಹರ್‌ಲಾಲ್ ನೆಹರು

ಆಧುನಿಕ ಭಾರತದ ಶಿಲ್ಪಿಯಾದ ಜವಹರ್‌ಲಾಲ್ ನೆಹರು ರವರ ಮಾತುಗಳನ್ನು ಗಮನಿಸಿದ್ದೀರಲ್ಲವೇ.

ಜಾತ್ಯತೀತತೆ ಎಂಬ ಪದದಿಂದ ಏನನ್ನು ಅರ್ಥೈಸಿಕೊಳ್ಳಬಹುದು?

ಭಾರತಕ್ಕೆ ಅಧಿಕೃತವಾಗಿ ಯಾವುದೇ ಧರ್ಮವಿಲ್ಲ. ಯಾವುದೇ ಒಂದು ಮತವನ್ನು ಭಾರತವು ಪ್ರೋತ್ಸಾಹಿಸುವುದಿಲ್ಲ. ಆದರೆ ನಮ್ಮ ಸಂವಿಧಾನವು ಧಾರ್ಮಿಕ ಸ್ವಾತಂತ್ರ್ಯವನ್ನು ಪೌರರಿಗೆ ಖಾತರಿಪಡಿಸಿದೆ. ಈ ಕೆಳಗಿನ ಹೇಳಿಕೆಗಳು ಧಾರ್ಮಿಕ ಸ್ವಾತಂತ್ರ್ಯದ ಹಕ್ಕನ್ನು ಖಚಿತಪಡಿಸುತ್ತದೆ.

- ತಮಗಿಷ್ಟವಾದ ಮತದಲ್ಲಿ ವಿಶ್ವಾಸವಿರಿಸಲು, ಆಚರಿಸಲು ಹಾಗೂ ಪ್ರಚಾರ ಮಾಡಲು ಇರುವಂತಹ ಹಕ್ಕುಗಳು.
- ವಿವಿಧ ಧರ್ಮಗಳಿಗೆ ಧಾರ್ಮಿಕ-ಜೀವಸಾಂತ್ವನ ಸಂಸ್ಥೆಗಳನ್ನು ಸ್ಥಾಪಿಸಲು ಹಾಗೂ ಅದರ ಜವಾಬ್ದಾರಿಯನ್ನು ನಿರ್ವಹಿಸಲಿರುವ ಸ್ವಾತಂತ್ರ್ಯ.

- ಯಾವುದಾದರೂ ಪ್ರತ್ಯೇಕ ಮತವನ್ನು ಪ್ರೋತ್ಸಾಹಿಸುವುದಕ್ಕಾಗಿ ತೆರಿಗೆ ಕೊಡಲು ನಿರ್ಬಂಧಿಸುವುದರ ವಿರುದ್ಧವಿರುವ ಹಕ್ಕು.

ಅದೇ ವೇಳೆಗೆ ಸರಕಾರ ನಡೆಸುವಂತದ್ದೋ ಅಥವಾ ಸರಕಾರದ ಅನುದಾನವನ್ನು ಸ್ವೀಕರಿಸುವಂತದ್ದೋ ಆದ ವಿದ್ಯಾಸಂಸ್ಥೆಗಳಲ್ಲಿ ಧಾರ್ಮಿಕ ವಿದ್ಯಾಭ್ಯಾಸ ಹಾಗೂ ಮತಸಂಬಂಧಿ ಆಚರಣೆಗಳನ್ನು ಕಡ್ಡಾಯಗೊಳಿಸಲು ಸಾಧ್ಯವಿಲ್ಲ.

ಧಾರ್ಮಿಕ ಸ್ವಾತಂತ್ರ್ಯದ ಹಕ್ಕು ಜಾತ್ಯತೀತತೆಯನ್ನು ಹೇಗೆ ಪ್ರೋತ್ಸಾಹಿಸುತ್ತದೆ. ಚರ್ಚೆಮಾಡಿರಿ.



## ಸಾಂಸ್ಕೃತಿಕ ಹಾಗೂ ಶೈಕ್ಷಣಿಕ ಹಕ್ಕುಗಳು




ನೀಡಿರುವ ಪತ್ರಿಕಾ ವಾರ್ತೆಯನ್ನು ಗಮನಿಸಿರಿ. ಇದು ಅಲ್ಪಸಂಖ್ಯಾತರ ಹಕ್ಕುಗಳಿಗೆ ಸಂಬಂಧಿಸಿರುವ ವಾರ್ತೆಯಾಗಿದೆ.

ಭಾರತವು ವೈವಿಧ್ಯಮಯವಾದ ದೇಶವಾಗಿದೆಯಲ್ಲವೇ. ವೈವಿಧ್ಯವನ್ನು ಅಂಗೀಕರಿಸುವುದು ಹಾಗೂ ಗೌರವಿಸುವುದು ದೇಶದ ಏಕತೆ ಮತ್ತು ಉನ್ನತಿಗೆ ಅಗತ್ಯವಾಗಿದೆ. ಆದುದರಿಂದಲೇ ಅಲ್ಪಸಂಖ್ಯಾತರ ಹಿತಾಸಕ್ತಿಯನ್ನು ಸಂರಕ್ಷಿಸುವುದಕ್ಕೆ ನಮ್ಮ ಸಂವಿಧಾನವು ಹೆಚ್ಚಿನ ಪರಿಗಣನೆಯನ್ನು ನೀಡುತ್ತದೆ. ಇತರ ಸಾಮಾಜಿಕ ವಿಭಾಗಗಳಿಗಿಂತ ಸಂಖ್ಯೆಯಲ್ಲಿ ಕಡಿಮೆಯಿರುವ, ಸ್ವಂತವಾಗಿ ಭಾಷೆ, ಲಿಪಿ, ಸಂಸ್ಕೃತಿಗಳಿರುವವರನ್ನು ಅಲ್ಪಸಂಖ್ಯಾತರೆನ್ನುತ್ತಾರೆ.

ನಮ್ಮ ಸಂವಿಧಾನದಲ್ಲಿ ಖಚಿತಪಡಿಸಿದ ಸಾಂಸ್ಕೃತಿಕ ಮತ್ತು ವಿದ್ಯಾಭ್ಯಾಸದ ಹಕ್ಕುಗಳು ಈ ವಿಭಾಗದವರ ಹಕ್ಕುಗಳನ್ನು ಸಂರಕ್ಷಿಸುತ್ತವೆ.

- ಅವರ ಭಾಷೆ, ಲಿಪಿ, ಸಂಸ್ಕೃತಿ ಎಂಬಿವುಗಳ ಸಂರಕ್ಷಣೆ.
- ಮತ ಮತ್ತು ಭಾಷಾ ಅಲ್ಪಸಂಖ್ಯಾತರಿಗೆ ತಮ್ಮ ಇಷ್ಟ ಪ್ರಕಾರ ವಿದ್ಯಾಸಂಸ್ಥೆ ಸ್ಥಾಪಿಸಲಿರುವ ಹಕ್ಕು.

"ಸಾಂಸ್ಕೃತಿಕವೂ ಶೈಕ್ಷಣಿಕವೂ ಆದ ಹಕ್ಕುಗಳು ದೇಶದ ಸಾಂಸ್ಕೃತಿಕ ಉನ್ನತಿಗೆ ಸಹಾಯವಾಗುವುದು." ಚರ್ಚೆ ಮಾಡಿರಿ.



## ಸಂವಿಧಾನಾತ್ಮಕ ಪರಿಹಾರ ಪಡೆಯಲಿರುವ ಹಕ್ಕು

ಮೂಲಭೂತ ಹಕ್ಕುಗಳ ಕುರಿತು ನೀವು ತಿಳಿದುಕೊಂಡಿರಲ್ಲವೇ. ಯಾವುದಾದರೂ ಮೂಲಭೂತ ಹಕ್ಕುಗಳು ಉಲ್ಲಂಘಿಸಲ್ಪಟ್ಟ ಸಂದರ್ಭವು ನಿಮ್ಮ ಗಮನಕ್ಕೆ ಬಂದಿದೆಯೆ?

ಮೂಲಭೂತ ಹಕ್ಕು ಉಲ್ಲಂಘಿಸಿದರೆ ಅದಕ್ಕಿರುವ ಪರಿಹಾರ ಮಾರ್ಗಗಳು ಇರಬೇಕಲ್ಲವೆ? ಮೂಲಭೂತ ಹಕ್ಕುಗಳನ್ನು ನಿಷೇಧಿಸಿದರೆ ಅದನ್ನು ಪರಿಹರಿಸಲಿರುವ ಮಾರ್ಗಗಳನ್ನು ಸಂವಿಧಾನವು ನಿರ್ದೇಶಿಸುತ್ತದೆ. ಇದು ಸಂವಿಧಾನ ಪರವಾದ ಪರಿಹಾರ ಪಡೆಯಲಿರುವ ಹಕ್ಕು ಎಂದು ತಿಳಿಯಲ್ಪಡುತ್ತದೆ. ಒಬ್ಬ ವ್ಯಕ್ತಿಯ ಮೂಲಭೂತ ಹಕ್ಕುಗಳು ಉಲ್ಲಂಘಿಸಲ್ಪಟ್ಟರೆ ಅವುಗಳನ್ನು ಪಡೆಯಲು ಅವನು ಸುಪ್ರೀಂಕೋರ್ಟನ್ನು, ಹೈಕೋರ್ಟನ್ನು ನೇರವಾಗಿ ಸಮೀಪಿಸಲಿರುವ ಹಕ್ಕನ್ನು ಸಂವಿಧಾನಾತ್ಮಕ ಪರಿಹಾರದ ಹಕ್ಕು ಎನ್ನುತ್ತಾರೆ. ಇದರಂತೆ ಮೂಲಭೂತ ಹಕ್ಕುಗಳು ಪುನಃಸ್ಥಾಪನೆ ಮಾಡಲು ಕೋರ್ಟುಗಳು ಹೊರಡಿಸುವ ಆಜ್ಞೆಯನ್ನು ರಿಟ್ ಎನ್ನುತ್ತಾರೆ.

ಸಂವಿಧಾನ ಪರವಾದ ಪರಿಹಾರ ಪಡೆಯಲಿರುವ ಹಕ್ಕಿನ ಕುರಿತು ಸಂವಿಧಾನ ಶಿಲ್ಪಿ ಡಾ. ಬಿ. ಆರ್. ಅಂಬೇಡ್ಕರ್ ಹೇಳಿದ ಮಾತುಗಳನ್ನು ಗಮನಿಸಿರಿ.

"ಈ ಸಂವಿಧಾನದಲ್ಲಿ ತುಂಬ ಪ್ರಧಾನವಾದ ವಿಭಾಗ ಯಾವುದೆಂದು ಕೇಳಿದರೆ ನನ್ನ ಉತ್ತರ ಸಂವಿಧಾನಾತ್ಮಕ ಪರಿಹಾರ ಪಡೆಯಲಿರುವ ಹಕ್ಕು ಎಂಬುದಾಗಿದೆ. ಇದು ಭಾರತದ ಸಂವಿಧಾನದ ಹೃದಯ ಹಾಗೂ ಆತ್ಮವಾಗಿದೆ"

ಡಾ. ಬಿ.ಆರ್. ಅಂಬೇಡ್ಕರ್





### ರಿಟ್‌ಗಳು

ಮೂಲಭೂತ ಹಕ್ಕುಗಳನ್ನು ಸಂರಕ್ಷಿಸುವುದಕ್ಕಾಗಿ ಐದು ರೀತಿಯ ರಿಟ್‌ಗಳನ್ನು ಹೊರತರಲು ಸುಪ್ರೀಂ ಕೋರ್ಟಿಗೂ ಹೈಕೋರ್ಟಿಗೂ ಅಧಿಕಾರವಿದೆ. ಹೆಬಿಯಸ್ ಕೊರ್ಪಸ್, ಮ್ಯಾನ್‌ಡಾಮಸ್, ಕೋವಾರಂಟ್, ಸೆರ್‌ಶ್ಯೋರಾರಿ (Certiorari) ಪ್ರೊಹಿಬಿಷನ್ ಇವುಗಳಾಗಿವೆ.

ಈ ಮಾತುಗಳಿಂದ ಸಂವಿಧಾನಾತ್ಮಕ ಪರಿಹಾರದ ಹಕ್ಕಿನ ಪ್ರಾಧಾನ್ಯವನ್ನು ನಾವು ತಿಳಿದುಕೊಳ್ಳಬಹುದು.



ಸಂವಿಧಾನಾತ್ಮಕ ಪರಿಹಾರದ ಹಕ್ಕಿನ ಪ್ರಾಧಾನ್ಯವನ್ನು ವಿವರಿಸಿರಿ.



ಕೆಳಗೆ ನೀಡಿರುವ ಪಟ್ಟಿಯಿಂದ 'ಎ' ವಿಭಾಗದಲ್ಲಿ ನೀಡಿರುವವುಗಳು ಯಾವ ಮೂಲಭೂತ ಹಕ್ಕುಗಳೊಂದಿಗೆ ಸಂಬಂಧಪಟ್ಟವುಗಳೆಂದು 'ಬ' ವಿಭಾಗದಲ್ಲಿ ಬರೆಯಿರಿ.

| ಎ | ಬಿ |
|---|---|
| ♦ ಅಭಿಪ್ರಾಯ ಪ್ರಕಟಣೆಗಿರುವ ಹಕ್ಕು | ♦ ಸ್ವಾತಂತ್ರ್ಯದ ಹಕ್ಕು |
| ♦ ಧರ್ಮ ಪ್ರಚಾರಕ್ಕಿರುವ ಹಕ್ಕು | |
| ♦ ಸಂಘಟನೆಗಳನ್ನು ರೂಪಿಸುವ ಹಕ್ಕು | |
| ♦ ಭಾಷೆಯನ್ನು ಸಂರಕ್ಷಿಸಲಿರುವ ಹಕ್ಕು | |
| ♦ ಅನ್ಯಾಯದ ಬಂಧನದಿಂದ ಸಂರಕ್ಷಣೆ | |
| ♦ ಸ್ತ್ರೀ-ಪುರುಷ ಭೇದ-ಭಾವ ಇಲ್ಲದಂತೆ ಮಾಡಲು | |
| ♦ ಸಮಾನತೆ ನಿಷೇಧಿಸಲ್ಪಟ್ಟರೆ ನ್ಯಾಯಾಲಯಕ್ಕೆ ಹೋಗಲಿರುವ ಹಕ್ಕು | |
| ♦ ಮಕ್ಕಳನ್ನು ಅಪಾಯಕಾರಿಯಾದ ಕೆಲಸದ ಸನ್ನಿವೇಶಗಳಿಂದ ಸಂರಕ್ಷಣೆ ಪಡೆಯುವ ಹಕ್ಕು. | |

## ನಿರ್ದೇಶಕ ತತ್ವಗಳು

ಪ್ಲಾಸ್ಟಿಕ್ ಮಾಲಿನ್ಯ ಸಂಸ್ಕರಣೆಗೆ ಕಾರ್ಯ ಯೋಜನೆಯನ್ನು ಆವಿಷ್ಕರಿಸಿದರು.

ಖಾದಿ ಉತ್ಪನ್ನಗಳಿಗೆ ಸರಕಾರ ದರ ಕಡಿತ ಘೋಷಣೆ.

ಪಾನ್ ಮಸಾಲೆಗಳನ್ನು ನಿಷೇಧಿಸಿತು.

ಕೊಟ್ಟಿರುವ ಕೊಲಾಷನ್ನು ಗಮನಿಸಿರಿ. ಯಾವೆಲ್ಲ ವಿಭಾಗಗಳನ್ನು ಕೊಲಾಷ್‌ನಲ್ಲಿ ಪ್ರತಿಪಾದಿಸಲಾಗಿದೆ.

- ಪರಿಸರ ಸಂರಕ್ಷಣೆ
- 
- 

ಜನಕ್ಷೇಮ ಉದ್ದೇಶವನ್ನು ಮುಂದಿರಿಸಿ ಮೇಲೆ ಹೇಳಿರುವಂತಹ ಕಾರ್ಯಕ್ರಮಗಳನ್ನು ನಡೆಸಲು ಸಂವಿಧಾನವು ಕೇಂದ್ರ-ರಾಜ್ಯ ಸರಕಾರಗಳನ್ನು ನಿರ್ದೇಶಿಸುತ್ತದೆ. ಇಂತಹ ನಿರ್ದೇಶಗಳನ್ನು ಸಂವಿಧಾನದ IVನೇ ಭಾಗದಲ್ಲಿ (Part IV) ನಿರ್ದೇಶಕ ತತ್ವಗಳು ಎಂಬ ಹೆಸರಿನಲ್ಲಿ ಸೇರಿಸಲಾಗಿದೆ. ಕ್ಷೇಮ ರಾಷ್ಟ್ರವೊಂದನ್ನು ಸೃಷ್ಟಿಸಲು ಸಹಾಯಕವಾಗುವ ಸಾಮಾಜಿಕ, ಆರ್ಥಿಕ, ರಾಜಕೀಯ ಕಾರ್ಯಕ್ರಮಗಳನ್ನು ನಿರ್ದೇಶಕ ತತ್ವಗಳಲ್ಲಿ ಸೇರಿಸಲಾಗಿದೆ. ಹೆಸರು ಸೂಚಿಸುವಂತೆ ಇವುಗಳೆಲ್ಲ ನಿರ್ದೇಶನಗಳಾಗಿವೆ. ಧೋರಣೆ ರೂಪೀಕರಣ ಸಂದರ್ಭಗಳಲ್ಲೂ ಯೋಜನೆಗಳನ್ನು ಜಾರಿಗೊಳಿಸುವಲ್ಲಿಯೂ ನಿರ್ದೇಶಕ ತತ್ವಗಳನ್ನು ರಾಷ್ಟ್ರವು ಪರಿಗಣಿಸಬೇಕು. ಮೂಲಭೂತ ಹಕ್ಕುಗಳಲ್ಲಿ ಒಳಪಡಿಸಲು ಸಾಧ್ಯವಾಗದ ಕೆಲವೊಂದು ಹಕ್ಕುಗಳನ್ನು ಇದರಲ್ಲಿ ಸೇರಿಸಲಾಗಿದೆ. ನಿರ್ದೇಶಕ ತತ್ವಗಳನ್ನು ಸಂರಕ್ಷಿಸಲು ನ್ಯಾಯಾಲಯವನ್ನು ಸಮೀಪಿಸುವಂತಿಲ್ಲ.

### ನಿರ್ದೇಶಕ ತತ್ವಗಳಲ್ಲಿ ಒಳಗೊಂಡ ಕೆಲವು ಅಂಶಗಳು



- ಉಚಿತ ಕಾನೂನು ಸಹಾಯ
- ಸ್ತ್ರೀಯರಿಗೂ ಪುರುಷರಿಗೂ ಸಮಾನ ಕೆಲಸಗಳಿಗೆ ಸಮಾನವೇತನ.
- ಪರಿಶಿಷ್ಟ ಜಾತಿ-ಪರಿಶಿಷ್ಟ ಪಂಗಡಗಳ ವಿದ್ಯಾಭ್ಯಾಸ-ಆರ್ಥಿಕ ಹಿತಾಸಕ್ತಿಗಳನ್ನು ಸಂರಕ್ಷಿಸುವುದು.
- ಅಂತಾರಾಷ್ಟ್ರೀಯ ಶಾಂತಿ ಮತ್ತು ಸುರಕ್ಷತೆಯನ್ನು ಖಾತರಿಪಡಿಸುವುದು.



ನಮ್ಮ ರಾಷ್ಟ್ರಪಿತರಾದ ಮಹಾತ್ಮಗಾಂಧೀಜಿಯವರ ಆಶಯಗಳಲ್ಲಿ ಹಲವನ್ನು ನಿರ್ದೇಶಕ ತತ್ವಗಳಲ್ಲಿ ಸೇರಿಸಲಾಗಿದೆ. ಅವುಗಳಲ್ಲಿ ಕೆಲವನ್ನು ಕೆಳಗೆ ಸೂಚಿಸಲಾಗಿದೆ.

- ಗ್ರಾಮ-ಪಂಚಾಯತ್‌ನ ರೂಪೀಕರಣ.
- ಗುಡಿಕೈಗಾರಿಕೆಯನ್ನು ಪ್ರೋತ್ಸಾಹಿಸುವುದು.
- ಮಾದಕ ವಸ್ತುಗಳನ್ನು ನಿಷೇಧಿಸುವುದು.



**ಕ್ಷೇಮರಾಷ್ಟ್ರ**

ಕ್ಷೇಮರಾಷ್ಟ್ರವೆಂದರೆ ಎಲ್ಲ ಜನರ ಕ್ಷೇಮವನ್ನು ಲಕ್ಷ್ಯವಾಗಿಟ್ಟುಕೊಂಡು ಧೋರಣೆಗಳನ್ನು ಆವಿಷ್ಕರಿಸಿ ಜಾರಿಗೊಳಿಸಿದ ರಾಷ್ಟ್ರವಾಗಿದೆ. ಜನರ ಸರ್ವತೋಮುಖ ಉನ್ನತಿಯನ್ನು ಗುರಿಯಾಗಿರಿಸಿ ಜನರಿಗೆ ಸಂರಕ್ಷಣೆನ್ನೂ ಸೇವೆಯನ್ನೂ ಕ್ಷೇಮರಾಷ್ಟ್ರಗಳು ಜಾರಿಗೊಳಿಸುತ್ತವೆ. ಸಾರ್ವಜನಿಕ ಸಂಪನ್ಮೂಲಗಳ ನ್ಯಾಯೋಚಿತ ವಿತರಣೆ, ವಿದ್ಯಾಭ್ಯಾಸ, ಆರೋಗ್ಯ ಸಂರಕ್ಷಣೆ ಮೊದಲಾದವುಗಳನ್ನು ಒಂದು ಕ್ಷೇಮರಾಷ್ಟ್ರವು ಖಚಿತಪಡಿಸುತ್ತದೆ.

ಹಕ್ಕುಗಳ ಸಂರಕ್ಷಣೆಗಾಗಿರುವ ಮೂಲಭೂತ ಹಕ್ಕುಗಳು ಕ್ಷೇಮರಾಷ್ಟ್ರ ಸ್ಥಾಪಿಸುವುದಕ್ಕಾಗಿರುವ ನಿರ್ದೇಶಕ ತತ್ವಗಳೊಳಗೆ ಅವಿನಾಭಾವ ಸಂಬಂಧವಿದೆ. ಮೂಲಭೂತ ಹಕ್ಕುಗಳು ಸಂಪೂರ್ಣವಾಗಿ ಜಾರಿಗೊಳ್ಳಬೇಕಾದರೆ ಜೊತೆಗೆ ನಿರ್ದೇಶಕ ತತ್ವಗಳು ಕೂಡ ಜಾರಿಗೊಳ್ಳಬೇಕು. ಸರಕಾರದ ಕಾರ್ಯಕಲಾಪಗಳನ್ನು ಮೌಲ್ಯಮಾಪನ ಮಾಡಲು ಹಾಗೂ ಉತ್ತಮಗೊಳಿಸಲು ಸಹಾಯಕವಾಗುವ ಮಾನದಂಡ ಎಂಬ ನೆಲೆಯಲ್ಲಿ ನಿರ್ದೇಶಕ ತತ್ವಗಳ ಪ್ರಾಧಾನ್ಯವನ್ನು ಯಾರಿಗೂ ಅಲ್ಲಗಳೆಯಲು ಸಾಧ್ಯವಿಲ್ಲ.



**ನಿರ್ದೇಶಕ ತತ್ವವನ್ನು ನಿರ್ವಚಿಸಿರಿ. ಅವುಗಳ ಪ್ರಾಧಾನ್ಯವನ್ನು ವಿಶದೀಕರಿಸಿರಿ.**



ಸರಕಾರವು ಕೈಗೊಂಡ ನಿರ್ದೇಶಕ ತತ್ವಗಳನ್ನು ಕಂಡುಹಿಡಿದು ಪಟ್ಟಿ ಮಾಡಿರಿ.

## ಮೂಲಭೂತ ಕರ್ತವ್ಯಗಳು

ಕೆಳಗೆ ಕೊಟ್ಟಿರುವ ಚೆಕ್‌ಲಿಸ್ಟ್ ಪೂರ್ತಿಗೊಳಿಸಿರಿ.

| | | |
|---|---|---|
| ರಾಷ್ಟ್ರಗೀತೆ ಹಾಡುವಾಗ ಎದ್ದು ನಿಲ್ಲುವುದು. | ಇದೆ | ಇಲ್ಲ |
| ಐತಿಹಾಸಿಕ ಸ್ಮಾರಕಗಳನ್ನು ಸಂರಕ್ಷಿಸಬೇಕೆಂಬ ಅರಿವು ಇದೆ. | ಇದೆ | ಇಲ್ಲ |
| ಜನರೊಳಗೆ ಸೌಹಾರ್ದತೆಯನ್ನು ಬೆಳೆಸಲು ಪ್ರಯತ್ನ ಮಾಡುತ್ತೇವೆ. | ಇದೆ | ಇಲ್ಲ |
| ರಾಷ್ಟ್ರದ ಐಕ್ಯತೆಯನ್ನು ಅಖಂಡತೆಯನ್ನು ಕಾಪಾಡಲು ಶ್ರಮಿಸುತ್ತೇವೆ. | ಇದೆ | ಇಲ್ಲ |
| ಪರಿಸರ ಸಂರಕ್ಷಿಸಲು ನಾವು ಪ್ರಯತ್ನ ಮಾಡುತ್ತೇವೆ. | ಇದೆ | ಇಲ್ಲ |

ಮೇಲೆ ನೀಡಿದ ಚೆಕ್‌ಲಿಸ್ಟ್ ನಾವು ನಿರ್ವಹಿಸಬೇಕಾದ ಕೆಲವು ಕರ್ತವ್ಯಗಳನ್ನು ಸೂಚಿಸುತ್ತದೆ. ಮೂಲಭೂತ ಹಕ್ಕುಗಳನ್ನು ಅನುಭವಿಸುವುದರೊಂದಿಗೆ ಮೂಲಭೂತ ಕರ್ತವ್ಯಗಳನ್ನು ನಿರ್ವಹಿಸಬೇಕಾಗಿದೆ.

ಸಂವಿಧಾನದ IV A ಯಲ್ಲಿ ಮೂಲಭೂತ ಕರ್ತವ್ಯಗಳ ಕುರಿತು ಪ್ರತಿಪಾದಿಸಲಾಗಿದೆ. ರಾಷ್ಟ್ರದ ಐಕ್ಯತೆ ಮತ್ತು ಅಖಂಡತೆಯನ್ನು ಕಾಪಾಡುವುದಕ್ಕಾಗಿ ಪೌರರು ಕೆಲವು ಕರ್ತವ್ಯಗಳನ್ನು ನೆರವೇರಿಸಬೇಕು. ಈ ಕರ್ತವ್ಯಗಳೇ ಮೂಲಭೂತ ಕರ್ತವ್ಯಗಳಾಗಿವೆ. ರಾಷ್ಟ್ರ ನಮಗೆ ಹಕ್ಕುಗಳನ್ನೂ ಸಂರಕ್ಷಣೆಯನ್ನೂ ನೀಡುವಾಗ ಪ್ರತಿಫಲವಾಗಿ ಸಂವಿಧಾನವನ್ನು ಪಾಲಿಸುವುದು, ಪ್ರಜೆಗಳೊಳಗೆ ಸೌಹಾರ್ದತೆಯನ್ನು ಬೆಳೆಸುವುದು, ರಾಷ್ಟ್ರ ನೆಲೆನಿಲ್ಲಲು ಸಹಕರಿಸುವುದು ನಮ್ಮ ಜವಾಬ್ದಾರಿಯಾಗಿದೆ. ಈ ರೀತಿಯಲ್ಲಿ ಮೂಲಭೂತ ಕರ್ತವ್ಯಗಳನ್ನು ನಿರ್ವಹಿಸುವುದರೊಂದಿಗೆ ಒಂದು ಉತ್ತಮವಾದ ಸಮಾಜವನ್ನು ನಿರ್ಮಿಸಲು ಹಾಗೂ ಅದರ ಪ್ರತಿಫಲವನ್ನು ಸಮಾಜದ ಎಲ್ಲರಿಗೂ ಒದಗಿಸಲು ಸಾಧ್ಯವಿದೆ. ಸಂಕ್ಷಿಪ್ತವಾಗಿ ಹೇಳುವುದಾದರೆ ಮೂಲಭೂತ ಕರ್ತವ್ಯಗಳು ಪ್ರತಿಯೊಬ್ಬ ವ್ಯಕ್ತಿಯೂ ಸ್ವಯಂ ವ್ಯಕ್ತಪಡಿಸುವ ಜವಬ್ದಾರಿಯಾಗಿದೆ.

**ಮೂಲಭೂತ ಕರ್ತವ್ಯಗಳು ಪ್ರತಿಯೊಬ್ಬರೂ ಅವರವರೊಳಗೆ ವ್ಯಕ್ತಪಡಿಸಬೇಕಾದ ಜವಾಬ್ದಾರಿಯಾಗಿದೆ. ವಿಶ್ಲೇಷಿಸಿರಿ?**



ಮೂಲಭೂತ ಕರ್ತವ್ಯಗಳನ್ನು ಒಳಗೊಂಡಿರುವ ಚಾರ್ಟ್ ತಯಾರಿಸಿರಿ.



ಮೂಲಭೂತ ಹಕ್ಕುಗಳು, ನಿರ್ದೇಶಕ ತತ್ವಗಳು, ಮೂಲಭೂತ ಕರ್ತವ್ಯಗಳ ಕುರಿತು ಚರ್ಚಿಸಿದಿರಲ್ಲವೇ. ನಮ್ಮ ರಾಷ್ಟ್ರದ ಮತ್ತು ಸಮಾಜದ ಅಸ್ತಿತ್ವದಲ್ಲಿ ಈ ಮೂರು ವಿಷಯಗಳು ನಿರ್ಣಾಯಕವಾದ ಪ್ರಭಾವವನ್ನು ಬೀರುತ್ತದೆ. ಮೂಲಭೂತ ಹಕ್ಕುಗಳು, ನಿರ್ದೇಶಕ ತತ್ವಗಳು, ಸಂಪೂರ್ಣ ಸ್ವಾತಂತ್ರ್ಯ ಮತ್ತು ಜನಕ್ಷೇಮವನ್ನು ಖಚಿತ ಪಡಿಸಲು ರಾಷ್ಟ್ರವು ಪ್ರಯತ್ನಿಸುತ್ತದೆ. ಅದರೊಂದಿಗೆ ರಾಷ್ಟ್ರಕ್ಕಾಗಿ ನಾವು ನಿರ್ವಹಿಸಬೇಕಾದ ಜವಾಬ್ದಾರಿಗಳನ್ನು ಮೂಲಭೂತ ಕರ್ತವ್ಯಗಳ ಮೂಲಕ ನಿರ್ದೇಶಿಸುತ್ತದೆ. ಮೂಲಭೂತ ಹಕ್ಕುಗಳನ್ನು ಖಚಿತಪಡಿಸುವುದು, ನಿರ್ದೇಶಕ ತತ್ವಗಳನ್ನು ಜಾರಿಗೊಳಿಸುವುದು, ಜನರು ಮೂಲಭೂತ ಕರ್ತವ್ಯಗಳನ್ನು ನಿರ್ವಹಿಸುವುದರೊಂದಿಗೆ ಮಾತ್ರ ರಾಷ್ಟ್ರದ ಐಕ್ಯವನ್ನು ಮತ್ತು ಅಭಿವೃದ್ಧಿಯನ್ನು ಸಾಧಿಸಲು ಸಾಧ್ಯ.






## ಪ್ರಧಾನ ಕಲಿಕಾ ಸಾಧನೆಗಳಲ್ಲಿ ಒಳಪಡುವವುಗಳು

- ಪ್ರಧಾನ ಮೂಲಭೂತ ಹಕ್ಕುಗಳನ್ನು ಪಟ್ಟಿಮಾಡುವರು.
- ಸಮಾನತೆಯ ಹಕ್ಕನ್ನು ವಿಶ್ಲೇಷಿಸುವರು.
- ಭಾರತದ ಸಂವಿಧಾನವು ಖಚಿತಪಡಿಸಿದ ಸ್ವಾತಂತ್ರ್ಯದ ಹಕ್ಕನ್ನು ಪಟ್ಟಿ ಮಾಡುವರು.
- ಶೋಷಣೆಗೆ ವಿರುದ್ಧವಾದ ಹಕ್ಕುಗಳನ್ನು ಖಚಿತಪಡಿಸಿ ಸಂರಕ್ಷಣೆಯನ್ನು ವಿಶದೀಕರಿಸುವರು.
- ಧಾರ್ಮಿಕ ಸ್ವಾತಂತ್ರ್ಯದ ಘಟಕಗಳನ್ನು ಅವಲೋಕಿಸುವರು.
- ಶೈಕ್ಷಣಿಕ ಹಾಗೂ ಸಾಂಸ್ಕೃತಿಕ ಹಕ್ಕುಗಳನ್ನು ವಿಶದೀಕರಿಸುವರು.
- ಸಂವಿಧಾನಾತ್ಮಕ ಪರಿಹಾರದ ಹಕ್ಕಿನ ಪ್ರಾಮುಖ್ಯತೆಯನ್ನು ಅವಲೋಕಿಸುವರು.
- ನಿರ್ದೇಶಿತ ತತ್ವಗಳನ್ನು ನಿರ್ವಚಿಸುವರು.
- ಮೂಲಭೂತ ಕರ್ತವ್ಯಗಳ ಪ್ರಾಮುಖ್ಯತೆಯನ್ನು ವಿಶದೀಕರಿಸುವರು.



## ಮೌಲ್ಯನಿರ್ಣಯ ಮಾಡುವ

- ಮೂಲಭೂತ ಹಕ್ಕುಗಳನ್ನು ನಿರ್ವಚಿಸಿರಿ.
- ಭಾರತದ ಮೂಲಭೂತ ಹಕ್ಕುಗಳು ರೂಪುಗೊಳ್ಳಲು ಯಾವ ದೇಶದ ಸಂವಿಧಾನವು ಪ್ರಭಾವ ಬೀರಿತು?
  (ಅಮೇರಿಕಾ, ಬ್ರಿಟನ್, ಫ್ರಾನ್ಸ್)
- ಭಾರತದ ಸಂವಿಧಾನವು ವ್ಯಕ್ತಿಗಳಿಗೆ ಖಚಿತಪಡಿಸಿದ ಮೂಲಭೂತ ಹಕ್ಕುಗಳು ಯಾವುವು?
- ಕೆಲವು ಹಕ್ಕುಗಳನ್ನು ಮಾತ್ರ ಮೂಲಭೂತ ಹಕ್ಕುಗಳು ಎಂಬುದಾಗಿ ಪರಿಗಣಿಸಲು ಕಾರಣವೇನು?
- ಅಸ್ಪೃಶ್ಯತೆಯನ್ನು ಕೊನೆಗೊಳಿಸಲು ಸಹಾಯಕವಾಗುವ ಮೂಲಭೂತ ಹಕ್ಕು ಯಾವುದು?
  (ಸಮಾನತೆಯ ಹಕ್ಕು, ಶೋಷಣೆಯ ವಿರುದ್ಧ ಹಕ್ಕು, ಸ್ವಾತಂತ್ರ್ಯದ ಹಕ್ಕು)
- ಸಮಾನತೆಯ ಹಕ್ಕಿನಲ್ಲಿರುವ ಪ್ರಧಾನ ಆಶಯಗಳು ಯಾವುವು?
- ಭಾರತದ ಸಂವಿಧಾನವು ಖಚಿತಪಡಿಸಿರುವ ಸ್ವಾತಂತ್ರ್ಯದ ಹಕ್ಕುಗಳು ಯಾವುವು? ಅವುಗಳ ಪ್ರಾಧಾನ್ಯವನ್ನು ವಿವರಿಸಿರಿ.
- ವಿದ್ಯಾಭ್ಯಾಸದ ಹಕ್ಕನ್ನು ನೀಡುವ ಮೂಲಭೂತ ಹಕ್ಕು ಯಾವುದು?
  (ಸಾಂಸ್ಕೃತಿಕ ಮತ್ತು ಶೈಕ್ಷಣಿಕ ಹಕ್ಕು, ಸಮಾನತೆಯ ಹಕ್ಕು, ಸ್ವಾತಂತ್ರ್ಯದ ಹಕ್ಕು)
- ಶೋಷಣೆಗೆದುರಾಗಿರುವ ಹಕ್ಕು ಯಾವೆಲ್ಲ ಕಾರ್ಯಗಳಲ್ಲಿ ಸಂರಕ್ಷಣೆ ನೀಡುತ್ತದೆ?
- ಧಾರ್ಮಿಕ ಸ್ವಾತಂತ್ರ್ಯಕ್ಕಿರುವ ಹಕ್ಕಿನ ಕುರಿತು ವಿವರಿಸಿರಿ? ಅವುಗಳು ಹೇಗೆ ಜಾತ್ಯತೀತತೆಯನ್ನು ಸಂರಕ್ಷಿಸುವುದೆಂದು ವಿಶ್ಲೇಷಿಸಿರಿ.
- ಯಾವ ಮೂಲಭೂತ ಹಕ್ಕು ಅಸ್ಪೃಶ್ಯತೆಯನ್ನು ನಿಷೇಧಿಸುತ್ತದೆ?
  (ಶೋಷಣೆಗೆದುರಾಗಿರುವ ಹಕ್ಕು, ಸಮಾನತೆಗಿರುವ ಹಕ್ಕು, ಧಾರ್ಮಿಕ ಸ್ವಾತಂತ್ರ್ಯಕ್ಕಿರುವ ಹಕ್ಕು)
- ಅಲ್ಪಸಂಖ್ಯಾತರ ಹಕ್ಕುಗಳ ಕುರಿತು ಪ್ರತಿಪಾದಿಸುವ ಮೂಲಭೂತ ಹಕ್ಕುಗಳು ಯಾವುವು?
  (ಸಮಾನತೆಯ ಹಕ್ಕು, ಸಾಂಸ್ಕೃತಿಕ ಮತ್ತು ಶೈಕ್ಷಣಿಕ ಹಕ್ಕು, ಧಾರ್ಮಿಕ ಸ್ವಾತಂತ್ರ್ಯಗಳ ಹಕ್ಕು)
- ಶೈಕ್ಷಣಿಕ ಹಾಗೂ ಸಾಂಸ್ಕೃತಿಕ ಹಕ್ಕು ಅಲ್ಪಸಂಖ್ಯಾತರ ಹಿತಾಸಕ್ತಿಯನ್ನು ಹೇಗೆ ಸಂರಕ್ಷಿಸುತ್ತದೆ? ವಿವರಿಸಿರಿ.
- ಸಂವಿಧಾನಾತ್ಮಕ ಪರಿಹಾರದ ಹಕ್ಕಿನಿಂದ ಏನನ್ನು ಅರ್ಥೈಸಿಕೊಳ್ಳುವಿರಿ?

- ಸಂವಿಧಾನದ ಹೃದಯ ಮತ್ತು ಆತ್ಮ ಎಂದು ಡಾ.ಬಿ.ಆರ್. ಅಂಬೇಡ್ಕರ್ ಹೇಳಿದ ಮೂಲಭೂತ ಹಕ್ಕುಗಳು ಯಾವುವೆಂದು ಸ್ಪಷ್ಟಪಡಿಸಿ ಅದರ ಪ್ರಾಮುಖ್ಯತೆಯನ್ನು ವಿವರಿಸಿರಿ.
- ಕೆಳಗೆ ಕೊಟ್ಟಿರುವವುಗಳನ್ನು ಪಟ್ಟಿಯಲ್ಲಿ ಕ್ರಮೀಕರಿಸಿ ಬರೆಯಿರಿ.
  ಸಮಾನತೆಯ ಹಕ್ಕು, ಗ್ರಾಮ ಪಂಚಾಯತು ರೂಪೀಕರಣ, ರಾಷ್ಟ್ರದ ಐಕ್ಯತೆ ಮತ್ತು ಅಖಂಡತೆಯನ್ನು ಕಾಪಾಡುವುದು, ಸಾಂಸ್ಕೃತಿಕ ಮತ್ತು ಶೈಕ್ಷಣಿಕ ಹಕ್ಕು, ಮಾದಕ ವಸ್ತುಗಳನ್ನು ನಿಷೇಧಿಸುವುದು, ಚರಿತ್ರೆ ಸ್ಮಾರಕಗಳನ್ನು ಸಂರಕ್ಷಿಸುವುದು, ಅಂತಾರಾಷ್ಟ್ರೀಯ ಶಾಂತಿ, ಸಮಾಧಾನ, ಸುರಕ್ಷತೆಯನ್ನು ಖಚಿತಪಡಿಸುವುದು.

| ಮೂಲಭೂತ ಹಕ್ಕುಗಳು | ನಿರ್ದೇಶಕ ತತ್ವಗಳು | ಮೂಲಭೂತ ಕರ್ತವ್ಯಗಳು |
|---|---|---|
| | | |

- ರಿಟ್ ಎಂದರೇನು? ಅದರ ಪ್ರಾಧಾನ್ಯವನ್ನು ವಿವರಿಸಿರಿ?
- ನಿರ್ದೇಶಕ ತತ್ವಗಳನ್ನು ವಿವರಿಸಿರಿ? ಅವುಗಳು ಹೇಗೆ ಸರಕಾರದ ಕಾರ್ಯಚಟುವಟಿಕೆಗಳನ್ನು ಮೌಲ್ಯಮಾಪನ ಮಾಡಲು ಮಾನದಂಡವಾಗಿವೆಯೆಂದು ವಿಶ್ಲೇಷಿಸಿರಿ.
- ಮೂಲಭೂತ ಕರ್ತವ್ಯಗಳು ಎಂದರೇನು?



## ಮುಂದುವರಿದ ಚಟುವಟಿಕೆಗಳು

- ಮೂಲಭೂತ ಹಕ್ಕುಗಳ ಉಲ್ಲಂಘನೆಗಳಿಗೆ ಸಂಬಂಧಿಸಿದ ಪತ್ರಿಕಾವಾರ್ತೆಗಳನ್ನು ಸಂಗ್ರಹಿಸಿ ಆಲ್ಬಂ ತಯಾರಿಸಿರಿ.
- ವಿದ್ಯಾರ್ಥಿಗಳ ಹಕ್ಕುಗಳು ಮತ್ತು ಕರ್ತವ್ಯಗಳನ್ನು ಒಳಪಡಿಸಿ ಒಂದು ಭಿತ್ತಿಪತ್ರಿಕೆ ತಯಾರಿಸಿರಿ.
- ಸರಕಾರ ಜಾರಿಗೊಳಿಸಿರುವ ನಿರ್ದೇಶಕ ತತ್ವಗಳನ್ನು ಪಟ್ಟಿಮಾಡಿರಿ.



ಅಧ್ಯಾಯ

04

# ಮಧ್ಯಕಾಲೀನ ಭಾರತ: ರಾಜಪ್ರಭುತ್ವ ಮತ್ತು ಆಡಳಿತ ವಿಧಾನ

> ಭೂಮಿಯಲ್ಲಿ ದೇವರ ಪ್ರತಿನಿಧಿಯೇ ರಾಜ. ದೇವರಂತೆ ಅಸಾಮಾನ್ಯ ಶಕ್ತಿ ರಾಜನಿಗಿದೆ. ರಾಜನ ಸಭೆಯಲ್ಲಿ ಶಿಸ್ತು, ಸಂಯಮ ಹಾಗೂ ಸಭಾಗಾಂಭೀರ್ಯ ಅಗತ್ಯವಾಗಿದೆ. ಕಾಲಹರಣ ಮಾಡಲು ಮತ್ತು ಅಟ್ಟಹಾಸದ ನಗು ಇವು ಪ್ರಭುಗಳಿಗೂ ಅನುಮತಿಸಲಾಗುವುದಿಲ್ಲ. ರಾಜಕುಮಾರರು ಮತ್ತು ಸಾಮಂತರು ಸುಲ್ತಾನರ ಮುಂದೆ ಘನತೆಯಿಂದ ನಿಲ್ಲಬೇಕು. ರಾಜಸಭೆಯಲ್ಲಿರುವವರು ಔಪಚಾರಿಕ ಬಟ್ಟೆಗಳನ್ನು ಸರಿಯಾಗಿ ಧರಿಸಿ ಗಂಭೀರತೆಯಿಂದ ನಿಲ್ಲಬೇಕು. ಪ್ರಧಾನ ಮಂತ್ರಿಗಳಲ್ಲದೆ ಬೇರೆ ಯಾರಿಗೂ ಸುಲ್ತಾನನೊಂದಿಗೆ ನೇರವಾಗಿ ಮಾತನಾಡಲು ಅನುಮತಿಯಿಲ್ಲ. ಗಾಂಭೀರ್ಯ ಮತ್ತು ಘನತೆ ಕಾಪಾಡುವುದರ ಮೂಲಕ ಆಯುಧಗಳನ್ನು ಹೊಂದಿದ ಸೈನಿಕರು ಸುಲ್ತಾನನನ್ನು ಎಲ್ಲಾ ಸ್ಥಳಗಳಲ್ಲಿ ಸರಿಯಾಗಿ ಗೌರವದಿಂದ ಹಿಂಬಾಲಿಸಬೇಕು.
>
> ತಾರೀಖ್-ಇ-ಫಿರೋಜ್‌ಷಾಹೀ - ಸಿಯಾವುದ್ದೀನ್ ಬರಾನಿ

ಸಿ.ಇ. 1206 ರಿಂದ 1526 ರವರೆಗೆ ದೆಹಲಿಯನ್ನು ಕೇದ್ರವಾಗಿರಿಸಿ ಆಡಳಿತ ನಡೆಸುತ್ತಿದ್ದ ಸುಲ್ತಾನ ರಾಜವಂಶದ ಬಗ್ಗೆ ನೀವು ಕಲಿತಿರುವಿರಲ್ಲವೇ. ಮಂಲೂಕ್, ಖಲ್ಜಿ, ತುಗಲಕ್, ಸಯ್ಯದ್, ಲೋದಿ ಮುಂತಾದ ಐದು ರಾಜವಂಶಗಳು ಆ ಕಾಲದಲ್ಲಿ ಆಡಳಿತ ನಡೆಸಿವೆ. ಮಂಲೂಕ್ (ಗುಲಾಮ) ವಂಶದ ಪ್ರಧಾನ ರಾಜನಾಗಿದ್ದ ಬಾಲ್ಬನ್‌ನ ರಾಜಪ್ರಭುತ್ವದ ಬಗ್ಗೆ ಇರುವ ದೃಷ್ಟಿಕೋನವನ್ನು ಸಿಯಾವುದ್ದೀನ್ ಬರಾನಿ ವಿವರಿಸುತ್ತಾನೆ.

### ಸುಲ್ತಾನರು

ಅಧಿಕಾರ ಎಂದು ಅರ್ಥ ಬರುವ 'ಸುಲ್ತ್; (Sult) ಎಂಬ ಪದದಿಂದ ಸುಲ್ತಾನರು ಎಂಬ ಹೆಸರು ರೂಪುಗೊಂಡಿತು. ಈ ಪದವು ಒಬ್ಬ ವ್ಯಕ್ತಿಗೆ ಇನ್ನೊಬ್ಬರ ಮೇಲಿರುವ ಅಧಿಕಾರ ಮತ್ತು ಆಧಿಪತ್ಯವನ್ನು ಸೂಚಿಸುತ್ತದೆ.

### ತುರ್ಕಿ ವಂಶ

ರಾಜನು ದೇವರಿಗೆ ಸಮಾನನಾದವನು ಎಂಬ ದೃಷ್ಟಿಕೋನವನ್ನು ತುರ್ಕಿ ವಂಶಸ್ಥರು ಹೊಂದಿದ್ದರೂ ಸರ್ವಶಕ್ತನೂ ಪರಮಾಧಿಕಾರಿಯೂ ನೀತಿಯುಕ್ತನೂ ಆಗಿದ್ದು ದೇವರ ಸ್ಥಾನಮಾನವು ರಾಜನಿಗಿದೆ. ಈ ದೃಷ್ಟಿಕೋನದಿಂದಾಗಿ ಅನಿಯಂತ್ರಿತ ರಾಜಪ್ರಭುತ್ವ ಎಂಬ ಆಶಯ ಬಂದಿದೆ. ಕುಟುಂಬದ ಹಿರಿಯನು ಕುಟುಂಬದ ಸದಸ್ಯರನ್ನು ನಿಯಂತ್ರಿಸುವ ಹಾಗೆ ರಾಜನು ಅಧಿಕಾರ ನಡೆಸುತ್ತಾನೆ. ಅವನ ತೀರ್ಮಾನಗಳನ್ನು ಸದಸ್ಯರು ಪ್ರಶ್ನಿಸುವುದಿಲ್ಲ. ಪ್ರತಿಯೊಬ್ಬ ಸದಸ್ಯನ ಸ್ಥಾನವನ್ನೂ ಸ್ಥಾನಮಾನವನ್ನೂ ಅಧಿಕಾರವನ್ನೂ ಅವನು ತೀರ್ಮಾನಿಸುತ್ತಾನೆ. ಈ ರೀತಿಯಾಗಿ ಕುಟುಂಬದ ಯಜಮಾನನು ಕುಟುಂಬವನ್ನು ನಡೆಸುವಂತೆಯೂ ದೇವರು ಪ್ರಪಂಚವನ್ನು ಪರಿಪಾಲಿಸುವಂತೆಯೂ ಸರ್ವಾಧಿಕಾರಗಳೊಂದಿಗೆ ದೇಶವನ್ನು ಆಡಳಿತ ಮಾಡಲು ರಾಜನಿಗೆ ಸಾಧ್ಯವಾಗುತ್ತದೆ ಎಂಬ ನೀತಿಯು ಇದರಲ್ಲಿ ಒಳಗೊಂಡಿದೆ.

### ಕೇಂದ್ರಾಡಳಿತ

ಸುಲ್ತಾನರ ಕಾಲದ ಕೇಂದ್ರಾಡಳಿತದಲ್ಲಿದ್ದ ಪ್ರಧಾನ ಉದ್ಯೋಗಿಗಳು ಮತ್ತು ಅವರ ಜವಾಬ್ದಾರಿಗಳು

| | |
|---|---|
| ವಸೀರ್ | – ಹಣಕಾಸು |
| ಮಮಾಲಿಕ್ | – ಸೈನ್ಯ |
| ಮುಖ್ಯಸದರ್ | – ನ್ಯಾಯಾಂಗ |
| ದಿವಾನ್-ಇ-ಇನ್ಶಾ | – ರಾಜಕೀಯ-ಅಂಚೆ ವ್ಯವಹಾರ |

ಭಾರತದ ಆಡಳಿತ ವಲಯದಲ್ಲಿ ಒಂದು ಕೇಂದ್ರೀಕೃತ ರಾಜಪ್ರಭುತ್ವ ರೀತಿಯನ್ನು ಸುಲ್ತಾನರು ನಡೆಸಿದರು. ಅದರ ಪ್ರಧಾನ ವಿಶೇಷತೆಗಳು ಯಾವುವೆಂದು ಪರಿಶೀಲಿಸೋಣ.

- ತುರ್ಕಿ ವಂಶದ ಪ್ರಭಾವ.
- ಆಡಳಿತ, ಸೈನ್ಯ ಮತ್ತು ನ್ಯಾಯ-ನೀತಿಗಳ ಮುಖ್ಯಸ್ಥನು ರಾಜನಾಗಿದ್ದನು.
- ಆಡಳಿತ ಕಾರ್ಯಗಳಲ್ಲಿ ಸುಲ್ತಾನರಿಗೆ ಸಹಾಯ ಮಾಡಲು ಅನೇಕ ಮಂತ್ರಿಗಳೂ, ಉದ್ಯೋಗಿಗಳೂ ಇದ್ದರು.
- ಸರಿಯಾದ ಪರಂಪರಾಗತ ಹಕ್ಕಿನ ಕಾನೂನಿರಲಿಲ್ಲ.
- ಬಾಗ್ದಾದ್‌ನ ಖಲೀಫನ ನೇತೃತ್ವವನ್ನು ಅಂಗೀಕರಿಸಲಾಯಿತು.
- ಸ್ವದೇಶೀಯ ಹಾಗೂ ವಿದೇಶೀಯ ಆಕ್ರಮಣ ಭೀತಿಗಳನ್ನು ತಡೆಯಲು ಹಾಗೂ ದೇಶ ವಿಸ್ತರಣೆಯನ್ನು ಮಾಡಲು ಶಕ್ತಿಯುತವಾದ ಸೈನ್ಯವನ್ನು ಇರಿಸಿಕೊಂಡಿದ್ದನು.
- ಆಡಳಿತ ಸೌಕರ್ಯಕ್ಕಾಗಿ ವಿಶಾಲವಾದ ದೇಶವನ್ನು ವಿವಿಧ ವಿಭಾಗಗಳಾಗಿ ವಿಂಗಡಿಸಲಾಯಿತು.
- ಗ್ರಾಮಗಳಲ್ಲಿ ಪ್ರಾದೇಶಿಕ ನಿಯಮಗಳಿದ್ದುವು.

## ಪ್ರಾದೇಶಿಕ ಆಡಳಿತ

ಸುಲ್ತಾನರ ಆಡಳಿತ ಕಾಲದಲ್ಲಿ ನೆಲೆನಿಂತಿದ್ದ ಕೇಂದ್ರ ಆಡಳಿತದ ವಿಶೇಷತೆಗಳನ್ನು ತಿಳಿದುಕೊಂಡಿರಲ್ಲವೇ. ಪ್ರಾದೇಶಿಕ ಆಡಳಿತ ರೀತಿಯು ಯಾವ ರೀತಿಯಾಗಿತ್ತೆಂದು ಪರಿಶೀಲಿಸೋಣ. ದೇಶದ ಆಡಳಿತ ಸೌಕರ್ಯಕ್ಕಾಗಿ ಪ್ರವಿಶ್ಯ, ಶಿಖು, ಪರ್ಗಾನ, ಗ್ರಾಮಗಳು ಎಂಬುದಾಗಿ ವಿವಿಧ ವಿಭಾಗಗಳನ್ನು ಮಾಡಲಾಗಿತ್ತು. ಪ್ರತಿಯೊಂದು ವಿಭಾಗಕ್ಕೂ ಪ್ರತ್ಯೇಕ ಉದ್ಯೋಗಿಗಳನ್ನು ನೇಮಿಸಲಾಗಿತ್ತು. ಇವರ ಅಧಿಕಾರವು ವಂಶ ಪಾರಂಪರ್ಯವಾಗಿರಲಿಲ್ಲ. ಶಾಂತಿ ಸುವ್ಯವಸ್ಥೆಯ ಪಾಲನೆ, ನೀತಿನ್ಯಾಯದ ನಿರ್ವಹಣೆ, ಭೂ ತೆರಿಗೆ ಸಂಗ್ರಹ, ರಕ್ಷಣೆ ಎಂಬಿವುಗಳು ಇವರ ಜವಾಬ್ದಾರಿಗಳಾಗಿದ್ದುವು. ಇವರು ಸುಲ್ತಾನರ ನೇರವಾದ ನಿಯಂತ್ರಣಕ್ಕೊಳಪಟ್ಟಿದ್ದರು. ಆದರೆ ಗ್ರಾಮದ ಆಡಳಿತದಲ್ಲಿ ಸುಲ್ತಾನರು ಹಸ್ತಕ್ಷೇಪ ಮಾಡುತ್ತಿರಲಿಲ್ಲ.

## ಇಖ್ತ ಸಂಪ್ರದಾಯ

ಸುಲ್ತಾನರ ಆಡಳಿತದ ಆರಂಭದಲ್ಲಿ ದೇಶವನ್ನು ಅನೇಕ ವಿಭಾಗಗಳಾಗಿ ವಿಭಜಿಸಿ ಸೈನಿಕ ಮುಖ್ಯಸ್ಥರಾದ ಪ್ರಭುಗಳಿಗೆ ನೀಡಲಾಗಿತ್ತು. ಈ ಪ್ರದೇಶಗಳನ್ನು ಇಖ್ತ ಎಂದೂ, ಅವುಗಳ ಮುಖ್ಯಸ್ಥರನ್ನು 'ಇಖ್ ದಾರ್' 'ಮುಖ್ತಿ', 'ವಾಲಿ' ಎಂಬೀ ಹೆಸರುಗಳಿಂದಲೂ ಕರೆಯುತ್ತಿದ್ದರು. ಇಲ್ಲಿನ ತೆರಿಗೆ ಸಂಗ್ರಹ ಮತ್ತು ಶಾಂತಿ ಸುವ್ಯವಸ್ಥೆಯ ಪಾಲನೆಯ ಜವಾಬ್ದಾರಿ ಇಖ್ತಾದಾರ್‌ಗಳಿಗಾಗಿತ್ತು. ಅಲ್ಲದೆ ಅವರು ಸ್ವಂತವಾಗಿ ಒಂದು ಸೈನ್ಯವನ್ನು ಇಟ್ಟುಕೊಳ್ಳಬಹುದಿತ್ತು. ಸಂಗ್ರಹಿಸಿದ ತೆರಿಗೆಯ ಒಂದು ಭಾಗವನ್ನು ಸ್ವಂತ ಖರ್ಚಿಗೂ ಬಾಕಿ ಉಳಿದುದನ್ನು ಆಡಳಿತ ನಿರ್ವಹಣೆಗೂ ಉಪಯೋಗಿಸುತ್ತಿದ್ದರು. ಆದರೆ ಅವರಿಗೆ ಸ್ವತಂತ್ರವಾದ ಅಧಿಕಾರವಿರಲಿಲ್ಲ. ಕೇಂದ್ರಾಡಳಿತ ಕ್ರಮೇಣ ಪ್ರಾಬಲ್ಯಗೊಳ್ಳುವುದರೊಂದಿಗೆ ಇಖ್ತಾದಾರರ ಅಧಿಕಾರ ನಿಯಂತ್ರಣದಲ್ಲಾಯಿತು. ಇಖ್ತಾಗಳು ಮುಂದೆ 'ಪ್ರವಿಶ್ಯ'ಗಳು ಅಥವಾ 'ಸುಭಾ'ಗಳಾಗಿ ರೂಪುಗೊಂಡವು.

### ಪ್ರಾದೇಶಿಕ ಆಡಳಿತ



ಸುಲ್ತಾನರ ಕಾಲದ ಪ್ರಾದೇಶಿಕ ಆಡಳಿತ ವಿಭಾಗಗಳು ಮತ್ತು ಜವಾಬ್ದಾರಿ ವಹಿಸಿದ ಉದ್ಯೋಗಿಗಳು

| | |
|---|---|
| ಪ್ರವಿಶ್ಯ | - ಮುಖ್ತಿ (ವಾಲಿ) |
| ಷಿಖ್ | - ಷಿಖ್‌ದಾರ್ |
| ಪರ್ಗಾನ | - ಅಮೀನ್ |
| ಗ್ರಾಮ | - ಮುಕ್‌ದಂ |



ಸುಲ್ತಾನರ ಕಾಲದಲ್ಲಿ ಸ್ಥಾಪಿಸಲಾದ ದೌಲತಾಬಾದ್ ಕೋಟೆ



ಸುಲ್ತಾನರ ಆಡಳಿತದ ವಿಶೇಷತೆಗಳನ್ನು ಕೆಳಗೆ ನೀಡಿರುವ ಸೂಚನೆಗಳ ಆಧಾರದಲ್ಲಿ ವಿಶದೀಕರಿಸಿರಿ.

- ಕೇಂದ್ರಾಡಳಿತ
- ಪ್ರಾದೇಶಿಕ ಆಡಳಿತ
- ಪರಂಪರಾಗತ ಹಕ್ಕುಗಳು
- ಸೈನ್ಯಾಡಳಿತ

## ಮಾರುಕಟ್ಟೆಗಳ ಆವಿಷ್ಕಾರ

ದೆಹಲಿಯ ಸುಲ್ತಾನರ ಆಡಳಿತವು ಸೈನಿಕ ಶಕ್ತಿಯನ್ನು ಅವಲಂಬಿಸಿಕೊಂಡಿತ್ತು. ಸುಸಜ್ಜಿತವಾದ ಸೈನ್ಯವನ್ನು ರಾಜ್ಯದಲ್ಲಿರಿಸಲು ಅವರು ಗಮನವಿರಿಸಿದ್ದರು. ಮಾರುಕಟ್ಟೆಯ ನಿಯಂತ್ರಣವೆಂಬುದು ಖಲ್ಜಿ ವಂಶದ ಸುಲ್ತಾನನಾಗಿದ್ದ ಅಲ್ಲಾವುದ್ದೀನ್ ಖಲ್ಜಿಯು ಕಡಿಮೆ ಖರ್ಚಿನಲ್ಲಿ ಬೃಹತ್ ಸೈನ್ಯವನ್ನು ನೇಮಿಸುವುದು ಎಂಬ ಉದ್ದೇಶದಿಂದ ಜಾರಿಗೊಳಿಸಿದ ಸುಧಾರಣೆಯಾಗಿದೆ. ಸೈನಿಕ ಖರ್ಚನ್ನು ಕಡಿಮೆಗೊಳಿಸಲು ಅಗತ್ಯವಾದ ಸಾಮಗ್ರಿಗಳ ಬೆಲೆಯನ್ನು ನಿಯಂತ್ರಿಸುವುದು ಅನಿವಾರ್ಯವಾಗಿತ್ತು. ಇದರ ಅಂಗವಾಗಿ ಅವಶ್ಯಕ ಸಾಮಾಗ್ರಿಗಳ ಬೆಲೆಯನ್ನು ಸರಕಾರ ನಿಶ್ಚಯಿಸಿತು. ಆ ಬೆಲೆಗೆ ವಸ್ತುಗಳನ್ನು ಮಾರಾಟಮಾಡಲು ವ್ಯಾಪಾರಿಗಳನ್ನು ನಿರ್ಬಂಧಿಸಿದರು. ಅಕ್ರಮ ದಾಸ್ತಾನು ಮತ್ತು ಕಾಳಸಂತೆಯನ್ನು ನಡೆಸುವವರಿಗೆ ಕಠಿಣ ಶಿಕ್ಷೆ ವಿಧಿಸಿದರು. ಅಳತೆಗಳನ್ನೂ ತೂಕಗಳನ್ನೂ ಏಕೀಕರಿಸಿದರು. ಸರಕಾರಿ ದಾಸ್ತಾನು ಮಳಿಗೆಗಳನ್ನು ಸ್ಥಾಪಿಸಿ,

ಕೃಷಿಕರಿಂದ ಧಾನ್ಯಗಳನ್ನು ಪಡೆದು ಸಂರಕ್ಷಿಸಿ, ಕ್ಷಾಮದ ಸಂದರ್ಭದಲ್ಲಿ ಮಿತವಾದ ಬೆಲೆಗೆ ಅವುಗಳನ್ನು ವಿತರಿಸಿದರು. ಮಾರುಕಟ್ಟೆ ನಿಯಮಗಳನ್ನು ಕಠಿಣವಾಗಿ ಜಾರಿಗೊಳಿಸಲು ಉದ್ಯೋಗಿಗಳನ್ನು ನೇಮಿಸಿದರು. ಪರಿಣಾಮವಾಗಿ ಕಡಿಮೆ ಖರ್ಚಿನಲ್ಲಿ ಸಾಮಗ್ರಿಗಳನ್ನು ಪಡೆಯಲು ಸೈನಿಕರಿಗೆ ಸಾಧ್ಯವಾಯಿತು. ಇದರಿಂದಾಗಿ ಹೆಚ್ಚು ಸಂಬಳವನ್ನು ಅವರಿಗೆ ಕೊಡಬೇಕಾಗಿರಲಿಲ್ಲ. ಈ ರೀತಿಯ ಕ್ರಮಗಳ ಮೂಲಕ ಸುಲ್ತಾನರು ಸೈನಿಕ ಖರ್ಚನ್ನು ಕಡಿಮೆಗೊಳಿಸಿ ದೊರೆತ ಆದಾಯದಿಂದ ಸೈನಿಕರ ಸಂಖ್ಯೆಯನ್ನು ಹೆಚ್ಚಿಸಿದರು.

**ಸುಲ್ತಾನರ ಆಡಳಿತ ಕಾಲದಲ್ಲಿ ಸೈನಿಕ ಶಕ್ತಿಯನ್ನು ಹೆಚ್ಚಿಸಲು ಮಾರುಕಟ್ಟೆ ಆವಿಷ್ಕಾರವು ವಹಿಸಿದ ಪಾತ್ರವನ್ನು ಪರಿಶೀಲಿಸಿರಿ.**

"ಕಾರ್ತಿಕ ಮಾಸದಲ್ಲಿ ಮಳೆಯಿಲ್ಲದ ಒಂದು ದಿನ ಪ್ರಮುಖನಾದ ಚಕ್ರವರ್ತಿ (ಚಕ್ರವರ್ತಿ ಅಕ್ಬರ್ ಷಾಹಿ ಜಲಾಲ್) ಕೊನೆಯುಸಿರನ್ನೆಳೆದನು. ಮರಣವಾರ್ತೆ ಕಾಡ್ಗಿಚ್ಚಿನಂತೆ ಹಾಗೆ ನಾಡಿನಾದ್ಯಂತ ಹಬ್ಬಿತು. ಒಡೆಯನಿಲ್ಲದೆ ಜನರಿಗೆಲ್ಲಾ ಅನಾಥರಾದಂತೆ ಅನಿಸಿತು. ಎಲ್ಲೆಡೆ ಭೀತಿ ಆವರಿಸಿತು. ಮುಖ ಕಳೆಗುಂದಿತು.... ವಾರ್ತೆ ಕೇಳಿದಾಗ ನಾನು ನನ್ನ ಮನೆಯ ಜಗಲಿಯಲ್ಲಿ ಕುಳಿತಿದ್ದೆ. ನನಗೆ ತಲೆತಿರುಗುವಂತಾಗಿ ಪ್ರಜ್ಞೆ ತಪ್ಪಿ ಕೆಳಗೆ ಬಿದ್ದೆ. ಎಲ್ಲರೂ ಮನೆಯ ಬಾಗಿಲುಗಳನ್ನು ಮುಚ್ಚಿದರು. ವ್ಯಾಪಾರಿಗಳು ಅಂಗಡಿಗಳನ್ನು ಮುಚ್ಚಿದರು. ಚಿನ್ನ ಹಾಗೂ ಇತರ ಬೆಲೆಬಾಳುವ ಸಾಮಾಗ್ರಿಗಳನ್ನು ಮಣ್ಣಿನಡಿಯಲ್ಲಿ ಹೂತಿಡಲಾರಂಭಿಸಿದರು. ಶ್ರೀಮಂತರು ಕೊಳಕು ಬಟ್ಟೆಗಳನ್ನು ಧರಿಸಿ ಬಡವರಂತೆ ಕಾಣಲು ಶ್ರಮಿಸಿದರು. ಜನಸಮೂಹದ ಮಧ್ಯೆ ಶ್ರೀಮಂತರನ್ನೂ ಬಡವರನ್ನೂ ಗುರುತಿಸಲಾಗಲಿಲ್ಲ. ಎಲ್ಲರ ಮುಖಗಳಲ್ಲೂ ಭಯದ ಛಾಯೆ ಮೂಡಿತ್ತು. ಆದರೆ ಕಳ್ಳರಿಂದಲೂ ದರೋಡೆಕೋರರಿಂದಲೂ ಆ ನಾಡು ಮುಕ್ತವಾಗಿದ್ದುದರಿಂದ ಭೀತಿಗೆ ಯಾವುದೇ ಕಾರಣವಿರಲಿಲ್ಲ."

'ಅರ್ಧ ಕಥಾನಕ' (1605 ಸಿ.ಇ.) ಬನಾರಸಿದಾಸ್

**ಮೊಘಲರ ವಂಶ**

ಭಾರತದ ಮೊಘಲ್ ಚಕ್ರವರ್ತಿಗಳು ಮಂಗೋಲಿಯಾ ಆಡಳಿತಾಧಿಕಾರಿಗಳಾದ ಚೆಂಗೀಸ್‌ಖಾನ್ ಮತ್ತು ತುರ್ಕಿ ವಂಶದವನಾದ ತೈಮೂರ್‌ನ ತಲೆಮಾರಿನವರಾಗಿದ್ದರು. ಹದಿನಾರನೇ ಶತಮಾನದಲ್ಲಿ ಯುರೋಪಿಯನರು ಈ ರಾಜವಂಶವನ್ನು 'ಮೊಘಲ್' ಎಂಬ ಹೆಸರಿನಿಂದ ಕರೆದರು.

## ಮೊಘಲರ ಆಡಳಿತ

ಸುಲ್ತಾನರ ಕಾಲದ ಬಳಿಕ ದೆಹಲಿಯನ್ನು ಕೇಂದ್ರವಾಗಿರಿಸಿ ಆಡಳಿತ ನಡೆಸಿದ ಮೊಘಲರಲ್ಲಿ ಪ್ರಮುಖನಾಗಿದ್ದ ಅಕ್ಬರನ ಮರಣದಿಂದಾಗಿ ಉಂಟಾದ ಜನರ ಪ್ರತಿಕ್ರಿಯೆಯನ್ನು ವೀಕ್ಷಿಸಿದ ಒಬ್ಬ ಪ್ರತ್ಯಕ್ಷದರ್ಶಿಯಾದ ಬನಾರಸಿದಾಸ್ ಈ ರೀತಿ ವಿವರಿಸಿದ್ದಾನೆ. ಮೊಘಲರ

ಆಡಳಿತವು ಜನರಿಗೆ ಎಷ್ಟರಮಟ್ಟಿಗೆ ಸುರಕ್ಷತೆಯನ್ನು ನೀಡಿದೆಯೆಂದು ಇದರಿಂದ ತಿಳಿಯಬಹುದು.

ಸಿ.ಇ. 1526ರಲ್ಲಿ ಬಾಬರ್ ಸ್ಥಾಪಿಸಿದ ಮೊಘಲರ ಆಡಳಿತದ ಕುರಿತು ಹಿಂದಿನ ತರಗತಿಗಳಲ್ಲಿ ಚರ್ಚಿಸಿರುವಿರಲ್ಲವೇ. ದಕ್ಷಿಣ ಭಾರತದ ಕೆಲವು ಭಾಗಗಳನ್ನು ಬಿಟ್ಟು ಭಾರತದಾದ್ಯಂತ ರಾಜಕೀಯವಾಗಿ ಏಕೀಕರಿಸಲು ಮೊಘಲರ ಆಡಳಿತಕ್ಕೆ ಸಾಧ್ಯವಾಯಿತು. ಆಡಳಿತ ವಲಯದಲ್ಲಿ ಮೂಲಭೂತ ಬದಲಾವಣೆಗಳು ಆ ಕಾಲದಲ್ಲಿ ಉಂಟಾದುವು.



ಅಕ್ಬರನ ಕಾಲದಲ್ಲಿ ನಿರ್ಮಿಸಲಾದ ಆಗ್ರಾ ಕೋಟೆ

ಅಬ್ದುಲ್ ಫಸಲ್ ರಚಿಸಿದ 'ಅಕ್ಬರ್ ನಾಮಾ'. ಎಂಬುದು ಮೊಗಲರ ಕಾಲದ ಆಡಳಿತ ವ್ಯವಸ್ಥೆಯ ಕುರಿತು ತಿಳಿಯಲು ಸಹಾಯ ಮಾಡುವ ಪ್ರಧಾನ ಮೂಲಗಳಲ್ಲೊಂದಾಗಿದೆ.



ಅಬ್ದುಲ್ ಫಸಲ್ ಅಕ್ಬರ್‌ನಾಮಾದ ಬಗ್ಗೆ ಅಕ್ಬರನಿಗೆ ವಿವರಿಸುವ ಚಿತ್ರ

### ಮಂಗೋಲಿಯಾ ಸಂಪ್ರದಾಯ

ದೇವರ ಆಜ್ಞೆಯನ್ನು ಕಾರ್ಯಗತಗೊಳಿಸಲು ಆರಿಸಲಾದ ವ್ಯಕ್ತಿಯೇ ರಾಜನಾಗಿದ್ದಾನೆ. ಇದು ಮಂಗೋಲಿಯ ಸಂಪ್ರದಾಯದ ನಂಬಿಕೆ. ದೇವರ ಆಶೀರ್ವಾದ ತನಗೆ ದೊರೆತಿದೆಯೆಂದೂ ಆ ಮಾರ್ಗದಲ್ಲಿ ತಾನು ಸಂಚರಿಸುತ್ತಿದ್ದೇನೆ ಎಂದೂ ಮಂಗೋಲಿಯ ಆಡಳಿತಾಧಿಕಾರಿಯಾಗಿದ್ದ ಚೆಂಗೀಸ್‌ಖಾನ್ ಘೋಷಿಸಿದನು. ದೇವರ ಪ್ರತಿರೂಪವೇ ರಾಜ ಎಂಬ ದೃಷ್ಟಿಕೋನವು ರಾಜನ ಅಧಿಕಾರವನ್ನು ಪ್ರಶ್ನಿಸದೆ ಮುಂದುವರಿಸಲು ಸಹಾಯಕವಾಯಿತು.

ಮೊಘಲ್ ಆಡಳಿತದ ವಿಶೇಷತೆಗಳು ಯಾವುವು ಎಂದು ಪರಿಶೀಲಿಸೋಣ.

- ರಾಜಾಧಿಕಾರ ದೈವದತ್ತವಾಗಿತ್ತು.
- ತುರ್ಕಿ, ಮಂಗೋಲಿಯ ಸಂಪ್ರದಾಯಗಳ ಪ್ರಭಾವ.
- ಎಲ್ಲಾ ಅಧಿಕಾರಗಳೂ ರಾಜನಲ್ಲಿ ಕೇಂದ್ರೀಕೃತವಾಗಿತ್ತು.
- ಸೈನಿಕ ಶಕ್ತಿಯನ್ನು ಅವಲಂಬಿಸಿಕೊಂಡಿತ್ತು.

ಸುಲ್ತಾನರ ಆಡಳಿತ ಮತ್ತು ಮೊಘಲರ ಆಡಳಿತಗಳ ಸಾಮಾನ್ಯ ವಿಶೇಷತೆಗಳನ್ನು ಚರ್ಚಿಸಿ ಟಿಪ್ಪಣಿ ತಯಾರಿಸಿರಿ.

- ಮಂತ್ರಿಗಳೂ ಉದ್ಯೋಗಿಗಳೂ ಆಡಳಿತಕ್ಕೆ ಸಹಾಯಮಾಡುತ್ತಿದ್ದರು.
- ಪ್ರಾದೇಶಿಕ ಆಡಳಿತ ಜಾರಿಯಲ್ಲಿತ್ತು.

### ಕೇಂದ್ರಾಡಳಿತ

ಮೊಘಲರ ಕಾಲದ ಕೇಂದ್ರಾಡಳಿತದ ಪ್ರಧಾನ ಉದ್ಯೋಗಿಗಳು ಮತ್ತು ಅವರ ಜವಾಬ್ದಾರಿಗಳು

| | | |
|---|---|---|
| ವಕೀಲ್ | - | ಪ್ರಧಾನಮಂತ್ರಿ |
| ವಸೀರ್ | - | ಹಣಕಾಸು |
| ಸದರ್ | - | ನ್ಯಾಯನೀತಿ |
| ಮೀರ್‌ಭಕ್ಷಿ | - | ಸೈನ್ಯಾಡಳಿತ |

### ಪ್ರಾದೇಶಿಕ ಆಡಳಿತ

ಮೊಘಲರ ಕಾಲದ ಪ್ರಾದೇಶಿಕ ಆಡಳಿತ ವಿಧಾನಗಳು ಮತ್ತು ಅವುಗಳ ಜವಾಬ್ದಾರಿಗಳನ್ನು ವಹಿಸಿದ ಉದ್ಯೋಗಿಗಳು

| | | |
|---|---|---|
| ಸುಬಾ | - | ಸುಬೇದಾರ್ |
| ಸರ್ಕಾರ್ | - | ಫೌಜ್‌ದಾರ್ |
| ಪರ್ಗಾನ | | ಷಿಖ್‌ದಾರ್ |
| ಗ್ರಾಮ | - | ಚೌಧರಿ |
| ಪಟ್ಟಣ | - | ಕೊತ್ವಾಲ್ |

### ಪ್ರಾದೇಶಿಕ ಆಡಳಿತ

ಪ್ರಾದೇಶಿಕ ಆಡಳಿತದಲ್ಲೂ ಮೊಘಲ್ ಚಕ್ರವರ್ತಿಗಳು ಪ್ರತ್ಯೇಕ ಶ್ರದ್ಧೆ ವಹಿಸಿದ್ದರು. ಆಡಳಿತ ಸೌಕರ್ಯಕ್ಕಾಗಿ ರಾಜ್ಯವನ್ನು ಸುಬಾ, ಸರ್ಕಾರ, ಪರ್ಗಾನ, ಗ್ರಾಮಗಳು ಎಂಬೀ ವಿಭಾಗಗಳಾಗಿ ವಿಂಗಡಿಸಿದ್ದರು. ಪ್ರತಿಯೊಂದು ಘಟಕದ ಆಡಳಿತಕ್ಕಾಗಿ ನಿರ್ದಿಷ್ಟ ಉದ್ಯೋಗಿಗಳ ಒಂದು ಗುಂಪು ಇತ್ತು. ತೆರಿಗೆ ಸಂಗ್ರಹ, ನ್ಯಾಯನೀತಿ ನಿರ್ವಹಣೆ, ಸೈನಿಕ ಮೇಲ್ನೋಟ ಎಂಬಿವುಗಳು ಅವರ ಜವಾಬ್ದಾರಿಗಳಾಗಿದ್ದುವು.




ಅಕ್ಬರನ ಕಾಲದ ಸುಬಾಗಳು

ಮೊಘಲ್ ಅರಸನಾದ ಅಕ್ಬರನ ಕಾಲದಲ್ಲಿ ಆಡಳಿತವು ಹೆಚ್ಚು ಪ್ರಬಲವಾಯಿತು. ಭಾರತದ ಎಲ್ಲಾ ವಿಭಾಗಗಳ ಜನರ ಬೆಂಬಲವಿರುವ ಆಡಳಿತಾಧಿಕಾರಿಯಾಗುವುದೇ ಅವನ ಉದ್ದೇಶವಾಗಿತ್ತು. ಇದಕ್ಕಾಗಿ ಅಕ್ಬರನು ಕೈಗೊಂಡ ಕ್ರಮಗಳನ್ನು ಕೆಳಗೆ ನೀಡಲಾಗಿದೆ.

- ಬಾದ್‌ಷಾ - ಇ-ಹಿಂದ್ (ಭಾರತದ ಚಕ್ರವರ್ತಿ) ಎಂಬ ಸ್ಥಾನವನ್ನು ಸ್ವೀಕರಿಸಿದನು.
- ವಿವಿಧ ಧರ್ಮಗಳ ನಡುವೆ ಸೌಹಾರ್ದತೆಯನ್ನು ಬೆಳೆಸಲು ಎಲ್ಲಾ ಧರ್ಮಗಳ ಆಶಯಗಳನ್ನೊಳಗೊಂಡ ದೀನ್-ಇ-ಇಲಾಹಿ ಎಂಬ ನೂತನ ಸೂಫಿ ಮತಕ್ಕೆ ರೂಪು ನೀಡಿದನು.
- ರಜಪೂತರಾದ ರಾಜಾತೋಡರ ಮಲ್ಲ,



**ಅಕ್ಬರ್‌ನ ಆಡಳಿತವು ಎಲ್ಲರಿಗೂ ಒಪ್ಪುಗೆಯಾಗುವ ಆಡಳಿತವಾಗಿತ್ತು. ಸಮರ್ಥಿಸಿರಿ.**

ಬೀರ್‌ಬಲ್, ಮಾನ್‌ಸಿಂಗ್ ಮುಂತಾದವರನ್ನು ಉನ್ನತ ಉದ್ಯೋಗಗಳಿಗೆ ನೇಮಿಸಿದನು.

- ರಜಪೂತ ಸ್ತ್ರೀಯರನ್ನು ಅಕ್ಬರ್ ಮತ್ತು ಸಂಬಂಧಿಕರು ವಿವಾಹವಾದರು.
- ವಿವಿಧ ವಿಭಾಗಗಳನ್ನು ಒಳಗೊಂಡ ಸೈನ್ಯವನ್ನು ಬಲಗೊಳಿಸಿದನು.



ಅಕ್ಬರ್ ವಿವಿಧ ಧರ್ಮ ಪಂಡಿತರೊಂದಿಗೆ ಇಬಾದತ್ ಖಾನಾದಲ್ಲಿ ಸಂಭಾಷಣೆ ನಡೆಸುತ್ತಿರುವುದು.

## ದೀನ್ - ಇ - ಇಲಾಹಿ (ತೌಹೀದ್ - ಇ - ಇಲಾಹಿ)

ದೇಶದಲ್ಲಿ ವಿವಿಧ ಜನವಿಭಾಗಗಳ ಮಧ್ಯೆ ಶಾಂತಿ, ಸೌಹಾರ್ದತೆ, ಏಕತೆಯನ್ನು ಬೆಳೆಸಲು ಅಕ್ಬರ್ ಪ್ರಯತ್ನಿಸಿದ್ದನು. ವಿವಿಧ ಮತ ವಿಭಾಗಗಳ ಪಂಡಿತರು ತಮ್ಮೊಳಗೆ ಆಶಯ ವಿನಿಮಯಕ್ಕೆ ಸಂಬಂಧಿಸಿ ಮಾತುಕತೆ ನಡೆಸಲು ಅವನು ರಾಜಧಾನಿಯಾದ ಫತ್ತೇಪುರ್ ಸಿಕ್ರಿಯಲ್ಲಿ 'ಇಬಾದತ್ ಖಾನಾ' ಎಂಬ ಆರಾಧನಾಲಯಗಳನ್ನು ನಿರ್ಮಿಸಿದನು. 'ದೀನ್ - ಇ - ಇಲಾಹಿ ಎಂಬುದು ಇಲ್ಲಿ ನಡೆದ ಚರ್ಚೆಗಳ ಸಾರಾಂಶವನ್ನೊಳಗೊಳಿಸಿ ಅಕ್ಬರ್ ರೂಪೀಕರಿಸಿದ ಆಶಯ ಸಂಹಿತೆಯಾಗಿದೆ ಈ ಮತವು ವಿವಿಧ ತತ್ವ ಸಂಹಿತೆಗಳು ಹಾಗೂ ಮತಕ್ಕೆ ಸಂಬಂಧಿಸಿದ ಆಶಯಗಳನ್ನು ಒಟ್ಟು ಸೇರಿಸಿದ್ದಾಗಿದೆ ಇದರೊಂದಿಗೆ ಸೇರಲು ಅಕ್ಬರ್ ಯಾರನ್ನೂ ನಿರ್ಬಂಧಿಸಿರಲಿಲ್ಲ. ಪ್ರವೇಶಾತಿ ಕಾರ್ಯಕ್ರಮವನ್ನು ಬಿಟ್ಟು ಯಾವುದೇ ಆಚಾರಗಳು, ಧರ್ಮಗ್ರಂಥ, ಆರಾಧನಾಲಯ, ಪುರೋಹಿತರು ಇತ್ಯಾದಿ ದೀನ್-ಇ-ಇಲಾಹಿಗಿರಲಿಲ್ಲ. ಸುಲ್-ಇ-ಕುಲ್ (Sul-i-kul) ಅಥವಾ ಎಲ್ಲರಿಗೂ ಸಮಾಧಾನ ಎಂಬುದಾಗಿತ್ತು ಇದರ ಮೂಲ ಆಧಾರ.

**ಆಡಳಿತದ ಸ್ಥಿರತೆ ಹಾಗೂ ಮತಸೌಹಾರ್ದತೆಗೆ ಅಕ್ಬರ್ ಆವಿಷ್ಕರಿಸಿದ ದೀನ್-ಇ-ಇಲಾಹಿ ಎಷ್ಟರ ಮಟ್ಟಿಗೆ ಸಹಾಯಕವಾಗಿತ್ತು? ವಿಶ್ಲೇಷಿಸಿರಿ.**

## ಮಾನ್‌ಸಬ್ದಾರಿ

ಮೊಘಲರ ಆಡಳಿತದ ಅಡಿಪಾಯವು ಪ್ರಬಲವಾದ ಸೈನಿಕ ವ್ಯವಸ್ಥೆಯಾಗಿತ್ತು. ಆಡಳಿತ ನಡೆಸಲು ಮತ್ತು ಸಾಮ್ರಾಜ್ಯವನ್ನು ವಿಸ್ತರಿಸಲು ಚಕ್ರವರ್ತಿಗೆ ಸೈನಿಕ ಶಕ್ತಿಯೊಂದಿಗೆ ಪ್ರಭುಗಳ ಹಾಗೂ ಉದ್ಯೋಗಿಗಳ ಬೆಂಬಲ ಅವಶ್ಯಕವಾಗಿತ್ತು. ಮಾನ್‌ಸಬ್ದಾರಿ ಎಂಬುದು ಈ ಉದ್ದೇಶವನ್ನು ಸಾಧಿಸಲು ಅಕ್ಬರ್ ಸ್ವೀಕರಿಸಿದ ಕ್ರಮವಾಗಿತ್ತು.



ಮೊಘಲ್ ಸೈನಿಕ ಆಯುಧಗಳು

'ಮಾನ್‌ಸಬ್' ಎಂಬ ಪದದಿಂದ ಮೊಘಲ್ ಸೈನ್ಯದ ಒಬ್ಬ ಸೈನಿಕ ಉದ್ಯೋಗಿಯ ಪದವಿಯನ್ನು ಅರ್ಥೈಸಿಕೊಳ್ಳಲಾಗುತ್ತಿತ್ತು. ಮಾನ್‌ಸಬ್ದಾರಿ ಸಂಪ್ರದಾಯದಿಂದಾಗಿ ಉದ್ಯೋಗಿಗಳ ಪದವಿ, ಸಂಬಳ, ಸೈನಿಕ ಜವಾಬ್ದಾರಿ ಎಂಬಿವುಗಳನ್ನು ವಿಂಗಡಿಸಲಾಯಿತು. ಮಾನ್‌ಸಬ್ದಾರಿಗಳು ಹೊಂದಿದ್ದ ಅಶ್ವದಳ ಹಾಗೂ

ಕುದುರೆಗಳ ಸಂಖ್ಯೆಗಳ ಆಧಾರದಲ್ಲಿ ಅವನ ಪದವಿಯನ್ನು ನಿರ್ಧರಿಸಲಾಗುತ್ತಿತ್ತು. ಮೂವತ್ತಕ್ಕಿಂತಲೂ ಹೆಚ್ಚು ಪದವಿಗಳಲ್ಲಿ ಹತ್ತರಿಂದ ಹತ್ತುಸಾವಿರದವರೆಗೆ ಕುದುರೆಗಳುಳ್ಳ ಮಾನ್‌ಸಬ್ದಾರರು ಅಕ್ಬರನ ಸೈನ್ಯದಲ್ಲಿದ್ದರು. ಇದಲ್ಲದೆ 'ಸಾತ್' (Zat) 'ಸಾವರ್' (sawar) ಎಂಬ ಎರಡು ಪದವಿಗಳೂ ಇದ್ದುವು. 'ಸಾತ್' ಎಂಬ ಶಬ್ದಕ್ಕೆ ವ್ಯಕ್ತಿ ಎಂದರ್ಥ. ಅದು ಒಬ್ಬ ವ್ಯಕ್ತಿಯ ಸ್ಥಾನವನ್ನೂ ಸಂಬಳವನ್ನೂ ಸೂಚಿಸುತ್ತದೆ. 'ಸಾವರ್' ಒಬ್ಬ ವ್ಯಕ್ತಿ ಹೊಂದಿರಬೇಕಾದ ಅಶ್ವದಳದ ಸೈನಿಕರ ಸಂಖ್ಯೆಯನ್ನು ಸೂಚಿಸುತ್ತದೆ.

**'ಮಾನ್‌ಸಬ್ದಾರಿ' ಸಂಪ್ರದಾಯವು ಚಕ್ರವರ್ತಿಯ ಸರ್ವಾಧಿಕಾರವನ್ನು ಭದ್ರಗೊಳಿಸಲು ಜಾರಿಗೊಳಿಸಿದ ಕ್ರಮವಾಗಿತ್ತು. ಸಮರ್ಥಿಸಿರಿ.**

## ಜಾಗೀರ್‌ದಾರಿ

ಜಾಗೀರ್‌ದಾರಿಯು ಮೊಘಲ್ ಚಕ್ರವರ್ತಿಗಳು ಆಡಳಿತವನ್ನು ಸುಸೂತ್ರವಾಗಿ ನಡೆಸಲು ಜಾರಿಗೊಳಿಸಿದ ಮತ್ತೊಂದು ಸುಧಾರಣೆಯಾಗಿತ್ತು. ಇದು ಸುಲ್ತಾನರ ಕಾಲದ ಇಖ್ತಾದ ಇನ್ನೊಂದು ಪರಿಷ್ಕೃತ ರೂಪವಾಗಿತ್ತು. ಇದರಲ್ಲಿ ಮಾನ್‌ಸಬ್ದಾರರಿಗೆ ಸಂಬಳದ ಬದಲಾಗಿ ಭೂಮಿಯನ್ನು ಹಂಚಿ ನೀಡುತ್ತಿದ್ದರು. ಹೀಗೆ ನೀಡಲಾದ ಭೂಮಿ 'ಜಾಗೀರ್' ಎಂದು ಕರೆಯಲ್ಪಡುತ್ತಿತ್ತು. ಭೂಮಿಯನ್ನು ಕೈವಶ ಇರಿಸಿಕೊಳ್ಳುವ ಹಕ್ಕನ್ನು ಮಾತ್ರವೇ ಉದ್ಯೋಗಿಗಳಿಗೆ ನೀಡಲಾಗಿತ್ತು. ಅವರನ್ನು 'ಜಾಗೀರ್‌ದಾರ್'ರೆಂದು ಕರೆಯುತ್ತಿದ್ದರು. ಇಖ್ತಾ ಸಂಪ್ರದಾಯದ ರೀತಿಯಲ್ಲೇ ಜಾಗೀರ್ ಸಂಪ್ರದಾಯದಲ್ಲಿ 'ಜಾಗೀರುದಾರರು' ಅವರಿಗೆ ಲಭಿಸಿದ ಭೂಮಿಯಲ್ಲಿ ವಾಸಿಸುವುದಾಗಲೀ ಆಡಳಿತ ನಿರ್ವಹಣೆ ನಡೆಸುವುದಾಗಲೀ ಮಾಡಲಿಲ್ಲ. ಜಾಗೀರ್‌ದಾರಿ ಪದ್ಧತಿಯು ಪರಂಪರಾಗತವಾಗಿರಲಿಲ್ಲ. ಇವರನ್ನು ರಾಜನು ವರ್ಗಾವಣೆ ಮಾಡಿ ನೇಮಿಸುತ್ತಿದ್ದನು. ನಿಶ್ಚಿತ ಭೂಮಿಯ ತೆರಿಗೆ ಸಂಗ್ರಹಿಸಿ ಉಪಯೋಗಿಸುವುದು ಮಾತ್ರ ಅವರಿಗಿರುವ ಅಧಿಕಾರವಾಗಿತ್ತು.

**ಸುಲ್ತಾನರ ಕಾಲದಲ್ಲಿ ಜಾರಿಯಲ್ಲಿದ್ದ ಇಖ್ತಾ ಸಂಪ್ರದಾಯ ಮತ್ತು 'ಜಾಗೀರ್‌ದಾರಿ' ಸಂಪ್ರದಾಯಕ್ಕಿರುವ ಸಾಮ್ಯ ವ್ಯತ್ಯಾಸಗಳು ಯಾವುವು?**

**ಸೈನಿಕ ಶಕ್ತಿ**

ಚೋಳ ರಾಜರು ಸಶಕ್ತವಾದ ಒಂದು ಸೈನ್ಯವನ್ನು ಸಂಘಟಿಸಿದ್ದರು. ಆ ಕಾಲದ ಅತ್ಯಂತ ಶಕ್ತಿಯುತವಾದ ನಾವಿಕ ಶಕ್ತಿ ಚೋಳರದ್ದಾಗಿತ್ತು. ಬಂಗಾಳ ಕೊಲ್ಲಿಯು ಚೋಳರ ಸರೋವರ ಎಂದು ಕರೆಯಲ್ಪಡುತ್ತಿತ್ತು. ಮಲೇಷಿಯ, ಇಂಡೋನೇಷಿಯಾ, ಸಿಲೋನ್ ಮುಂತಾದ ಪ್ರದೇಶಗಳಿಗೆ ಚೋಳ ಸಾಮ್ರಾಜ್ಯ ವಿಸ್ತರಿಸಿತ್ತು. ಅದರ ಪ್ರಧಾನ ಕಾರಣ ಅವರ ನಾವಿಕಶಕ್ತಿಯ ಅಧಿಪತ್ಯವಾಗಿತ್ತು.

## ಚೋಳರ ಆಡಳಿತ

ಚೋಳರು ಸಿ.ಇ. ಒಂಭತ್ತನೆಯ ಶತಮಾನದಿಂದ ಹದಿನಾಲ್ಕನೆಯ ಶತಮಾನದ ವರೆಗೆ ದಕ್ಷಿಣ ಭಾರತದ ಅತ್ಯಂತ ಪ್ರಧಾನವಾದ ರಾಜಕೀಯ ಶಕ್ತಿಯಾಗಿದ್ದರು. ಪರಮಾಧಿಕಾರಿಯಾಗಿದ್ದ ರಾಜ, ಉಪದೇಶಕರಾದ ಮಂತ್ರಿಗಳು, ಉದ್ಯೋಗಿಗಳು ಮುಂತಾದವರು ಸೇರಿಕೊಂಡ ಒಂದು ಕೇಂದ್ರಾಡಳಿತ ಸಂಘಟನೆಯು ದೇಶದ ಆಡಳಿತ ನಡೆಸುತ್ತಿತ್ತು. ರಾಜಾಡಳಿತವನ್ನು ಅನುವಂಶೀಯವಾಗಿ ಮುಂದುವರಿಸುವ ಹಕ್ಕು ಮಕ್ಕಳ ಕಟ್ಟು ಸಂಪ್ರದಾಯಕ್ಕನು ಸಾರವಾಗಿತ್ತು. ರಾಜನು ಶಾಸನಗಳ ಮೂಲಕ ಆಡಳಿತವನ್ನು

ನಿಯಂತ್ರಿಸುತ್ತಿದ್ದನು. 'ಒಲೈ ನಾಯಕಂ' ಎಂದು ಕರೆಯಲ್ಪಡುತ್ತಿದ್ದ ಪ್ರಧಾನ ಉದ್ಯೋಗಿಯು ರಾಜಶಾಸನಗಳನ್ನು ಇತರ ಉದ್ಯೋಗಿಗಳಿಗೆ ತಲುಪಿಸುತ್ತಿದ್ದನು. ಬಲಯುತವಾದ ನಾವಿಕ ಪಡೆಯನ್ನು ಹೊಂದಿದ್ದ ಸೈನಿಕ ಶಕ್ತಿಯು ಚೋಳರ ಆಡಳಿತದ ಮತ್ತೊಂದು ವಿಶೇಷತೆಯಾಗಿತ್ತು.

## ಗ್ರಾಮ ಸ್ವಯಂ ಆಡಳಿತ

"ಉತ್ತರಮೇರೂರ್ ಚತುರ್ವೇದಿ ಮಂಗಲ ಗ್ರಾಮಸಭಾ ಮಂದಿರದಲ್ಲಿ ಸೇರಿದ ಸಾರ್ವಜನಿಕ ಸಭೆಯಲ್ಲಿ ಸೇರಿ ಆಲೋಚಿಸಿ ಕೈಗೊಂಡ ತೀರ್ಮಾನದ ಆಜ್ಞೆಯ ಪ್ರಕಾರ ಉತ್ತರಮೇರೂರ್ ಚತುರ್ವೇದಿ ಮಂಗಲ ಗ್ರಾಮಸಭಾ ತೀರ್ಮಾನಕ್ಕೆ ವಿಧೇಯವಾಗಿ ವಾರ್ಷಿಕ ಸಮಿತಿ, ತೋಟ ಸಂರಕ್ಷಣಾ ಸಮಿತಿ, ಜಲ ಸಂಪನ್ಮೂಲ ಸಮಿತಿ ಎಂಬಿವುಗಳಿಗೆ ಪ್ರತಿನಿಧಿಗಳನ್ನು ಆರಿಸಲು ತೀರ್ಮಾನಿಸಲಾಗಿದೆ.'

ಉತ್ತರಮೇರೂರ್ ಶಾಸನದ ಒಂದು ಭಾಗ



ಉತ್ತರ ಮೇರೂರ್ ಶಾಸನ

ಚೋಳರ ಆಡಳಿತದ ಪ್ರಧಾನ ವಿಶೇಷತೆಯಾದ ಗ್ರಾಮ ಸ್ವಯಂ ಆಡಳಿತದ ಕುರಿತು ಪ್ರತಿಪಾದಿಸುವ ಉತ್ತರಮೆರೂರ್ ಶಾಸನದ ಒಂದು ಭಾಗವನ್ನು ನೀಡಲಾಗಿದೆ. ಚೋಳರ ಆಡಳಿತ ಕಾಲದ ಗ್ರಾಮ ಸ್ವಯಂ ಆಡಳಿತದ ವಿಶೇಷತೆಗಳು ಯಾವುವೆಂದು ನೋಡೋಣ.

ಆಡಳಿತ ಸೌಕರ್ಯಕ್ಕಾಗಿ ಚೋಳ ರಾಜರು ದೇಶವನ್ನು ಮಂಡಲಗಳು, ವಳನಾಡುಗಳು, ನಾಡುಗಳು, ಕೊಟ್ಟಂ ಎಂಬಿವುಗಳಾಗಿ ವಿಭಜಿಸಿದ್ದರು. ಸ್ವಯಂ ಆಡಳಿತದ ಅಧಿಕಾರವಿದ್ದ ಗ್ರಾಮಗಳ ಒಕ್ಕೂಟವೇ 'ಕೊಟ್ಟಂ'. ಗ್ರಾಮ ಆಡಳಿತಕ್ಕೆ ಸಂಬಂಧಿಸಿದ ಎಲ್ಲ ಜವಾಬ್ದಾರಿಗಳೂ ಗ್ರಾಮೀಣ ಜನರಲ್ಲಿ ಕೇಂದ್ರೀಕೃತವಾಗಿದ್ದುವು. ಗ್ರಾಮಾಡಳಿತಕ್ಕಾಗಿ 'ಊರ್' 'ಸಭಾ' ಎಂಬೀ ಎರಡು ಸಮಿತಿಗಳು ಕಾರ್ಯಾಚರಿಸುತ್ತಿದ್ದುವು. 'ಊರ್' ಗ್ರಾಮದ ಎಲ್ಲ ಜನರನ್ನು ಒಳಗೊಂಡದ್ದಾಗಿತ್ತು. 'ಸಭಾ' ಬ್ರಾಹ್ಮಣರನ್ನು ಮಾತ್ರ ಒಳಗೊಂಡಿರುವುದಾಗಿತ್ತು. ದೇವಸ್ಥಾನದ ಸುತ್ತಮುತ್ತಲು ಈ ಸಮಿತಿಗಳು ಇದ್ದುವು. ಸಭಾದ ವಿಶೇಷತೆಗಳನ್ನು ಕೆಳಗೆ ಕೊಡಲಾಗಿದೆ.

- ಸಭಾದ ಕಾರ್ಯಾಚರಣೆಗಾಗಿ ಪ್ರತ್ಯೇಕ ನಿಯಮಗಳಿದ್ದುವು.
- ಆಡಳಿತ ನಿರ್ವಹಣೆಗಾಗಿ ಸಭಾವನ್ನು ಅನೇಕ ಪಂಚಾಯತುಗಳಾಗಿ ವಿಭಾಗಿಸಿ ಜವಾಬ್ದಾರಿಗಳನ್ನು ನೀಡಲಾಗಿತ್ತು.
- ಚುನಾವಣೆಯ ಮೂಲಕ ಹಾಗೂ ಅದೃಷ್ಟಚೀಟಿಯ ಮೂಲಕ ಪಂಚಾಯತಿನ ಸದಸ್ಯರನ್ನು ತೀರ್ಮಾನಿಸುತ್ತಿದ್ದರು.
- ಸದಸ್ಯರನ್ನು ಎಲ್ಲವರ್ಷವೂ ಚುನಾಯಿಸುತ್ತಿದ್ದರು.
- ಒಬ್ಬನಿಗೆ ಹೆಚ್ಚೆಂದರೆ ಮೂರು ಬಾರಿ ಮಾತ್ರವೇ ಸದಸ್ಯನಾಗಿರಲು ಅವಕಾಶ ಸಿಗುತ್ತಿತ್ತು.

- ಲಂಚ, ಕಳವು, ಮುಂತಾದ ಅಪರಾಧಗಳು ಆರೋಪಿಸಲ್ಪಟ್ಟವರಿಗೆ ಪುನಃ ಚುನಾವಣೆಯಲ್ಲಿ ಸ್ಪರ್ಧಿಸಲು ಅವಕಾಶವಿರಲಿಲ್ಲ.
- ಸಭಾದ ಸದಸ್ಯರು 'ಪೆರುಮಕ್ಕಳ್' ಎಂದೂ ಪಂಚಾಯತ್‌ನ ಸದಸ್ಯರು 'ವಾರಿಯ ಪೆರುಮಕ್ಕಳ್' ಎಂದೂ ಕರೆಯಲ್ಪಡುತ್ತಿದ್ದರು.

ಗ್ರಾಮಾಡಳಿತಕ್ಕೆ ಸಂಬಂಧಿಸಿದ ಎಲ್ಲಾ ಜವಾಬ್ದಾರಿಗಳೂ ಅಧಿಕಾರಗಳೂ 'ಸಭಾ'ದಲ್ಲಿ ಕೇಂದ್ರೀಕರಿಸಲ್ಪಟ್ಟದ್ದುವು. ಅವುಗಳ ಅಧಿಕಾರಗಳು ಯಾವುವೆಲ್ಲ ಎಂದು ನೋಡೋಣ.

- ದೇವಾಲಯಗಳಿಗೋಸ್ಕರ ಭೂಮಿಯನ್ನು ಸ್ವೀಕರಿಸುವುದು.
- ಭೂಮಿಯನ್ನು ಅಳೆದು ಕ್ರಮಬದ್ಧಗೊಳಿಸಿ ತೆರಿಗೆ ಸಂಗ್ರಹಿಸುವುದು.
- ಜನರ ಕ್ಷೇಮಕ್ಕಾಗಿ ಲೋಕೋಪಯೋಗಿ ಕೆಲಸಗಳನ್ನು ನಡೆಸುವುದು.
- ದಾಖಲೆಗಳನ್ನು, ಲೆಕ್ಕಗಳನ್ನು ಸಂರಕ್ಷಿಸುವುದು.
- ಗ್ರಾಮದ ನೀತಿನ್ಯಾಯ ಆಡಳಿತ ನಿರ್ವಹಿಸುವುದು.



ಕೇರಳದ ಗ್ರಾಮಪಂಚಾಯತುಗಳೊಂದಿಗೆ ಚೋಳರ ಗ್ರಾಮ ಸ್ವಯಂ ಆಡಳಿತವನ್ನು ಹೋಲಿಸಿರಿ.

## ವಿಜಯನಗರ ಸಾಮ್ರಾಜ್ಯ



ಕೃಷ್ಣದೇವರಾಯನ ಪ್ರತಿಮೆ




ದಕ್ಷಿಣ ಭಾರತದಲ್ಲಿ ಆಡಳಿತ ನಡೆಸಿದ ವಿಜಯನಗರ ಸಾಮ್ರಾಜ್ಯದ ಕುರಿತು ಹಿಂದಿನ ತರಗತಿಗಳಲ್ಲಿ ಚರ್ಚೆ ನಡೆಸಿದುದು ನೆನಪಿದೆಯಲ್ಲವೇ. ಒಂದು ಆಡಳಿತ ವ್ಯವಸ್ಥೆಯಲ್ಲಿ

ರಾಜನಿಗೆ ಎಷ್ಟರಮಟ್ಟಿಗೆ ಪ್ರಾಧಾನ್ಯವಿದೆ ಎಂದು ಸೂಚಿಸುವ ಕೃಷ್ಣದೇವರಾಯನು ಬರೆದ ಸಾಲುಗಳನ್ನು ಮೇಲೆ ಕೊಡಲಾಗಿದೆ. ವಿಜಯನಗರ ಸಾಮ್ರಾಜ್ಯದಲ್ಲಿ ಕೇಂದ್ರೀಕೃತ ರಾಜಾಪ್ರಭುತ್ವವು ಜಾರಿಯಲ್ಲಿತ್ತು. ಪ್ರಬಲವಾದ ಸೈನ್ಯದ ಬೆಂಬಲವು ರಾಜನಿಗಿತ್ತು. ಶತ್ರುಗಳಿಂದ ದೇಶವನ್ನು ರಕ್ಷಿಸಲು ವಿಶಾಲವಾದ ಕೋಟೆಗಳನ್ನು ಅವರು ನಿರ್ಮಿಸಿದನು. ವಿಜಯನಗರ ಸಾಮ್ರಾಜ್ಯದ ಕೇಂದ್ರಾಡಳಿತವನ್ನು 'ನಾಯಂಕರ' ಪದ್ಧತಿ ಎಂದೂ ಪ್ರಾದೇಶಿಕ ಆಡಳಿತವನ್ನು 'ಅಯ್ಯಂಗಾರ್' ಪದ್ಧತಿಯೆಂದೂ ಕರೆಯಲಾಗುತ್ತಿತ್ತು. ಅವುಗಳ ವಿಶೇಷತೆಗಳು ಯಾವುವೆಂದು ನೋಡೋಣ.



*ಬೇಲೂರು ಕೋಟೆ*

## ನಾಯಂಕರ ಸಂಪ್ರದಾಯ

ವಿಜಯನಗರ ಸಾಮ್ರಾಜ್ಯದಲ್ಲಿ ರಾಜನು ಕೇಂದ್ರಾಡಳಿತದ ಮುಖ್ಯಸ್ಥನಾಗಿದ್ದನು. ರಾಜನಿಗೆ ಸಹಾಯ ಮಾಡಲು ಮಂತ್ರಿಗಳೂ ರಾಜಕೀಯ ಉದ್ಯೋಗಿಗಳೂ ಇದ್ದರು. ತುಲನಾತ್ಮಕವಾಗಿ ಚಿಕ್ಕ ಸೈನ್ಯವು ರಾಜನ ನೇರವಾದ ನಿಯಂತ್ರಣದಲ್ಲಿತ್ತು. ಪ್ರವಿಶ್ಯ ಗವರ್ನರ್‌ಗಳು ತಮ್ಮದೇ ಆದ ನಿಶ್ಚಿತ ಸೈನ್ಯವನ್ನು ಸಂರಕ್ಷಿಸುತ್ತಿದ್ದರು. ರಾಜನಿಗೆ ಅಗತ್ಯವಿದ್ದಾಗ ಅವರು ಸೈನ್ಯವನ್ನು ಬಿಟ್ಟುಕೊಡುತ್ತಿದ್ದರು. ಸೈನಿಕ ಮುಖ್ಯಸ್ಥರಾದ ಇವರಿಗೆ 'ನಾಯಕ್' ಎಂಬ ಪದವಿಯೂ ನಿಶ್ಚಿತ ಭೂಮಿಯೂ ರಾಜನಿಂದ ಕೊಡಲಾಗುತ್ತಿತ್ತು. ಕೇಂದ್ರದಲ್ಲಿ ಜಾರಿಯಲ್ಲಿದ್ದ ಈ ಆಡಳಿತವು 'ನಾಯಂಕರ' ಎಂಬ ಹೆಸರಿನಿಂದ ಕರೆಯಲ್ಪಟ್ಟಿತು.



**ವಿಜಯನಗರ ರಾಜವಂಶಗಳು**

ಸಂಗಮ, ಸಾಳುವ, ತುಳುವ, ಅರವೀಡು ಎಂಬೀ ನಾಲ್ಕು ರಾಜವಂಶಗಳು ವಿಜಯನಗರದಲ್ಲಿ ಆಡಳಿತ ನಡೆಸುತ್ತಿದ್ದುವು. ಕೃಷ್ಣದೇವರಾಯನು ತುಳುವ ವಂಶದ ಆಡಳಿತಾಧಿಕಾರಿಯಾಗಿದ್ದವನು.

## ಅಯ್ಯಂಗಾರ್ ಸಂಪ್ರದಾಯ

ಆಡಳಿತ ಸೌಕರ್ಯಕ್ಕಾಗಿ ಸಾಮ್ರಾಜ್ಯವನ್ನು ಪ್ರವಿಶ್ಯಗಳು, ನಾಡುಗಳು, ಗ್ರಾಮಗಳು ಎಂಬಿವುಗಳಾಗಿ ವಿಂಗಡಿಸಲಾಗಿತ್ತು. 'ಗ್ರಾಮ'ವು ಮೂಲಭೂತ ಘಟಕವಾಗಿತ್ತು. ಚೋಳರ ಆಡಳಿತ ಕಾಲದ ಹಾಗೆ ಇಲ್ಲಿಯೂ ಗ್ರಾಮಸಭೆಗಳು ಕಾರ್ಯ ನಿರ್ವಹಿಸುತ್ತಿದ್ದುವು. ವಂಶಪಾರಂಪರ್ಯವಾಗಿ ಕೆಲಸ ನಿರ್ವಹಿಸುತ್ತಿದ್ದ 'ಅಯ್ಯಂಗಾರ್'ರು ದೈನಂದಿನ ಗ್ರಾಮಾಡಳಿತವನ್ನು ನಿರ್ವಹಿಸುತ್ತಿದ್ದರು. ಈ ಆಡಳಿತ ರೀತಿಯನ್ನು 'ಅಯ್ಯಂಗಾರ್' ಸಂಪ್ರದಾಯ ಎಂದು ಕರೆಯುತ್ತಿದ್ದರು. ಗ್ರಾಮಾಡಳಿತದ 'ಅಯ್ಯಂಗಾರ್' ರ ಸ್ಥಾನವು ಕೇಂದ್ರಾಡಳಿತದ 'ನಾಯಕ' ಪದವಿಗೆ ಸಮಾನವಾಗಿತ್ತು.

## ಮರಾಠ ಆಡಳಿತ


ಶಿವಾಜಿ

ಹದಿನೇಳನೇ ಶತಮಾನದಲ್ಲಿ ಭಾರತದಲ್ಲಿ ಆಡಳಿತ ನಡೆಸುತ್ತಿದ್ದ ಮರಾಠ ರಾಜ್ಯದ ಕುರಿತು ನೀವು ಹಿಂದಿನ ತರಗತಿಯಲ್ಲಿ ತಿಳಿದುಕೊಂಡಿರುವಿರಲ್ಲವೆ?. ಮಧ್ಯಕಾಲೀನ ಭಾರತದ ಇತರ ಆಡಳಿತಾಧಿಕಾರಿಗಳಂತೆ ನಿಯಮ ನಿರ್ಮಾಣ, ಕಾರ್ಯನಿರ್ವಹಣೆ, ನ್ಯಾಯನೀತಿ, ಸೈನ್ಯ ಮುಂತಾದ ಎಲ್ಲ ಅಧಿಕಾರಗಳನ್ನು ಮರಾಠ ಆಡಳಿತದಲ್ಲಿ ಚಕ್ರವರ್ತಿಯು ನಿಯಂತ್ರಿಸುತ್ತಿದ್ದನು. ಮರಾಠ ಆಡಳಿತಾಧಿಕಾರಿಯಾಗಿದ್ದ ಶಿವಾಜಿಯ ಆಡಳಿತದಲ್ಲಿ ಸಹಾಯ ಮಾಡುತ್ತಿದ್ದ 'ಅಷ್ಟಪ್ರಧಾನ್' ಎಂಬ ಸಮಿತಿಯು ವಿವಿಧ ಮಂತ್ರಿಗಳ ಹಾಗೂ ಅವರ ಜವಾಬ್ದಾರಿಗಳ ಕುರಿತು ವಿವರಿಸುವ ಚಿತ್ರವನ್ನು ಗಮನಿಸಿರಿ.





ಅಷ್ಟಪ್ರಧಾನದ ವಿವಿಧ ಮಂತ್ರಿಗಳ ಇಲಾಖೆಗಳನ್ನು ಪರಿಶೀಲಿಸಿ ಅವುಗಳನ್ನು ಇಂದಿನ ಆಡಳಿತದ ವಿವಿಧ ಇಲಾಖೆಗಳೊಂದಿಗೆ ಹೋಲಿಸಿರಿ.

ವಿಶಾಲವಾದ ಒಂದು ಮಂತ್ರಿಸಭೆಯ ಬೆಂಬಲವಿದ್ದ ಕೇಂದ್ರೀಕೃತ ಆಡಳಿತವು ಮರಾಠ ಆಡಳಿತದಲ್ಲಿದ್ದುವೆಂದು ಇದರಿಂದ ತಿಳಿಯಬಹುದು. ಮಂತ್ರಿಗಳು ಕೇವಲ ಸಲಹೆಗಾರರಾಗಿದ್ದರು. ಅವರ ಪದವಿಗಳು ಪರಂಪರಾಗತವಾದುದಾಗಿರಲಿಲ್ಲ.

ಮರಾಠ ಆಡಳಿತದ ಇತರ ವಿಶೇಷತೆಗಳನ್ನು ಪರಿಚಯಿಸಿಕೊಳ್ಳೋಣ.

**ಛತ್ರಪತಿ**

1674ರಲ್ಲಿ ರಾಯಗಢ ಕೋಟೆಯಲ್ಲಿ ಶಿವಾಜಿಯ ಪಟ್ಟಾಭಿಷೇಕವಾಯಿತು. ಆ ಬಳಿಕ ಅವರು 'ಛತ್ರಪತ್' ಎಂಬ ಹೆಸರು ಸ್ವೀಕರಿಸಿದರು.



*ರಾಯಗಢ ಕೋಟೆ*

- ಉದ್ಯೋಗಿಗಳ ಕುರಿತು ಹಾಗೂ ದೇಶದ ಆಡಳಿತದ ಕುರಿತು ತಿಳಿದುಕೊಳ್ಳಲು ಪ್ರಬಲವಾದ ಗುಪ್ತಚರ ವ್ಯವಸ್ಥೆಯನ್ನು ಹೊಂದಿದ್ದರು.
- ಪ್ರಾದೇಶಿಕ ಆಡಳಿತ ಜಾರಿಯಲ್ಲಿತ್ತು.

## ಮರಾಠರ ಆಡಳಿತ ಕಾಲದ ಪ್ರಾದೇಶಿಕ ಆಡಳಿತೆ

ಮರಾಠ ಸಾಮ್ರಾಜ್ಯವನ್ನು ಆಡಳಿತ ಸೌಕರ್ಯಕ್ಕಾಗಿ ವಿವಿಧ ವಿಭಾಗಗಳಾಗಿ ವಿಂಗಡಿಸಲಾಗಿತ್ತು. ಇವು ಪ್ರವಿಶ್ಯ, ಜಿಲ್ಲೆ (ಪ್ರಾಂತ್ಯಗಳು), ಪರ್ಗಾನ, ಗ್ರಾಮಗಳು ಎಂಬವುಗಳಾಗಿವೆ. ಉದ್ಯೋಗಿಗಳನ್ನು ರಾಜನು ನೇರವಾಗಿ ನೇಮಿಸುತ್ತಿದ್ದನು. ಇವುಗಳಲ್ಲದೆ 'ಸ್ವರಾಜ್ಯ', 'ಮೊಗಳೈ' ಎಂದು ಎರಡು ವಿಭಾಗಗಳಾಗಿ ದೇಶವನ್ನು ವಿಭಾಗಿಸಲಾಗಿತ್ತು. ಸ್ವರಾಜ್ಯ ಮರಾಠರ ಭೂಪ್ರದೇಶಗಳಾಗಿದ್ದವು. 'ಮೊಗಳೈ' ಇತರರಿಂದ ಆಕ್ರಮಿಸಿ ಕೈವಶಪಡಿಸಿದ ಪ್ರದೇಶಗಳಾಗಿದ್ದುವು. ಮರಾಠ ದೇಶಗಳಿಂದಲೂ (ಸ್ವರಾಜ್ಯ), ಸಂಗ್ರಹಿಸಿದ ಭೂ ತೆರಿಗೆಯನ್ನು ಹೊರತುಪಡಿಸಿ ವಶಪಡಿಸಿದ ಪ್ರದೇಶ (ಮೊಗಳೈ) ಗಳಿಂದಲೂ ನಿರ್ಬಂಧವಾಗಿ ಚೌತ್, ಸರ್‌ದೇಶ್‌ಮುಖಿ ಎಂಬ ಎರಡು ರೀತಿಯ ತೆರಿಗೆಗಳನ್ನು ಸಂಗ್ರಹಿಸುತ್ತಿದ್ದರು.

ಮಧ್ಯಕಾಲೀನ ಭಾರತದಲ್ಲಿ ನೆಲೆನಿಂತಿದ್ದ ಆಡಳಿತ ವ್ಯವಸ್ಥೆಗಳಿಗಿಂತ ಮರಾಠ ಆಡಳಿತ ವ್ಯವಸ್ಥೆ ಹೇಗೆ ವ್ಯತ್ಯಸ್ತವಾಗಿತ್ತು? ಚರ್ಚಿಸಿರಿ.

ಭಾರತದಲ್ಲಿ ಜಾರಿಯಲ್ಲಿದ್ದ ಆಡಳಿತ ವ್ಯವಸ್ಥೆಯಲ್ಲಿ ಮೂಲಭೂತವಾದ ಹಲವಾರು ಬದಲಾವಣೆಗಳು ಮಧ್ಯಕಾಲದಲ್ಲಿ ಉಂಟಾದುವು. ಆ ಕಾಲದಲ್ಲಿ ಆವಿಷ್ಕರಿಸಿದ ಆಡಳಿತ ರೀತಿಗಳ ಪ್ರಭಾವವು ಇಂದಿನ ಆಡಳಿತ ರೀತಿಯಲ್ಲಿ ಕಾಣಬಹುದಾಗಿದೆ.

ಮಧ್ಯಕಾಲದ ಭಾರತದಲ್ಲಿ ನೆಲೆನಿಂತಿದ್ದ ವಿವಿಧ ಆಡಳಿತ ವಿಧಾನಗಳ ಕುರಿತು ವಿಚಾರಗೋಷ್ಠಿಯೊಂದನ್ನು ತಯಾರಿಸಿರಿ.

## ಮಧ್ಯಕಾಲೀನ ಭಾರತ : ರಾಜಪ್ರಭುತ್ವ ಮತ್ತು ಆಡಳಿತ ನೀತಿ

- **ಸುಲ್ತಾನರ ಆಡಳಿತ** → ಕೇಂದ್ರಾಡಳಿತ → ಪ್ರಾದೇಶಿಕ ಆಡಳಿತ → ಇಖ್ತಾ ಸಂಪ್ರದಾಯ → ಮಾರುಕಟ್ಟೆ ಸುಧಾರಣೆ
- **ಮೊಘಲರ ಆಡಳಿತ** → ಕೇಂದ್ರಾಡಳಿತ → ಪ್ರಾದೇಶಿಕ ಆಡಳಿತ → ದಿನ್ - ಇ- ಇಲಾಹಿ → ಮಾನ್‌ಸಬ್ದಾರಿ → ಜಾಗೀರ್‌ದಾರಿ
- **ಚೋಳರ ಆಡಳಿತ** → ಕೇಂದ್ರಾಡಳಿತ → ಗ್ರಾಮ ಸ್ವಯಂ ಆಡಳಿತ
- **ವಿಜಯನಗರ ಆಡಳಿತ** → ಕೇಂದ್ರಾಡಳಿತ (ನಾಯಂಕರ ಸಂಪ್ರದಾಯ) → ಪ್ರಾದೇಶಿಕ ಆಡಳಿತ (ಅಯ್ಯಂಗಾರ್ ಸಂಪ್ರದಾಯ)
- **ಮರಾಠ ಆಡಳಿತ** → ಕೇಂದ್ರಾಡಳಿತ (ಅಷ್ಟಪ್ರಧಾನರು) → ಪ್ರಾದೇಶಿಕ ಆಡಳಿತ

### ಪ್ರಧಾನ ಕಲಿಕಾ ಸಾಧನೆಗಳಲ್ಲಿ ಒಳಪಡುವವುಗಳು

- ಸುಲ್ತಾನರ ಆಡಳಿತ ರೀತಿಯ ವಿಶೇಷತೆಗಳನ್ನು ತಿಳಿದುಕೊಳ್ಳುವರು.
- ಸುಲ್ತಾನರ ಆಡಳಿತ ಹಾಗೂ ಮೊಘಲ್ ಆಡಳಿತಗಳ ವಿಶೇಷತೆಗಳನ್ನು ಹೋಲಿಸುವರು.
- 'ಮಾನ್‌ಸಬ್ದಾರಿ' ಸಂಪ್ರದಾಯವನ್ನು ವಿಶ್ಲೇಷಿಸಿ, ಮೊಘಲ್ ಆಡಳಿತ ಕಾಲದ ಸೈನಿಕ ಸಂಘಟನೆಯ ವಿಶೇಷತೆಗಳನ್ನು ಕಂಡುಹಿಡಿಯುವರು.
- ಮಧ್ಯಕಾಲದಲ್ಲಿ ದಕ್ಷಿಣ ಭಾರತದಲ್ಲಿ ಆಡಳಿತ ನಡೆಸಿದ ಚೋಳರಾಜರ ಆಡಳಿತದ ವಿಶೇಷತೆಗಳನ್ನು ವಿಶದೀಕರಿಸುವರು.

- ಚೋಳರ ಕಾಲದಲ್ಲಿ ನೆಲೆನಿಂತಿದ್ದ ಗ್ರಾಮೀಣ ಸ್ವಯಂ ಆಡಳಿತ ವ್ಯವಸ್ಥೆಯ ವಿಶೇಷತೆಗಳನ್ನು ತಿಳಿದುಕೊಂಡು ಇಂದಿನ ಪಂಚಾಯತ್‌ರಾಜ್, ನಗರಪಾಲಿಕೆ ವ್ಯವಸ್ಥೆಯೊಂದಿಗೆ ಹೋಲಿಸುವರು.
- ವಿಜಯನಗರ ಸಾಮ್ರಾಜ್ಯದಲ್ಲಿ ನೆಲೆನಿಂತಿದ್ದ ಆಡಳಿತ ರೀತಿಯ ವಿಶೇಷತೆಗಳನ್ನು ತಿಳಿದುಕೊಳ್ಳುವರು.
- ಮರಾಠ ಆಡಳಿತ ವ್ಯವಸ್ಥೆಯ ವಿಶೇಷತೆಗಳನ್ನು ವಿಶ್ಲೇಷಿಸುವರು.

## ಮೌಲ್ಯನಿರ್ಣಯ ಮಾಡುವ

- ಭಾರತದಲ್ಲಿ ಒಂದು ಕೇಂದ್ರೀಕೃತ ಆಡಳಿತ ನೀತಿಯನ್ನು ಜಾರಿಗೊಳಿಸಲು ಸುಲ್ತಾನರ ಕಾಲದಲ್ಲಿ ಆಡಳಿತಾಧಿಕಾರಿಗಳನ್ನು ಪ್ರೇರೇಪಿಸಿದ ಸನ್ನಿವೇಶಗಳು ಯಾವುವು?
- ಅಕ್ಬರ್ ಜಾರಿಗೊಳಿಸಿದ ಮಾನ್‌ಸಬ್ದಾರಿ ಸಂಪ್ರದಾಯದ ವಿಶೇಷತೆಗಳನ್ನು ಅವಲೋಕಿಸಿರಿ.
- 'ಎ' ವಿಭಾಗವನ್ನು 'ಬಿ' ವಿಭಾಗಕ್ಕೆ ಕ್ರಮಬದ್ಧಗೊಳಿಸಿರಿ.

| ಎ | ಬಿ |
|---|---|
| ಮಾನ್‌ಸಬ್ದಾರಿ ಸಂಪ್ರದಾಯ | ಚೋಳರ ಆಡಳಿತ |
| ಇಖ್ತಾ ಸಂಪ್ರದಾಯ | ಶಿವಾಜಿ |
| ಗ್ರಾಮ ಸ್ವಯಂ ಆಡಳಿತ | ಕೃಷ್ಣದೇವರಾಯ |
| ಅಷ್ಟಪ್ರಧಾನ್ ಕೌನ್ಸಿಲ್ | ಸುಲ್ತಾನರ ಆಡಳಿತ |
| ಅಮುಕ್ತಮಾಲ್ಯದ | ಅಕ್ಬರ್ |

- ವಿಜಯನಗರ ಆಡಳಿತ ಕಾಲದಲ್ಲಿ ಜಾರಿಗೊಳಿಸಿದ 'ನಾಯಂಕರ', 'ಅಯ್ಯಂಗಾರ್' ವ್ಯವಸ್ಥೆಗಳ ಕುರಿತು ಟಿಪ್ಪಣಿ ತಯಾರಿಸಿರಿ.
- ಮರಾಠ ಆಡಳಿತ ಕಾಲದಲ್ಲಿ ಜಾರಿಯಲ್ಲಿದ್ದ 'ಅಷ್ಟಪ್ರಧಾನ್' ಕೌನ್ಸಿಲಿನ ಬಗ್ಗೆ ಒಂದು ಲಘು ಟಿಪ್ಪಣಿ ತಯಾರಿಸಿರಿ.

## ಮುಂದುವರಿದ ಚಟುವಟಿಕೆಗಳು

- ಮಧ್ಯಕಾಲದ ಭಾರತದಲ್ಲಿ ನೆಲೆನಿಂತಿದ್ದ ವಿವಿಧ ಆಡಳಿತ ವಿಧಾನಗಳ ಕುರಿತು ಒಂದು ಪ್ರಬಂಧ ತಯಾರಿಸಿರಿ.
- ಇಂಟರ್‌ನೆಟ್‌ನ ಸಹಾಯದಿಂದ ಮಧ್ಯಕಾಲೀನ ಭಾರತದ ಪ್ರಧಾನ ಆಡಳಿತಾಧಿಕಾರಿಗಳ ಹಾಗೂ ಆಡಳಿತ ಕೇಂದ್ರಗಳ ಚಿತ್ರಗಳನ್ನು ಸಂಗ್ರಹಿಸಿ ಸಮಾಜಶಾಸ್ತ್ರ ಪ್ರಯೋಗಶಾಲೆಯಲ್ಲಿ ಒಂದು ಡಿಜಿಟಲ್ ಆಲ್ಬಂ ತಯಾರಿಸಿರಿ.



ಅಧ್ಯಾಯ

05



# ಸಂಪತ್ತು ಮತ್ತು ಸಮಾಜ

> ಜಗತ್ತಿನಾದ್ಯಂತ ವ್ಯಾಪಾರದ ಮೂಲಕ ವಿನಿಮಯವಾಗುತ್ತಿದ್ದ ಬೆಳ್ಳಿ ಹಾಗೂ ಚಿನ್ನವು ಕೊನೆಗೆ ಬಂದು ತಲುಪಿದುದು ಭಾರತಕ್ಕೆ. ಅಮೇರಿಕಾ ತೀರದಿಂದ ಯುರೋಪಿಯನರು ಸಂಗ್ರಹಿಸಿದ ಚಿನ್ನ ಹಾಗೂ ಬೆಳ್ಳಿಯು ವ್ಯಾಪಾರದ ಮೂಲಕ ತುರ್ಕಿ ಮತ್ತು ಪರ್ಶಿಯಾಕ್ಕೆ ತಲುಪುತ್ತದೆ. ಅಲ್ಲಿಂದ ಕೊನೆಗೆ ಹಿಂದುಸ್ಥಾನಕ್ಕೆ.
>
> **ಜಿಯೋವನಿ ಸೆರಾರಿ**

ಮೇಲೆ ನೀಡಿರುವುದು 17ನೇ ಶತಮಾನದಲ್ಲಿ ಭಾರತವನ್ನು ಸಂದರ್ಶಿಸಿದ ಇಟೆಲಿಯ ಪ್ರವಾಸಿಗನಾದ ಜಿಯೊವನಿ ಸೆರಾರಿಯ ಒಂದು ನಿರೀಕ್ಷಣೆಯಾಗಿದೆ.

ಭಾರತವು ಮಧ್ಯಕಾಲದ ಜಾಗತಿಕ ವ್ಯಾಪಾರದ ಪ್ರಧಾನ ಕೇಂದ್ರವಾಗಿತ್ತೆಂದು ಇದರಿಂದ ಸ್ಪಷ್ಟವಾಗುತ್ತದೆಯಲ್ಲವೇ. ಕೃಷಿ ಅಭಿವೃದ್ಧಿಯ ಮೂಲಕ ಗಳಿಸಿದ ಸಂಪತ್ತು ಜಗತ್ತಿನ ವಿವಿಧ ಭಾಗಗಳಿಂದ ವ್ಯಾಪಾರಿಗಳನ್ನು ಭಾರತಕ್ಕೆ ಬರುವಂತೆ ಆಕರ್ಷಿಸಿತು. ಆ ಕಾಲದಲ್ಲಿ ಭಾರತವು ಕೃಷಿಯಲ್ಲಿ ಅಭಿವೃದ್ಧಿಯನ್ನು ಗಳಿಸಿದ್ದು ಹೇಗೆಂಬುದನ್ನು ನೋಡೋಣ.

## ಮಧ್ಯಕಾಲ ಭಾರತದ ಕೃಷಿ ಅಭಿವೃದ್ಧಿ

14ನೇ ಶತಮಾನದಲ್ಲಿ ಭಾರತಕ್ಕೆ ಆಗಮಿಸಿದ ಇಬನ್ ಬತೂತನು (Iban battuta) ಅಂದಿನ ಕೃಷಿ ಅಭಿವೃದ್ಧಿಯ ಕುರಿತು ಕಿತಾ-ಬುಲ್-ರಿಹ್‌ಲ (Kitab -ul-Rihala) ಎಂಬ ಗ್ರಂಥದಲ್ಲಿ ವಿವರಿಸಿದ್ದಾನೆ. ಗದ್ದೆಗಳಲ್ಲಿ ವರ್ಷಕ್ಕೆ ಮೂರು ಸಲ ಕೃಷಿ ಮಾಡುತ್ತಿದ್ದರೆಂದು ಈ ಗ್ರಂಥದಲ್ಲಿ ಉಲ್ಲೇಖಿಸಲಾಗಿದೆ. ಭತ್ತ, ಗೋಧಿ, ಬಾರ್ಲಿ, ಕಬ್ಬು, ಹತ್ತಿ, ಎಣ್ಣೆಬೀಜಗಳು, ನೀಲ ಮುಂತಾದ ಬೆಳೆಗಳನ್ನು ಪ್ರಧಾನವಾಗಿ ಕೃಷಿ ಮಾಡುತ್ತಿದ್ದರು. ಆಡಳಿತಾಧಿಕಾರಿಗಳು ಕೃಷಿ ಅಭಿವೃದ್ಧಿಗೆ ಪೂರಕವಾದ ಎಲ್ಲ ಸೌಕರ್ಯಗಳನ್ನು ಒದಗಿಸಿದ್ದರು. ಸುಲ್ತಾನರ ರಾಜನಾದ ಬಾಲ್ಬನ್ ಕೃಷಿ ಅಭಿವೃದ್ಧಿಗಾಗಿ ದೋವಬ್ ಪ್ರದೇಶವನ್ನು (ಗಂಗಾ, ಯಮುನಾ ನದಿಗಳ ಮಧ್ಯದಲ್ಲಿರುವ ಪ್ರದೇಶ) ಕೃಷಿಕರಿಗೆ ವಿತರಿಸಿದನು. ಫಿರೋಜ್ ಷಾ ತುಗ್ಲಕ್ ನೀರಾವರಿಗಾಗಿ ಬಾವಿಗಳನ್ನು ನಿರ್ಮಿಸಲು ಕೃಷಿಕರಿಗೆ ಹಣವನ್ನು ಸಾಲವಾಗಿ ನೀಡಿದನು. ಯಮುನಾ ನದಿಯಿಂದ ಕೃಷಿ ಭೂಮಿಗಳಿಗೆ ನೀರು ಸರಬರಾಜಿಗಾಗಿ ಕಾಲುವೆಗಳನ್ನು ನಿರ್ಮಿಸಿದನು. ಇದರಿಂದಾಗಿ ಉತ್ಪಾದನೆ ಹಾಗೂ ಸಂಪತ್ತು ಹೆಚ್ಚಿತು.



### ವೈವಿಧ್ಯವಾದ ಭತ್ತದ ಬೀಜಗಳು

ಮೊಘಲರ ಆಡಳಿತಕಾಲದಲ್ಲಿ ದೆಹಲಿಯಲ್ಲಿ 48 ವ್ಯತ್ಯಸ್ತ ವಿಧದ ಭತ್ತವನ್ನು ಕೃಷಿ ಮಾಡುತ್ತಿದ್ದರು. ಬಂಗಾಳದಲ್ಲಿ 50 ತರದ ಬೀಜಗಳು. ಇವುಗಳಲ್ಲಿ ಹಲವು ಬೀಜಗಳನ್ನು ಇಂದಿಗೂ ಕೃಷಿಕರು ಕೃಷಿ ಮಾಡುತ್ತಿದ್ದಾರೆ. ಆ ಕಾಲದ ಭತ್ತದ ಬೀಜಗಳು ಅತಿ ಬರಗಾಲವನ್ನೂ ನೆರೆಯನ್ನೂ ಎದುರಿಸುವ ಸಾಮರ್ಥ್ಯವಿರುವವುಗಳಾಗಿದ್ದುವು.

ದೆಹಲಿ ಹಾಗೂ ಬಂಗಾಳಗಳಲ್ಲಿ ಕೃಷಿ ಮಾಡುತ್ತಿದ್ದ ವಿವಿಧ ತರದ ಭತ್ತದ ತಳಿಗಳ ಕುರಿತು ಅಬುಲ್ ಫಝುಲ್ ವಿವರಿಸಿದ್ದಾನೆ. ಆಗ್ರಾದಲ್ಲಿ 39 ವಿಧದ ಬೆಳೆಗಳನ್ನು ಕೃಷಿ ಮಾಡುತ್ತಿದ್ದರೆಂದು ಅವನು ಐನ್-ಎ- ಅಕ್ಬರಿಯಲ್ಲಿ ಬರೆದಿದ್ದಾನೆ.



ಪರ್ಶಿಯನ್ ಜಲಚಕ್ರದ ಮಾದರಿ

ಸ್ಪೈನ್, ಆಫ್ರಿಕಾ ಇತ್ಯಾದಿ ಸ್ಥಳಗಳಿಂದ ತಂದ ಜೋಳವು ಪಶ್ಚಿಮ ಭಾರತದ ಪ್ರಧಾನ ಬೆಳೆಯಾಗಿ ಬದಲಾದುವು. ಟೊಮೆಟೊ, ಮರಗೆಣಸು, ಮೆಣಸು, ಅನನಾಸು, ಪಪ್ಪಾಯಿ ಮುಂತಾದುವುಗಳು ಭಾರತದಲ್ಲಿ ವ್ಯಾಪಿಸಿದುವು.

ನೂತನ ಉಪಕರಣಗಳ ಹಾಗೂ ತಾಂತ್ರಿಕತೆಗಳ ಉಪಯೋಗವು ಕೃಷಿ ಅಭಿವೃದ್ಧಿಯನ್ನು ತ್ವರಿತಗೊಳಿಸಿತು. ನೀರಾವರಿಗಾಗಿ ಬಳಸಿದ ಪರ್ಶಿಯನ್ ಚಕ್ರವು ಉಪಕರಣಗಳಲ್ಲಿ ಪ್ರಧಾನವಾದುದಾಗಿದೆ. ಕಬ್ಬಿಣದ ಮೊನೆಯನ್ನು ಹೊಂದಿಸುವ ಕಡಿಮೆ ಭಾರದ ನೇಗಿಲನ್ನೂ ಬೀಜ ಬಿತ್ತನೆಗಾಗಿ ಡ್ರಿಲ್ ಎಂಬ ಉಪಕರಣವನ್ನೂ ಆ ಕಾಲದಲ್ಲಿ ಉಪಯೋಗಿಸುತ್ತಿದ್ದರು. ಇವುಗಳ ಬಳಕೆಗೆ ಎತ್ತುಗಳನ್ನು ಉಪಯೋಗಿಸುತ್ತಿದ್ದರು.



ಮಧ್ಯಕಾಲ ಭಾರತದ ಕೃಷಿ ಅಭಿವೃದ್ಧಿಗೆ ಸಂಬಂಧಿಸಿದ ಪಟ್ಟಿಯನ್ನು ಪೂರ್ತಿಗೊಳಿಸಿರಿ.

| ಬೆಳೆಗಳು | ಆಡಳಿತಾಧಿಕಾರಿಗಳ ಕ್ರಮಗಳು | ಉಪಕರಣಗಳು |
|---|---|---|
| ♦<br>♦<br>♦<br>♦<br>♦ | ♦<br>♦ | ♦<br>♦<br>♦ |

ಮಧ್ಯಕಾಲದ ಆರಂಭದಲ್ಲಿ ದಕ್ಷಿಣ ಭಾರತದಲ್ಲಿ ಆಡಳಿತ ನಡೆಸಿದ ಚೋಳರಾಜರು ಕೃಷಿ ಅಭಿವೃದ್ಧಿಗಾಗಿ ಅನೇಕ ಕ್ರಮಗಳನ್ನು ಕೈಗೊಂಡರು. ದಕ್ಷಿಣ ಭಾರತದಲ್ಲಿ ಕೃಷಿ ಅಭಿವೃದ್ಧಿಗೆ ಸಹಕರಿಸಿದ ಘಟಕಗಳು ಯಾವುವೆಂದು ನೋಡೋಣ.


*ಚೋಳರ ಕಾಲದಲ್ಲಿ ನೀರಾವರಿಗಾಗಿ ಉಪಯೋಗಿಸಿದ ಜಲಸಂಗ್ರಾಹಕ*

- ಕಾವೇರಿ ನದಿಯ ಜಲ ಸಮೃದ್ಧಿ.
- ಉಪನದಿಗಳ ಮೂಲಕ ಬಂದು ಸೇರುವ ಮೆಕ್ಕಲು ಮಣ್ಣು.
- ನೀರಾವರಿಗಾಗಿ ಚೋಳರಾಜರು ನಿರ್ಮಿಸಿದ ಕಾಲುವೆಗಳು.
- ಆ ಕಾಲದಲ್ಲಿ ಗ್ರಾಮಾಡಳಿತ ನಡೆಸಿದ ಸಭೆಗಳ ಅಧೀನದಲ್ಲಿ ಕೃಷಿ ಅಭಿವೃದ್ಧಿಯನ್ನು ಗುರಿಯಾಗಿಸಿಕೊಂಡು ಕಾರ್ಯವೆಸಗಿದ ಸಮಿತಿಗಳು.

**ಹಲವು ವಿಧದ ಕೃಷಿಭೂಮಿಗಳು**

ಇತಿಹಾಸದ ಮೂಲಗಳು ನೀಡುವ ಮಾಹಿತಿಗಳ ಆಧಾರದಲ್ಲಿ ಚೋಳರ ಆಡಳಿತ ಕಾಲದಲ್ಲಿ 4 ವಿಧದ ಕೃಷಿಭೂಮಿಗಳಿದ್ದುವು.

| | |
|---|---|
| ಬ್ರಹ್ಮದೇಯ | – ಬ್ರಾಹ್ಮಣರಿಗೆ ದಾನವಾಗಿ ಲಭಿಸಿದ ಭೂಮಿ. |
| ದೇವದಾನ | – ಕ್ಷೇತ್ರಗಳಿಗೆ(ದೇವಾಲಯಗಳಿಗೆ) ಲಭಿಸಿದ ಭೂಮಿ |
| ವೆಳ್ಳಾನ್‌ವಗೈ | – ಕೃಷಿಕರ ವಶದಲ್ಲಿದ್ದ ಭೂಮಿ. |
| ಪಳ್ಳಿಚ್ಚಾಂಡಂ | – ಜೈನರ ಸಂಸ್ಥೆಗಳಿಗೆ ನೀಡಿದ ಭೂಮಿ. |

**ದಕ್ಷಿಣ ಭಾರತದಲ್ಲಿ ಚೋಳರ ಆಡಳಿತಾವಧಿಯಲ್ಲಿ ಉಂಟಾದ ಕೃಷಿ ಪ್ರಗತಿಯನ್ನು ವಿಶ್ಲೇಷಿಸಿರಿ.**

## ಕೈಕಸುಬು ಮತ್ತು ಕರಕುಶಲ

ಕೃಷಿಯಲ್ಲದೆ ಇತರ ಯಾವ ಉಪಜೀವನ ಮಾರ್ಗಗಳನ್ನು ಮಧ್ಯಕಾಲ ಭಾರತದ ಜನರು ಸ್ವೀಕರಿಸಿದ್ದರೆಂಬುದನ್ನು ನೋಡೋಣ.

ಕೃಷಿ ಉತ್ಪನ್ನಗಳನ್ನು ಆಶ್ರಯಿಸಿ ಹಲವು ಕೈಗಾರಿಕೆಗಳು ನೆಲೆನಿಂತಿದ್ದುವು. ಉದಾಹರಣೆಗೆ ಎಣ್ಣೆಬೀಜ, ನೀಲ, ಹತ್ತಿ, ಎಣ್ಣೆ ತೆಗೆಯುವುದು (ಗಾಣ), ಬೆಲ್ಲ ತಯಾರಿ, ಬಟ್ಟೆನೆಯ್ಗೆ, ಬಟ್ಟೆಗಳಿಗೆ ಬಣ್ಣ ಹಾಕುವುದು ಇತ್ಯಾದಿಗಳು ಕಿರು ಕೈಗಾರಿಕೆಗಳ ಬೆಳವಣಿಗೆಗೆ ದಾರಿ ಮಾಡಿಕೊಟ್ಟಿತು. ಬಟ್ಟೆ ತಯಾರಿ ಇವುಗಳಲ್ಲಿ ಪ್ರಧಾನವಾದುದಾಗಿತ್ತು.

### ಆರಂಭ ಕಾಲದ ಚರಕ



1350ರಲ್ಲಿ ಇಸಾಮಿ (Isami) ರಚಿಸಿದ 'ಫುತ್ತೂಹು ಸಲಾತ್ತಿನ್' ಎಂಬ ಕೃತಿಯಲ್ಲಿ ಚರಕದ ಕುರಿತಾದ ಮೊದಲ ಮಾಹಿತಿ ಲಭಿಸುತ್ತದೆ. ಮೇಲೆ ನೀಡಿದ ಚರಕದ ಚಿತ್ರವು 15ನೇ ಶತಮಾನದಲ್ಲಿ ರಚಿಸಿದ 'ಮಿಫ್ತ-ಹುಲ್-ಫಸಲ' ದಲ್ಲಿರುವುದಾಗಿದೆ.

ಬಟ್ಟೆ ತಯಾರಿ ಕ್ಷೇತ್ರದ ಪ್ರಗತಿಗೆ ಸಹಾಯಮಾಡಿದ ಪ್ರಧಾನ ಘಟಕವು ಚರಕದ ಉಪಯೋಗವಾಗಿದೆ. 14ನೇ ಶತಮಾನದಲ್ಲಿ ಭಾರತದಲ್ಲಿ ಚರಕವನ್ನು ಉಪಯೋಗಿಸಲು ಆರಂಭಿಸಿದರು. ಭಾರತದವರು ಈ ತಾಂತ್ರಿಕತೆಯನ್ನು ಚೀನಾದಿಂದ ಗಳಿಸಿದರು. ಚರಕದ ಉಪಯೋಗದಿಂದ ನೂಲು ನಿರ್ಮಾಣದಲ್ಲಿ 6 ಪಟ್ಟು ಹೆಚ್ಚಳವುಂಟಾಯಿತು.

ನೂಲು ತಯಾರಿಯೊಂದಿಗೆ ನೆಯ್ಗೆಯಲ್ಲಿಯೂ ಆ ಕಾಲದಲ್ಲಿ ಪ್ರಗತಿ ಉಂಟಾಯಿತು. ಮೆಟ್ಟಿ ಚಲಿಸುವ ನೆಯ್ಗೆ ಯಂತ್ರದ (Loom) ಸಂಶೋಧನೆಯು ಬಟ್ಟೆ ತಯಾರಿಯಲ್ಲಿ ಬಹುದೊಡ್ಡ ಬದಲಾವಣೆಯನ್ನುಂಟುಮಾಡಿತು. ರೇಶ್ಮೆ ಗೂಡಿನಿಂದ ನೂಲು ತೆಗೆಯುವ ತಾಂತ್ರಿಕತೆಯು ಆ ಕಾಲದಲ್ಲಿ ಪ್ರಚಾರಗೊಂಡಿತು. 14ನೇ ಶತಮಾನದಲ್ಲಿ ಬಂಗಾಳದಲ್ಲಿ ಇದು ಆರಂಭವಾಯಿತು.

ಜಮಖಾನೆ, ಕಾಗದ ಇತ್ಯಾದಿಗಳ ತಯಾರಿಯು ಕರಕುಶಲ ವಲಯಗಳ ಇತರ ಪ್ರಧಾನ ಉದ್ಯೋಗಗಳಾಗಿವೆ. ಭಾರತದಲ್ಲಿ ತಯಾರಿಸಿದ ಜಮಖಾನೆಯು ವಿದೇಶಿ ಮಾರುಕಟ್ಟೆಗಳಲ್ಲಿ ಹೆಚ್ಚು ಪ್ರಚಾರಗಳಿಸಿತು.



ಸಾಂಬಾರ್ ಸರೋವರದಲ್ಲಿ ಉಪ್ಪು ತಯಾರಿ

ಭಾರತದಲ್ಲಿ 13ನೇ ಶತಮಾನದಿಂದಲೇ ಕಾಗದದ ಉಪಯೋಗವು ಆರಂಭಗೊಂಡಿತ್ತು. ಲೋಹ ಸಂಸ್ಕರಣೆ, ಗನಿಗಾರಿಕೆ, ಕೈಗಾರಿಕೆ ಇತ್ಯಾದಿಗಳು ಆ ಕಾಲದಲ್ಲಿ ಅಭಿವೃದ್ಧಿ ಹೊಂದಿದ್ದುವು. ಲೋಹ ಸಂಸ್ಕರಣೆ ಕ್ಷೇತ್ರಗಳಲ್ಲಿ ತೊಡಗಿಸಿಕೊಂಡವರು ಪ್ರಧಾನವಾಗಿ ಕೃಷಿ ಉಪಕರಣಗಳು ಹಾಗೂ ಯುದ್ಧೋಪಕರಣಗಳನ್ನು ನಿರ್ಮಿಸಿದರು. ಕಬ್ಬಿಣದ ಲಾಳ (Horse Shoe), ಸವಾರರಿಗೆ ಕಾಲಿಡಲು ಕುದುರೆಯ ಹೊಟ್ಟೆಯ ಕೆಳಭಾಗದಲ್ಲಿ ತೂಗುವ ಕಬ್ಬಿಣದ ಮೆಟ್ಟಲು (Iron Stirrup) ಎಂಬಿವುಗಳು ಯುದ್ಧರಂಗದಲ್ಲಿ ದೊಡ್ಡ ಬದಲಾವಣೆಯನ್ನುಂಟುಮಾಡಿದುವು. ರಾಜಸ್ಥಾನದಿಂದ ಹಿತ್ತಾಳೆ, ಗೋಲ್ಕೊಂಡದಿಂದ ರತ್ನವನ್ನು ಖನನ ಮಾಡುತ್ತಿದ್ದರು. ಉಪ್ಪು ತಯಾರಿಯು ಅಭಿವೃದ್ಧಿ ಹೊಂದಿದ ಇನ್ನೊಂದು ಉದ್ಯೋಗವಾಗಿತ್ತು. ಸಮುದ್ರ ತೀರಗಳು, ಉಪ್ಪಿನ ಬಂಡೆಗಳು, ಉಪ್ಪಿನ ಸರೋವರಗಳು ಇತ್ಯಾದಿಗಳು ಉಪ್ಪಿನ ಮೂಲಗಳಾಗಿದ್ದವು. ಪಶ್ಚಿಮ ಪಂಜಾಬ್ ಮತ್ತು ರಾಜಸ್ಥಾನದ ಸಾಂಬಾರ್ ಉಪ್ಪು ನಿರ್ಮಾಣ ಕೇಂದ್ರಗಳಾಗಿದ್ದುವು.

ತಾಂತ್ರಿಕತೆಯಲ್ಲಿ ಉಂಟಾದ ಪ್ರಗತಿಯು ಉದ್ಯೋಗ ರಂಗಕ್ಕೆ ಹೇಗೆ ಸಹಾಯಕವಾಯಿತು. ಚರ್ಚಿಸಿ ಟಿಪ್ಪಣಿ ತಯಾರಿಸಿರಿ.

## ವಾಣಿಜ್ಯ ಮತ್ತು ವ್ಯಾಪಾರ

ಉತ್ಪಾದನ ಕ್ಷೇತ್ರದಲ್ಲಿ ಉಂಟಾದ ಮಿಗತೆಯು ವಾಣಿಜ್ಯದ ಬೆಳವಣಿಗೆಗೆ ಸಹಾಯಮಾಡಿತು. ಭಾರತದ ವ್ಯಾಪಾರ ಕೇಂದ್ರಗಳು ಜಗತ್ತಿನ ವಿವಿಧ ಭಾಗಗಳ ಜನರನ್ನು ಆಕರ್ಷಿಸಿತು. ಮಧ್ಯಕಾಲದಲ್ಲಿ ಭಾರತದೊಂದಿಗೆ ವ್ಯಾಪಾರ ಸಂಪರ್ಕವನ್ನು ಹೊಂದಿದ್ದ ಪ್ರಧಾನ ದೇಶಗಳನ್ನು ಕೆಳಗಿನ ತಖ್ತೆಯಲ್ಲಿ ನೀಡಲಾಗಿದೆ.

- ಸುಮಾತ್ರ, ಜಾವ (ಇಂಡೋನೇಶ್ಯಾ)
- ಚೀನಾ
- ಪರ್ಶಿಯ (ಇರಾನ್)
- ಪೋರ್ಚುಗಲ್
- ಹೋಲೆಂಡ್
- ಇಂಗ್ಲೆಂಡ್
- ಫ್ರಾನ್ಸ್

ಅಟ್ಲಸಿನ ಸಹಾಯದಿಂದ ತಖ್ತೆಯಲ್ಲಿ ನೀಡಿರುವ ದೇಶಗಳ ಸ್ಥಾನವನ್ನು ಕಂಡುಹಿಡಿದು ಜಾಗತಿಕ ಭೂಪಟದಲ್ಲಿ ಗುರುತಿಸಿರಿ.





ಭಾರತಕ್ಕೆ ಆ ಕಾಲದಲ್ಲಿ ನೆಲಮಾರ್ಗ ಹಾಗೂ ಸಮುದ್ರ ಮಾರ್ಗಗಳ ಮೂಲಕ ವಿದೇಶ ವ್ಯಾಪಾರ ಸಂಬಂಧವಿತ್ತು. ಲಾಹೋರಿನಿಂದ (ಈಗಿನ ಪಾಕಿಸ್ತಾನ) ಕಾಬೂಲಿನವರೆಗೂ (ಈಗಿನ ಅಫಘಾನಿಸ್ತಾನ),ಮುಲ್ತಾನ್‌ನಿಂದ (ಈಗಿನ ಪಾಕಿಸ್ತಾನ) ಕಂದಹಾರದವರೆಗೂ (ಈಗಿನ ಅಫಘಾನಿಸ್ತಾನ) ನೆಲಭಾಗದ ಮೂಲಕವಿದ್ದ ಎರಡು ಪ್ರಧಾನ ವ್ಯಾಪಾರ ಮಾರ್ಗಗಳಾಗಿದ್ದುವು. ಸಮುದ್ರದ ಮೂಲಕವಿರುವ ವ್ಯಾಪಾರವನ್ನು ತೀರಪ್ರದೇಶ ವಾಣಿಜ್ಯವೆಂದು ಕರೆಯುತ್ತಿದ್ದರು. ಕಾಂಬೆ, ಬ್ರೋಚ್, ಸೂರತ್, ಗೋವ, ನಾಗಪಟ್ಟಣ, ಮಸುಲಿ ಪಟ್ಟಣ, ಕಲ್ಲಿಕೋಟೆ ಮುಂತಾದವುಗಳು ಪ್ರಧಾನ ಬಂದರುಗಳಾಗಿದ್ದುವು.

ಮಧ್ಯಕಾಲದ ಪ್ರಧಾನ ಬಂದರುಗಳನ್ನು ಕಂಡುಹಿಡಿದು ಭಾರತದ ಭೂಪಟದಲ್ಲಿ ಗುರುತಿಸಿರಿ. ಈಗ ಅವು ಯಾವ ಯಾವ ಪ್ರಾಂತ್ಯಗಳಲ್ಲಿವೆ?



ಆ ಕಾಲದ ಪ್ರಧಾನ ವ್ಯಾಪಾರ ವಿಭಾಗಗಳನ್ನು ಮತ್ತು ಅವರನ್ನೊಳಗೊಂಡ ವಲಯಗಳು ಯಾವುವು ಎಂದು ಕೆಳಗೆ ನೀಡಿರುವ ತಖ್ತೆಯಿಂದ ತಿಳಿದುಕೊಳ್ಳೋಣ.




ಹತ್ತಿಬಟ್ಟೆಗಳು, ನೀಲ, ಉಪ್ಪು, ಸಕ್ಕರೆ ಇತ್ಯಾದಿಗಳನ್ನು ಪ್ರಧಾನವಾಗಿ ಭಾರತದಿಂದ ರಫ್ತು ಮಾಡಲಾಗುತ್ತಿತ್ತು. ಲೋಹಗಳು, ಚರ್ಮ, ವೆಲ್ವೆಟ್, ಒಣಗಿಸಿದ ಹಣ್ಣುಗಳು ಮತ್ತು ಕುದುರೆಗಳು ಪ್ರಧಾನವಾದ ಆಮದುಗಳಾಗಿದ್ದುವು. ಅರಬರ ಮೂಲಕ ಮಧ್ಯ ಏಷ್ಯಾದ ದೇಶಗಳಿಂದ ಕುದುರೆಗಳನ್ನು ಭಾರತಕ್ಕೆ ಆಮದು ಮಾಡುತ್ತಿದ್ದರು. ಕುದುರೆಗಳ ವ್ಯಾಪಾರ ನಡೆಸುತ್ತಿದ್ದವರನ್ನು ದಕ್ಷಿಣ ಭಾರತದಲ್ಲಿ 'ಕುದುರೆ ವ್ಯಾಪಾರಿಗಳು' ಎಂಬ ಹೆಸರಿನಿಂದ ಕರೆಯುತ್ತಿದ್ದರು. ಆರಂಭದಲ್ಲಿ ಈ ವ್ಯಾಪಾರವು ಅರಬರ ನಿಯಂತ್ರಣದಲ್ಲಿತ್ತು. ಪೋರ್ಚುಗೀಸರ ಆಗಮನದಿಂದ ಅರಬರು ಹಿಂದಕ್ಕೆ ತಳ್ಳಲ್ಪಟ್ಟು ಅವರ ಸ್ಥಾನವನ್ನು ಪೋರ್ಚುಗೀಸರು ವಶಪಡಿಸಿಕೊಂಡರು.

1498ರಲ್ಲಿ ವಾಸ್ಕೋಡಗಾಮನು ಕಲ್ಲಿಕೋಟೆಯನ್ನು ತಲುಪಿದ ನಂತರ ಭಾರತ ಹಾಗೂ ಯುರೋಪಿನ ಮಧ್ಯೆ ನೇರ ವ್ಯಾಪಾರವು ಆರಂಭಗೊಂಡಿತು. ಪೋರ್ಚುಗೀಸರ ನಂತರ ಡಚ್ಚರು, ಫ್ರೆಂಚರು, ಇಂಗ್ಲೀಷರು ವ್ಯಾಪಾರಕ್ಕಾಗಿ ಭಾರತವನ್ನು ತಲುಪಿದರು. ಸುಗಂಧ ದ್ರವ್ಯಗಳು, ಬಟ್ಟೆಬರೆಗಳು, ನೀಲ, ಸಕ್ಕರೆ, ಉಪ್ಪು ಮುಂತಾದುವುಗಳನ್ನು ಭಾರತದಿಂದ ಸಂಗ್ರಹಿಸಿದರು. ಯುರೋಪಿಯನರು ಏಕಸ್ವಾಮ್ಯ ವ್ಯಾಪಾರಕ್ಕಾಗಿ ಸ್ಪರ್ಧೆ ನಡೆಸಿದುದು ಈ ಕಾಲದ ವ್ಯಾಪಾರದ ಪ್ರಧಾನ ವಿಶೇಷತೆಯಾಗಿದೆ. ಈ ಸ್ಪರ್ಧೆಯಲ್ಲಿ ಇಂಗ್ಲೀಷರು ಗೆಲುವನ್ನು ಸಾಧಿಸಿದರು.

ವ್ಯಾಪಾರ ಅಭಿವೃದ್ಧಿಗಾಗಿ ಆಡಳಿತಾಧಿಕಾರಿಗಳು ವಿವಿಧ ಕ್ರಮಗಳನ್ನು ಕೈಗೊಂಡರು. ಅವುಗಳಲ್ಲಿ ಕೆಲವನ್ನು ಕೆಳಗೆ ನೀಡಲಾಗಿದೆ.

- ಪ್ರಧಾನ ನಗರಗಳನ್ನು ಜೋಡಿಸಿಕೊಂಡು ರಸ್ತೆಗಳನ್ನು ನಿರ್ಮಿಸಿದರು.
- ವ್ಯಾಪಾರಿಗಳಿಗೆ ಸಾಲವನ್ನು ನೀಡಿದರು.
- ಸರಾಯಿಗಳನ್ನು (ವಿಶ್ರಾಂತಿ ಕೇಂದ್ರಗಳನ್ನು) ಸ್ಥಾಪಿಸಿದರು.



### ಉಲ್ಲೂಖು ಮತ್ತು ದಾವ

ಉಲ್ಲೂಖು ಮತ್ತು ದಾವಗಳು ಭಾರತದಲ್ಲಿ ಜಾರಿಯಲ್ಲಿದ್ದ ಎರಡು ಅಂಚೆ ವ್ಯವಸ್ಥೆಗಳಾಗಿದ್ದುವು. ಕುದುರೆಗಳನ್ನುಪಯೋಗಿಸಿ ಅಂಚೆ ವಿಲೇವಾರಿ ನಡೆಸುತ್ತಿದ್ದುದೇ ಉಲ್ಲೂಖು. ದಾವ ಎಂದರೆ ಕಾಲ್ನಡಿಗೆಯಿಂದ ಅಂಚೆ ವಿಲೇವಾರಿ ವ್ಯವಸ್ಥೆಯಾಗಿತ್ತು. ಈ ವ್ಯವಸ್ಥೆಯಲ್ಲಿ ಪ್ರತಿಯೊಂದು ಮೈಲಿಗೆ ಮೂರರಂತೆ ಕೇಂದ್ರಗಳಿದ್ದವು.

- ಏಕೀಕೃತ ತೆರಿಗೆ ವ್ಯವಸ್ಥೆಯನ್ನು ಜಾರಿಗೊಳಿಸಿದರು.
- ಕಾರ್ಯದಕ್ಷತೆಯಿಂದ ಕೂಡಿದ ಅಂಚೆ ವ್ಯವಸ್ಥೆಯನ್ನು ಜಾರಿಗೊಳಿಸಿದರು.
- ಕಾರ್ಯದಕ್ಷತೆಯ ನಾಣ್ಯ ವ್ಯವಸ್ಥೆಯನ್ನು ಜಾರಿಗೊಳಿಸಿದರು.

ಸುಲ್ತಾನರ ಕಾಲದಲ್ಲಿ ಕಾರ್ಯದಕ್ಷತೆಯಿಂದ ಕೂಡಿದ ನಾಣ್ಯ ವ್ಯವಸ್ಥೆಯಿತ್ತು. 'ತಂಗ' ಎಂಬ ಬೆಳ್ಳಿ ನಾಣ್ಯ ಹಾಗೂ 'ಜೀತಲ್' ಎಂಬ ಕಂಚಿನ ನಾಣ್ಯಗಳು ಆ ಕಾಲದಲ್ಲಿ ಪ್ರಚಾರದಲ್ಲಿದ್ದುವು. ಷೇರ್‌ಷಹ ನಾಣ್ಯ ವ್ಯವಸ್ಥೆಯಲ್ಲಿ ಉತ್ತಮವಾದ ಸುಧಾರಣೆಗಳನ್ನು ತಂದನು. ಅವನು ಪ್ರಚಾರಕ್ಕೆ ತಂದ ಬೆಳ್ಳಿ ನಾಣ್ಯವಾದ 'ರುಪಿ' ದೀರ್ಘಕಾಲ ಚಲಾವಣೆಯಲ್ಲಿತ್ತು. ಅಕ್ಬರ ಚಕ್ರವರ್ತಿಯು 'ಜಲಾಲಿ' ಎಂಬ ಹೆಸರಿನ ಬೆಳ್ಳಿ ನಾಣ್ಯವನ್ನು, 'ಇಲಾಹಿ' ಎಂಬ ಹೆಸರಿನ ಚಿನ್ನದ ನಾಣ್ಯವನ್ನು, 'ಪೈಸ' ಎಂಬ ಹೆಸರಿನ ಕಂಚಿನ ನಾಣ್ಯವನ್ನು ಜಾರಿಗೊಳಿಸಿದನು.



ಮಧ್ಯಕಾಲ ಭಾರತದಲ್ಲಿ ಪ್ರಚಾರದಲ್ಲಿದ್ದ ನಾಣ್ಯಗಳು

ಮಧ್ಯಕಾಲ ವಾಣಿಜ್ಯದ ಅಭಿವೃದ್ಧಿಯಲ್ಲಿ ಆಡಳಿತಾಧಿಕಾರಿಗಳು ವಹಿಸಿದ ಪಾತ್ರವನ್ನು ಚರ್ಚಿಸಿರಿ.



## ಮಧ್ಯಕಾಲ ಭಾರತದ ನಗರಗಳು

ಕೃಷಿ-ವಾಣಿಜ್ಯ ಅಭಿವೃದ್ಧಿಯು ನಗರಗಳ ಬೆಳವಣಿಗೆಯನ್ನು ತ್ವರಿತಗೊಳಿಸಿತು. ಮಧ್ಯಕಾಲದಲ್ಲಿ ನಗರದ ಜನಸಂಖ್ಯೆಯಲ್ಲಿ ತುಂಬಾ ಹೆಚ್ಚಳವುಂಟಾಯಿತು. ಹಿಂದೆ ರಾಜರು, ಬ್ರಾಹ್ಮಣರು, ಸೈನಿಕರು ಮಾತ್ರವೇ ನಗರದ ಪ್ರಧಾನ ಜನವಿಭಾಗದವರಾಗಿದ್ದರು. ಸುಲ್ತಾನರ ಕಾಲದಲ್ಲಿ ಚರ್ಮದ ಕೆಲಸಗಾರರು, ಅಡುಗೆಯವರು, ನೆಯ್ಗೆಯವರು ಮುಂತಾದ ವಿವಿಧ ಜನ ವಿಭಾಗದವರು ನಗರಗಳಿಗೆ ವಲಸೆ ಬಂದರು. ಆಗ್ರಾ, ಲಾಹೋರ್, ದೆಹಲಿ, ಖಾಂಡೇಷ್, ಅಹಮ್ಮದಾಬಾದ್, ಢಾಕಾ, ದೌಲತಾಬಾದ್, ಬನಾರಸ್ ಮುಂತಾದವುಗಳು ಪ್ರಧಾನ ನಗರಗಳಾಗಿದ್ದುವು.

ಯುದ್ಧದಲ್ಲಿ ಗೆದ್ದ ಆಡಳಿತಾಧಿಕಾರಿಗಳು (ರಾಜರು) ಯುದ್ಧ ಕೈದಿಗಳಾದ ಗುಲಾಮರನ್ನು ನಗರಗಳಿಗೆ ಕರೆತಂದರು. ಇದು ನಗರದ ಜನಸಂಖ್ಯೆ ಹೆಚ್ಚಾಗಲು ಕಾರಣವಾಯಿತು. ಹೀಗೆ ನಗರಗಳಿಗೆ ಬಂದು ತಲುಪಿದ ಜನವಿಭಾಗಗಳಿಂದ ಕರಕುಶಲ ಕೈಗಾರಿಕೆಗಳು ಅಭಿವೃದ್ಧಿಯನ್ನು ಹೊಂದಿದುವು. ನಗರಗಳಲ್ಲಿ ಕರಕುಶಲ ವಸ್ತುಗಳ ಪ್ರಧಾನ ನಿರ್ಮಾಣ ಕೇಂದ್ರಗಳಾಗಿದ್ದ ಕಾರ್ಖಾನೆಗಳ ಕುರಿತು ಹಿಂದಿನ ತರಗತಿಯಲ್ಲಿ ಪ್ರತಿಪಾದಿಸಲಾಗಿತ್ತಲ್ಲವೇ. ನಗರ ಜನಸಂಖ್ಯೆಯ ಹೆಚ್ಚಳಕ್ಕನುಸರಿಸಿ ಉತ್ಪನ್ನಗಳ ಅವಶ್ಯಕತೆಗಳೂ ಹೆಚ್ಚಾದುವು. ನಗರಗಳು ಗ್ರಾಮೀಣ ಉತ್ಪನ್ನಗಳನ್ನು ಹೆಚ್ಚಾಗಿ ಅವಲಂಬಿಸಬೇಕಾಗಿ ಬಂದುವು. ಇದು ಗ್ರಾಮೀಣ ಆರ್ಥಿಕ ವ್ಯವಸ್ಥೆಯನ್ನು ಬಲಪಡಿಸಿತು. ಪ್ರಧಾನ ಉತ್ಪಾದನಾ ಕೇಂದ್ರಗಳು ಗ್ರಾಮಗಳಾಗಿದ್ದುವಲ್ಲವೇ.

ಮಧ್ಯಕಾಲ ಭಾರತದ ನಗರಗಳ ಹಾಗೂ ಜನಸಂಖ್ಯೆಯ ಹೆಚ್ಚಳಕ್ಕೆ ಕಾರಣವಾದ ಘಟಕಗಳು ಯಾವುವು?



## ಮಧ್ಯಕಾಲ ಭಾರತದ ಸಮಾಜ

ಮಧ್ಯಕಾಲ ಭಾರತದ ಆರ್ಥಿಕ ಸ್ಥಿತಿಯ ಕುರಿತು ನಾವು ಈ ತನಕ ಚರ್ಚಿಸಿದೆವಲ್ಲವೇ. ಇನ್ನು ಆ ಕಾಲದ ಸಾಮಾಜಿಕ ಸನ್ನಿವೇಶಗಳನ್ನು ಪರಿಶೀಲಿಸೋಣ. ಮಧ್ಯಕಾಲ ಭಾರತದ ಸಮಾಜದಲ್ಲಿ ಮೇಲ್ವರ್ಗ, ಮಧ್ಯಮ ವರ್ಗ, ಹಾಗೂ ಕೆಳವರ್ಗ ಎಂಬ ಮೂರು ಹಂತಗಳಿದ್ದುವು.




ಜನರಲ್ಲಿ ಹೆಚ್ಚಿನವರು ಕೃಷಿಕರಾಗಿದ್ದರು. ಭೂಒಡೆಯರು ಸಾಮಾನ್ಯವಾಗಿ ಉತ್ತಮ ಜೀವನ ನಡೆಸುತ್ತಿದ್ದಾಗ ಬಹುಸಂಖ್ಯಾತರಾಗಿದ್ದ ಸಾಮಾನ್ಯ ಕೃಷಿಕರ ಜೀವನವು ಕಷ್ಟಕರವಾಗಿತ್ತು. ತೆರಿಗೆಯ ಭಾರವು ಅವರ ಹೆಗಲ ಮೇಲಿತ್ತು. ಬಹುಸಂಖ್ಯಾತ ಕೃಷಿಕರಿಗೆ ಸ್ವಂತವಾದ ಕೃಷಿ ಭೂಮಿಯೋ ಎತ್ತುಗಳೋ ನೇಗಿಲುಗಳೋ ಇರಲಿಲ್ಲ. ಇತಿಹಾಸದ ಪುರಾವೆಗಳು ನೀಡುವ ಮಾಹಿತಿಗಳ ಪ್ರಕಾರ ಮೊಘಲರ ಕಾಲದಲ್ಲಿ ಖುದ್-ಕಸ್ತ್ (Khud Kashta), ಪಾಹಿ-ಕಸ್ತ್ (pahi Kashta) ಎಂಬ ಎರಡು ರೀತಿಯ ಕೃಷಿಕರಿದ್ದರು.




ಮೊಘಲರ ಕಾಲದಲ್ಲಿ ಜಮೀನ್ದಾರರು ಕೃಷಿ ವಲಯದ ಪ್ರಬಲ ವಿಭಾಗದವರಾಗಿದ್ದರು. ಅವರು ವಿಶಾಲವಾದ ಕೃಷಿ ಭೂಮಿಗಳ ಒಡೆಯರಾಗಿದ್ದರು. ಆದರೆ ಅವರು ನೇರವಾಗಿ ಕೃಷಿ

ಮಾಡುತ್ತಿರಲಿಲ್ಲ. ಸಮಾಜದಲ್ಲಿ ಉನ್ನತ ಸ್ಥಾನದಲ್ಲಿದ್ದ ಜಮೀನ್ದಾರರು ಆಡಳಿತಾಧಿಕಾರಿಗಳಿಗೆ ಬೇಕಾಗಿ ತೆರಿಗೆಯನ್ನು ಸಂಗ್ರಹಿಸುತ್ತಿದ್ದರು. ಅವರಿಗೆ ಸ್ವಂತವಾದ ಕೋಟೆ ಹಾಗೂ ಸೈನ್ಯಗಳಿದ್ದುವು. ಉನ್ನತ ಜಾತಿಗೆ ಸೇರಿದ ಜಮೀನ್ದಾರರು ಭಾರತದ ವಿವಿಧ ಭಾಗಗಳಲ್ಲಿ ದೇಶ್‌ಮುಖ್, ಪಾಟೀಲ್, ನಾಯಕ್ ಮುಂತಾದ ಹೆಸರುಗಳಿಂದ ಕರೆಯಲ್ಪಡುತ್ತಿದ್ದರು.

"ಮಧ್ಯಕಾಲ ಭಾರತದ ಸಮಾಜವು ಅಸಮಾನತೆಯಿಂದ ಕೂಡಿತ್ತು." ಈ ಹೇಳಿಕೆಯನ್ನು ವಿಶ್ಲೇಷಿಸಿರಿ.

## ಗುಲಾಮ ಸಂಪ್ರದಾಯ


ಗುಲಾಮರ ಶೋಷಣೆ- ಚಿತ್ರಕಾರನ ಕಲ್ಪನೆಯಲ್ಲಿ

ಮಧ್ಯಕಾಲ ಭಾರತದ ಸಮಾಜದಲ್ಲಿ ಗುಲಾಮ ಸಂಪ್ರದಾಯವು ಜಾರಿಯಲ್ಲಿತ್ತೆಂದು ಆ ಕಾಲದಲ್ಲಿ ಭಾರತವನ್ನು ಸಂದರ್ಶಿಸಿದ ಪ್ರವಾಸಿಗರ ಟಿಪ್ಪಣಿಗಳು ವ್ಯಕ್ತಪಡಿಸುತ್ತವೆ. ಸಿ.ಇ. 14ನೇ ಶತಮಾನದಲ್ಲಿ ಭಾರತವನ್ನು ಸಂದರ್ಶಿಸಿದ ಇಬನ್‌ಬತೂತ ಅಂದಿನ ದೆಹಲಿಯ ರಾಜನಾಗಿದ್ದ ಮೊಹಮ್ಮದ್ ಬಿನ್ ತುಗ್ಲಕನನ್ನು ಗೌರವಿಸಲು ಕುದುರೆಗಳನ್ನೂ ಒಂಟೆಗಳನ್ನೂ ಗುಲಾಮರನ್ನೂ ಖರೀದಿಸಿದನೆಂದು ಹೇಳುತ್ತಾನೆ. ಅರಮನೆಯ ಗುಲಾಮರು ನೃತ್ಯ ಹಾಗೂ ಸಂಗೀತದಲ್ಲಿ ನಿಪುಣರಾಗಿದ್ದರೆಂದು ಅವನು ದಾಖಲಿಸಿದ್ದಾನೆ. ಗುಲಾಮರಿಗಾಗಿ ಪ್ರತ್ಯೇಕವಾದ ಗುಲಾಮ ಸಂತೆಗಳಿದ್ದುವು. ಗುಲಾಮರಲ್ಲಿ ಹೆಚ್ಚಿನವರು ಯುದ್ಧ ಕೈದಿಗಳಾಗಿ ಸೆರೆಸಿಕ್ಕವರಾಗಿದ್ದರು. ಇವರಲ್ಲದೆ ಆಫ್ರಿಕಾದಿಂದಲೂ ಗುಲಾಮರನ್ನು ಆಮದು ಮಾಡುತ್ತಿದ್ದರು.

## ಮಹಿಳೆಯರ ಪದವಿ


ಮಹಿಳೆಯರು ಕೆಲಸದಲ್ಲಿ (ಅಕ್ಬರ್‌ನಾಮ)

ಆ ಕಾಲದಲ್ಲಿ ಮಹಿಳೆಯರ ಸ್ಥಿತಿಯಲ್ಲಿ ದೊಡ್ಡ ಬದಲಾವಣೆಗಳುಂಟಾಗಿರಲಿಲ್ಲ. ಬಾಲ್ಯವಿವಾಹ, ಸತಿಪದ್ಧತಿಗಳು ದೇಶದ ವಿವಿಧ ಭಾಗಗಳಲ್ಲಿ ನೆಲೆನಿಂತಿದ್ದುವು. 17ನೇ ಶತಮಾನದಲ್ಲಿ ಭಾರತವನ್ನು ಸಂದರ್ಶಿಸಿದ ಫ್ರೆಂಚ್ ಪ್ರವಾಸಿಗನಾದ ಫ್ರಾಂಕೋಯಿಸ್ ಬರ್ನಿಯರ್ ಸತಿ ಅನುಷ್ಠಾನವನ್ನು ಕಣ್ಣಾರೆ ಕಂಡದ್ದಾಗಿ ಹೇಳಿದ್ದಾನೆ. ಪುನರ್ವಿವಾಹಕ್ಕೆ ನಿಯಂತ್ರಣಗಳಿದ್ದುವು. ಹೆಣ್ಣು ಮಕ್ಕಳು ಚಿಕ್ಕ ಪ್ರಾಯದಲ್ಲೇ ವಿವಾಹವಾಗುವುದರಿಂದ ಶಿಕ್ಷಣದ ಅವಕಾಶವು ಲಭಿಸಿರಲಿಲ್ಲ. ಕೃಷಿ-ಕೃಷಿಯೇತರ ವಲಯಗಳಲ್ಲಿ ಮಹಿಳೆಯರ ಪಾತ್ರವು ಪ್ರಧಾನವಾಗಿತ್ತು. ಬೀಜ ಬಿತ್ತುವುದರಿಂದ ಆರಂಭಗೊಂಡು ಕೊಯ್ಲಿನ ವರೆಗಿನ ಪ್ರತಿಯೊಂದು ಹಂತದಲ್ಲೂ ಅವರು ಪಾಲ್ಗೊಳ್ಳುತ್ತಿದ್ದರು. ನೂಲು ತೆಗೆಯುವುದು, ಮಣ್ಣಿನ ಪಾತ್ರೆ ನಿರ್ಮಾಣ, ವಸ್ತ್ರಾಲಂಕಾರ ಮುಂತಾದ ಕ್ಷೇತ್ರಗಳಲ್ಲೂ ಅವರು ಕೆಲಸ ನಿರ್ವಹಿಸುತ್ತಿದ್ದರು.

ಆ ಕಾಲದಲ್ಲಿ ಅನೇಕ ಮಹಿಳೆಯರು ಉನ್ನತ ರಾಜಕೀಯ – ಸಾಮಾಜಿಕ ಪದವಿಯನ್ನು ಹೊಂದಿದ್ದರು. ಸುಲ್ತಾನ್ ರಜಿಯಾ ಮತ್ತು ಮೊಘಲ್ ಚಕ್ರವರ್ತಿಯಾಗಿದ್ದ ಜಹಾಂಗೀರನ ಮಡದಿಯಾದ ನೂರ್‌ಜಹಾನ್ ಆಡಳಿತ ಕಾರ್ಯಗಳಲ್ಲಿ ತಮ್ಮ ಸಾಮರ್ಥ್ಯವನ್ನು ತೋರಿಸಿದ ಮಹಿಳೆಯರಾಗಿದ್ದಾರೆ. ಹುಮಾಯೂನನ ಸಹೋದರಿ ಗುಲ್‌ಬದಾನ್ ಬೇಗಂ, ಷಹಜಹಾನನ ಮಗಳಾದ ಜಹನಾರ, ಶಿವಾಜಿಯ ತಾಯಿಯಾದ ಜೀಜಾಬಾಯಿ ಮುಂತಾದವರು ವಿವಿಧ ಪದವಿಗಳನ್ನು ನಿರ್ವಹಿಸಿದ್ದರು.



ಮಧ್ಯಕಾಲ ಭಾರತದ ಮಹಿಳೆಯರ ಸಾಮಾನ್ಯ ಸ್ಥಿತಿಯ ಕುರಿತು ಟಿಪ್ಪಣಿ ಬರೆಯಿರಿ.

## ಜಾತಿ ವ್ಯವಸ್ಥೆ

ಹಿಂದಿನ ಕಾಲಗಳಂತೆ ಮಧ್ಯಕಾಲದಲ್ಲೂ ಜಾತಿ ಆಧಾರಿತ ಉಚ್ಛನೀಚತ್ವವು ಅಸ್ತಿತ್ವದಲ್ಲಿತ್ತು. ಬ್ರಾಹ್ಮಣರು ಸಮಾಜದಲ್ಲಿ ಉನ್ನತ ಸ್ಥಾನವನ್ನು ಹೊಂದಿದ್ದರು. ಜಾತಿಗಳಲ್ಲಿ ಉಂಟಾದ ಹೆಚ್ಚಳವು ಆ ಕಾಲದ ಪ್ರಧಾನ ವಿಶೇಷತೆಯಾಗಿದೆ. ಹೊಸ ಉದ್ಯೋಗ ಕೂಟಗಳ ರೂಪೀಕರಣದಿಂದ ಈ ಉದ್ಯೋಗಗಳಲ್ಲಿ ತೊಡಗಿಸಿಕೊಂಡವರು ಪ್ರತ್ಯೇಕ ಜಾತಿಗಳಾಗಿ ಬದಲಾದರು. ಮೊಗಲ್ ಆಡಳಿತಾಧಿಕಾರಿಯಾಗಿದ್ದ ಬಾಬರ್ ತನ್ನ ನೆನಪಿನ ಟಿಪ್ಪಣಿಗಳಲ್ಲಿ ಉದ್ಯೋಗ ಕೂಟ ಹಾಗೂ ಜಾತಿಗಳ ಕುರಿತು ಕೆಳಗಿನಂತೆ ಪರಾಮರ್ಶಿಸಿರುವನು.

"ಹಿಂದೂಸ್ಥಾನದ ಇನ್ನೊಂದು ವಿಶೇಷತೆಯು ವಿವಿಧ ಉದ್ಯೋಗಗಳಲ್ಲಿ ಪ್ರಾವೀಣ್ಯವುಳ್ಳ ಅನೇಕ ಕೆಲಸಗಾರರಿದ್ದರು ಎಂಬುದಾಗಿದೆ. ಪ್ರತಿಯೊಂದು ಉದ್ಯೋಗದಲ್ಲಿ ತೊಡಗಿಸಿಕೊಂಡವರು ಆಯಾಯ ಜಾತಿಯಲ್ಲಿ ಗುರುತಿಸಿಕೊಂಡಿದ್ದರು. ಪರಂಪರಾಗತವಾದ ಈ ಉದ್ಯೋಗಗಳನ್ನು ಮುಂದಿನ ತಲೆಮಾರಿಗೆ ಹಸ್ತಾಂತರಿಸಲಾಯಿತು...............ಆಗ್ರಾದಲ್ಲಿ ತನ್ನ ಕಟ್ಟಡ ನಿರ್ಮಾಣ ಚಟುವಟಿಕೆಗಳಲ್ಲಿ ಸುಮಾರು 680ಕ್ಕಿಂತಲೂ ಹೆಚ್ಚು ಶಿಲ್ಪಿಗಳು ಯಾವಾಗಲೂ ಕೆಲಸಮಾಡುತ್ತಿದ್ದರು. ಈ ರೀತಿಯಲ್ಲಿ ಹಿಂದೂಸ್ಥಾನದ ಎಲ್ಲ ಸ್ಥಳಗಳಲ್ಲೂ ಅನೇಕ ಕಾರ್ಮಿಕ ಒಕ್ಕೂಟಗಳಿದ್ದುವು"

ಬಾಬರ್‌ನಾಮ




ಉತ್ತರ ಭಾರತಕ್ಕೆ ಸಮಾನವಾದ ಉದ್ಯೋಗ ಆಧಾರಿತ ಜಾತಿವಿಭಜನೆಯು ದಕ್ಷಿಣ ಭಾರತದಲ್ಲೂ ಅಸ್ತಿತ್ವದಲ್ಲಿತ್ತು. ದಕ್ಷಿಣ ಭಾರತದಲ್ಲಿ ಜಾತಿಗಳನ್ನು ಸಾಮಾನ್ಯವಾಗಿ ಇಡಂಗೈ ಮತ್ತು ವಲಂಗೈ ಎಂದು ಎರಡಾಗಿ ವಿಭಜಿಸಲಾಗಿತ್ತು. ವ್ಯಾಪಾರ, ಕೈಕಸುಬು ಇತ್ಯಾದಿ ವಲಯಗಳಲ್ಲಿ ತೊಡಗಿಸಿಕೊಂಡವರನ್ನು ಸಾಮಾನ್ಯವಾಗಿ ಇಡಂಗೈ ಜಾತಿಗಳೆಂದೂ ಕೃಷಿ ಚಟುವಟಿಕೆಗಳಲ್ಲಿ ತೊಡಗಿಸಿಕೊಂಡವರನ್ನು ವಲಂಗೈ ಜಾತಿಗಳೆಂದೂ ಕರೆಯುತ್ತಿದ್ದರು.

ಮಧ್ಯಕಾಲ ಭಾರತದ ಸಾಮಾಜಿಕ ಜೀವನದ ಕುರಿತು ಚರ್ಚಿಸಿ ಟಿಪ್ಪಣಿ ತಯಾರಿಸಿರಿ.



ಮಧ್ಯಕಾಲ ಜಗತ್ತಿನಲ್ಲಿ ಭಾರತವು ಉತ್ತಮ ಆರ್ಥಿಕ ಬೆಳವಣಿಗೆಯನ್ನು ಹೊಂದಿದ ದೇಶವಾಗಿತ್ತು. ಆರ್ಥಿಕ ರಂಗದಲ್ಲಿ ಉಂಟಾದ ಬೆಳವಣಿಗೆಯು ಕಲೆ ಹಾಗೂ ಸಾಂಸ್ಕೃತಿಕ ಕ್ಷೇತ್ರದ ಬೆಳವಣಿಗೆಗೆ ಸಹಾಯ ಮಾಡಿತು. ಈ ಸಮೃದ್ಧಿಯು ಆ ಕಾಲದಲ್ಲಿ ಉಂಟಾದ ದೇವಾಲಯಗಳ ಹಾಗೂ ಸ್ಮಾರಕಗಳ ನಿರ್ಮಾಣಕ್ಕೆ ಆಧಾರವಾಯಿತು. ಆದರೆ ಆರ್ಥಿಕ ಬೆಳವಣಿಗೆಯನ್ನು ಒಂದು ಚಿಕ್ಕ ವಿಭಾಗದ ಜನರು ಮಾತ್ರವೇ ಅನುಭವಿಸಿದರು. ಹೆಚ್ಚಿನ ಜನರು ದಾರಿದ್ರ್ಯದಿಂದ ಬದುಕುತ್ತಿದ್ದರು.






## ಪ್ರಧಾನ ಕಲಿಕಾ ಸಾಧನೆಗಳಲ್ಲಿ ಒಳಪಡುವವುಗಳು

- ಮಧ್ಯಕಾಲ ಭಾರತದ ಕೃಷಿ ಅಭಿವೃದ್ಧಿಯನ್ನು ಅವಲೋಕಿಸುವರು.
- ಕೃಷಿ ಅಭಿವೃದ್ಧಿಗಾಗಿ ಆಡಳಿತಾಧಿಕಾರಿಗಳು ಕೈಗೊಂಡ ಕ್ರಮಗಳನ್ನು ವಿಶದೀಕರಿಸುವರು.
- ಮಧ್ಯಕಾಲ ಭಾರತದಲ್ಲಿ ಕೈಕಸುಬು, ಕರಕುಶಲ ಎಂಬೀ ವಲಯಗಳಲ್ಲಿ ಉಂಟಾದ ಬೆಳವಣಿಗೆಯನ್ನು ವಿಶ್ಲೇಷಿಸುವರು.

- ಮಧ್ಯಕಾಲ ಭಾರತದೊಂದಿಗೆ ವ್ಯಾಪಾರವನ್ನು ಹೊಂದಿದ ದೇಶಗಳನ್ನೂ ಆ ಕಾಲದ ಬಂದರುಗಳನ್ನೂ ಪಟ್ಟಿಮಾಡುವರು.
- ಮಧ್ಯಕಾಲ ಭಾರತದ ನಗರಗಳ ಹಾಗೂ ನಗರಗಳ ಜನಸಂಖ್ಯೆಯ ಹೆಚ್ಚಳಕ್ಕೆ ಕಾರಣವಾದ ಸನ್ನಿವೇಶಗಳನ್ನು ವಿಶ್ಲೇಷಿಸುವರು.
- ಮಧ್ಯಕಾಲ ಭಾರತದ ಸಾಮಾಜಿಕ ವ್ಯವಸ್ಥೆಯ ಪ್ರಧಾನ ವಿಶೇಷತೆಗಳನ್ನು ವಿಶ್ಲೇಷಣೆ ಮಾಡುವರು.



## ಮೌಲ್ಯನಿರ್ಣಯ ಮಾಡುವ

- ಮಧ್ಯಕಾಲ ಭಾರತದ ಆರ್ಥಿಕ ಬೆಳವಣಿಗೆಯು ಕೃಷಿ ವಲಯದ ಅಭಿವೃದ್ಧಿಗೆ ಹೇಗೆ ಸಹಾಯಕವಾಯಿತು? ಚರ್ಚಿಸಿರಿ.
- ಸುಲ್ತಾನರ ಹಾಗೂ ಮೊಗಲರ ಕಾಲದಲ್ಲಿ ಭಾರತದ ಜನರ ಪ್ರಧಾನ ಜೀವನ ಮಾರ್ಗಗಳು ಯಾವುವು? ಪರಿಶೀಲಿಸಿರಿ.
- ಹೊಸ ತಾಂತ್ರಿಕತೆಗಳ ಸಂಶೋಧನೆಯು ಉದ್ಯೋಗ ಹಾಗೂ ಕೈಗಾರಿಕಾ ವಲಯಗಳ ಬೆಳವಣಿಗೆಯಲ್ಲಿ ಹೇಗೆ ಪ್ರಭಾವಬೀರಿತು? ವಿಶ್ಲೇಷಿಸಿರಿ.
- ಮಧ್ಯಕಾಲ ಭಾರತದ ಆಡಳಿತಾಧಿಕಾರಿಗಳು ವಾಣಿಜ್ಯದ ಅಭಿವೃದ್ಧಿಗಾಗಿ ಕೈಗೊಂಡ ಕ್ರಮಗಳು ಯಾವುವು?
- ಮಧ್ಯಕಾಲ ಭಾರತದ ಎರಡು ಪ್ರಧಾನ ವ್ಯಾಪಾರಿ ವಿಭಾಗಗಳು ಯಾವುವು? ಅವರು ತಮ್ಮನ್ನು ತೊಡಗಿಸಿಕೊಂಡ ವ್ಯಾಪಾರ ಕ್ಷೇತ್ರಗಳು ಯಾವುವು?
- ಮಧ್ಯಕಾಲ ಭಾರತದ ಕೃಷಿಕರ ಜೀವನದ ಕುರಿತು ಟಿಪ್ಪಣಿ ಬರೆಯಿರಿ.
- ಮಧ್ಯಕಾಲ ಭಾರತದ ಸಾಮಾಜಿಕ-ಆರ್ಥಿಕ ವ್ಯವಸ್ಥೆಯಲ್ಲಿ ಮಹಿಳೆಯರ ಸ್ಥಿತಿ ಏನಾಗಿತ್ತು? ಪರಿಶೀಲಿಸಿರಿ.



## ಮುಂದುವರಿದ ಚಟುವಟಿಕೆಗಳು

- ಮಧ್ಯಕಾಲ ಭಾರತದ ಆರ್ಥಿಕ-ಸಾಮಾಜಿಕ ಸನ್ನಿವೇಶಗಳ ಕುರಿತು ಸೆಮಿನಾರ್ ಪೇಪರ್ ತಯಾರಿಸಿ ಮಂಡಿಸಿರಿ.